ಕನ್ನಡ ವಾರ ಪತ್ರಿಕೆ ಬದರ್ "ಮಸೀಹೆ ಮೌಊದ್(ಅ) ವಿಶೇಶ ಸಂಚಿಕೆ"


| ವಿಷಯ ಸೂಚಿಕೆ | | ಪುಟ |
|---|---|---|
| 1. | ಅಲ್ಲಾಹನ ಉಪದೇಶ | 02 |
| 2. | ಪ್ರವಾದಿ ಮುಹಮ್ಮದ್(ಸ) ಅವರ ಉಪದೇಶಗಳು | 02 |
| 3. | ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು | 02 |
| 4. | ಮಹೋನ್ನತವಾದ ಸರ್ವಧರ್ಮ ಸಮ್ಮೇಳನ" ಲಾಹೋರಿನ ವಿಶ್ವಾಸ ವರ್ಧಕ ವಿವರಣೆ. | 03 |
| 5. | "ಜಂಗೆ ಮುಖದ್ದಸ್" (ಪವಿತ್ರ ಸಮರ) | 08 |
| 6. | ಶತ್ರುಗಳ ವಿನಾಶದ ಬೆಳಕಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರು ಸತ್ಯತೆ. | 13 |


# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.
إِنَّ السُّمُومَ لَشَرُّ مَا فِي الْعَالَمِ ❁ شَرُّ السُّمُومِ عَدَاوَةُ الصُّلَحَاءِ

ಪವಿತ್ರ ಖುರ್‌ಆನ್, ಹದೀಸ್‌ಗಳ ಹಾಗೂ ಗತ ಗ್ರಂಥಗಳ ಭವಿಷ್ಯವಾಣಿಗಳ ಪ್ರಕಾರ ಅಲ್ಲಾಹನು ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೆ 14ನೇ ಶತಮಾನದ ಪ್ರಾರಂಭದಲ್ಲಿ ಅದು ಅತ್ಯಂತ ಅಂಧಕಾರಮಯ ಹಾಗೂ ಅವಿಶ್ವಾಸ ಧರ್ಮಭ್ರಷ್ಟತೆಯ ಕಾಲವಾಗಿತ್ತು. ಇಮಾಮ್ ಮಹ್‌ದಿ, ಮಸೀಹ್ ಮೌಊದ್‌ರನ್ನಾಗಿ ಅವತರಿಸಿದನು.

**ಲಿಯುಝ್‌ಹಿರುಹು ಅಲದ್ದೀನಿ ಕುಲ್ಲಿಹೀ.** (ಅಸ್ಸಫ್:10) ಅಂದರೆ ಜಗತ್ತಿನ ಎಲ್ಲಾ ಧರ್ಮಗಳ ಮೇಲೆ ವಿಜಯ ಸಾಗಿಸುವುದಾಗಿದೆ. ಮತ್ತು ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಆಗಮನದ ಉದ್ದೇಶವು ಹೀಗೆ ವರ್ಣಿಸಿದ್ದಾರೆ: **ಲೌಕಾನಲ್ ಈಮನು ಇಂದಸ್ಸುರೈಯ ಲನಾಲಹೂ ರಿಜಾಲನ್ ಮಿನ್ ಹಾಉಲಾಯಿ.** (ಬುಖಾರಿ ಕಿತಾಬುತ್ತಫ್‌ಸೀರ್ ಸೂರಃ ಜುಮುಅ)

ಅಂದರೆ: ಈಮಾನ್(ವಿಶ್ವಾಸ) ಭೂಮಿಯಿಂದ ಹೊರಟು ಸುರೈಯ(ವೃಷಭರಾಶಿಯಲ್ಲಿಯ ಸಣ್ಣ ನಕ್ಷತ್ರಪುಂಜಕೃತಿಕ) ನಕ್ಷತ್ರಕ್ಕೆ ತಲುಪಿದ್ದರೂ. ಅಲ್ಲಿಂದ ಕೆಲಜನರು ಅದನ್ನು ಮತ್ತೆ ಭೂಮಿಯಲ್ಲಿ ಪುನಃ ಸ್ಥಾಪಿಸುವರು. ಒಂದು ವರದಿಯಲ್ಲಿ **ರಜುಲುನ್** ಪದವು ಬಂದಿರುತ್ತದೆ ಅಂದರೆ ಓರ್ವ ಮಹೋನ್ನತ ವ್ಯಕ್ತಿ ಅಂದರೆ ಮಸೀಹ್ ಮೌಊದ್, ಮಹ್‌ದಿ ಮೌಊದ್ ಅದನ್ನು ಭೂಮಿಯ ಮೇಲೆ ಸ್ಥಾಪಿಸುವರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಂತಹದೊಂದು ಕಾಲದಲ್ಲಿ ನಾನು ಪ್ರಕಟವಾಗಿದ್ದೇನೆ. ಆಗ ಇಸ್ಲಾಮಿನ ವಿಶ್ವಾಸಗಳು ಭಿನ್ನಾಭಿಪ್ರಾಯಗಳಿಂದ ತುಂಬಿ ಹೋಗಿದ್ದವು ಯಾವ ವಿಶ್ವಾಸವು ಭಿನ್ನಮತದಿಂದ ಹೊರತಾಗಿರಲಿಲ್ಲ ವಾಸ್ತವಿಕತೆಯನ್ನು ಪ್ರಕಟಪಡಿಸುವುದು ಅದರ ಪುರಾವೆಗಳನ್ನು ಒದಗಿಸಲು ನನಗೆ ಅವಶ್ಯವಾಗಿರಲಿಲ್ಲವೇ ಏಕೆಂದರೆ ಅಗತ್ಯತೆಯು ಸ್ವಯಂ ಪುರಾವೆಯಾಗಿದೆ. (ಝುರೂರತುಲ್ ಇಮಾಮ್, ರೂಹಾನಿ ಖಝಾಯೀನ್ ಸಂಪುಟ–13, ಪುಟ–495)

ಅವರು(ಅ) ಹೇಳಿದರು: ಅಲ್ಲಾಹನು ಈ ಕಾಲವನ್ನು ಅಂಧಾಕಾರದಲ್ಲಿ ಕಂಡು ಮತ್ತು ಲೊಕವನ್ನು ಅವಿಶ್ವಾಸ, ಬಹುದೇವಾರಾಧನೆ, ಅಲಕ್ಷವಿಕೆಯಲ್ಲಿ ಮುಳುಗಿದ್ದನ್ನು ಕಂಡು ವಿಶ್ವಾಸ, ಸತ್ಯತೆ ಹಾಗೂ ಭಯಭಕ್ತಿ ಮತ್ತು ಸಜ್ಜನಿಕೆಯನ್ನು ಅವಗಣನೆಗೆ ಗುರಿಯಾಗಿದ್ದನ್ನು ಕಂಡು ನನಗೆ ಕಳುಹಿಸಿದ್ದಾನೆ. ಹೀಗೆ ಲೋಕದಲ್ಲಿ ಮತ್ತೊಮ್ಮೆ ಜ್ಞಾನ, ನಡತೆ ಮತ್ತು ನೈತಿಕತೆ ಹಾಗೂ ವಿಶ್ವಾಸವನ್ನು ಸ್ಥಾಪಿಸಲು ಕಳುಹಿಸಿದ್ದಾನೆ. (ಆಯೀನೆ ಕಮಾಲಾತೆ ಇಸ್ಲಾಮ್, ರೂಹಾನಿ ಖಝಾಯೀನ್ ಸಂಪುಟ–5, ಪುಟ–251)

ಹೇಳಿದರು: ನಾನು ಭೂಮಿಯ ಮೇಲಿರುವ ಎಲ್ಲಾ ಜನರ ಕಡೆಗೆ ಅವರು ಏಶಿಯದವರಾಗಲಿ ಅಥವಾ ಯೂರೋಪಿನವರಾಗಲಿ ಅಥವಾ

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಅಮೇರಿಕಾದವರಾಗಲಿ ಕಳುಹಿಸಲ್ಪಟ್ಟಿದ್ದೇನೆ. (ತಿರ್‌ಯಾಖುಲ್ ಖುಲೂಬ್, ರೂಹಾನಿ ಖಝಾಯೀನ್, ಸಂಪುಟ–15, ಪುಟ–515)

ಅವರು ಹೇಳುತ್ತಾರೆ: ನೀವು ಸತ್ಯವಿಶ್ವಾಸಿಗಳಾಗಿದ್ದರೆ ಕೃತಜ್ಞರಾಗಿರಿ ಮತ್ತು ಕೃತಜ್ಞತೆಯಿಂದ ಸಾಷ್ಟಾಂಗ ಮಾಡಿರಿ ಏಕೆಂದರೆ ಆ ಕಾಲವನ್ನು ನಿರೀಕ್ಷಿಸುತ್ತಾ ನಿಮ್ಮ ಪೂರ್ವಜರು ಅಗಿಲಿ ಹೋದರು ಮತ್ತು ಅಸಂಖ್ಯಾತ ಆತ್ಮಗಳು ಆ ಬಯಕೆಯನ್ನು ಒಳಗೊಂಡು ಪ್ರಯಾಣಿಸಿದರು. ಆ ಸಮಯವನ್ನು ನೀವು ಪಡೆದಿದ್ದೀರಿ ಅದನ್ನು ಗೌರವಿಸುವುದು, ಅಗೌರವಿಸುವುದು, ಅದರಿಂದ ಪ್ರಯೋಜನ ಪಡೆಯುವುದು ಅಥವಾ ಬಿಡುವುದು ನಿಮ್ಮ ಕೈಯಲ್ಲಿದೆ. ನಾನು ಇದನ್ನು ಮತ್ತೆ ಮತ್ತೆ ಹೇಳುವೆನು. ಇದನ್ನು ಸ್ಪಷ್ಟಪಡಿಸುವುದಕ್ಕೆ ನಾನು ನಿಲ್ಲುವುದಿಲ್ಲ. ಧರ್ಮವನ್ನು ನಿಮ್ಮ ಹೃದಯಗಳಲ್ಲಿ ಹೊಸದಾಗಿ ಸ್ಥಾಪಿಸಲು ನನಗೆ ಈ ಸಮಯದಲ್ಲಿ ಲೋಕೋದ್ಧಾರಕನನ್ನಾಗಿ ಕಳುಹಿಸಲಾಗಿದೆ. (ಫತಹ್ ಇಸ್ಲಾಮ್, ರೂಹಾನಿ ಖಝಾಯೀನ್, ಸಂಪುಟ–3, ಪುಟ–8)

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಮಹೋನ್ನತವಾದ ಗುರಿಯಾದ ಇಸ್ಲಾಮಿನ ವಿಜಯದ ಪರಿಪೂರ್ಣತೆಗಾಗಿ ಅಲ್ಲಾಹನೊಡನೆ ಇಷ್ಟೊಂದು ದುಃಖದಿಂದ ಮಾಡಿದ ಪ್ರಾರ್ಥನೆಗಳ ರೀತಿಯು ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಬಿಟ್ಟರೆ ಮತ್ತೆ ಯಾವ ಪ್ರವಾದಿಯಲ್ಲೂ ಕಾಣಲು ಸಾಧ್ಯವಿಲ್ಲ. ಅದರ ಜೊತೆ ಜೊತೆಯಲ್ಲಿಯೇ ಅವರು(ಅ) ಲೇಖನಗಳನ್ನು ಬರೆದರು, ಉಪನ್ಯಾಸಗಳನ್ನು ನೀಡಿದರು, ಚರ್ಚೆಗಳನ್ನು ಏರ್ಪಡಿಸಿದರು. ಸಾವಿರಾರು ಸಂಖ್ಯೆಯಲ್ಲಿ ಜಾಹಿರಾತುಗಳನ್ನು ಪ್ರಕಟಿಸಿದರು. 80ಕ್ಕಿಂತ ಹೆಚ್ಚು ಗ್ರಂಥಗಳನ್ನು ರಚಿಸಿದರು. ಅವರು(ಅ) ತಮ್ಮ ಪುಸ್ತಕ ಹಾಗೂ ಜಾಹಿರಾತುಗಳಲ್ಲಿ ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿವಸಲ್ಲಮ್, ಪವಿತ್ರ ಖುರ್‌ಆನ್ ಮತ್ತು ತನ್ನ ಸತ್ಯಸಂಧತೆಯನ್ನು ಸಾಬೀತುಪಡಿಸಲು ಹಲವು ಬಹುಮಾನಗಳ ಪಂಥಾಹ್ವಾನವನ್ನು ನೀಡಿದರು. ನಾವು ಈ ವಿಷಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅವರು ನೀಡಿದ ಪಂಥಾಹ್ವಾನದ ಕುರಿತು ವಿವರಿಸುವೆವು.

1864 ರಿಂದ 1867ರವರೆಗೆ ಹಝ್ರತ್ ಮಸೀಹ್ ಮೌಊದ್(ಅ) ಅವರು ಕಾರಣಾಂತಗಳಿಂದ ಸಿಯಾಲ್‌ಕೋಟ್‌ನಲ್ಲಿ ನೌಕರಿ ಮಾಡಬೇಕಾಯಿತು. ಇಲ್ಲಿಂದ ಅವರ ಪ್ರಚಾರ ಕಾರ್ಯ ಪ್ರಾರಂಭವಾಗುತ್ತದೆ. ಕ್ರೈಸ್ತ ಪಾದರಿಗಳಿಗೆ, ಮುಸ್ಲಿಮ್ ಮವಲವಿಗಳಿಗೆ ಮತ್ತಿತರರಿಗೆ ಸೋಲಿನ ಮೇಲೆ ಸೋಲು ನೀಡುತ್ತಾರೆ. ಆದರೆ ಅವರ ಯಾವ ಆಟವು ಹಝ್ರತ್ ಮಸೀಹ್ ಮೌಊದ್(ಅ)ರ ಎದುರಿನಲ್ಲಿ ನಡೆಯುತ್ತಿರಲಿಲ್ಲ. ಸಿಯಾಲ್‌ಕೋಟ್‌ನ ಧಾರ್ಮಿಕ ವಾತಾವರಣದಲ್ಲಿ ತಾವು ಮೇಲುಗೈ ಸಾಧಿಸಿದ್ದರು. ಓರ್ವ ಪ್ರಖ್ಯಾತ ಪಾದರಿ ಬಟ್ಲರ್ ಎಂಬವರು ಅವರ(ಅ) ಶಿಷ್ಯರಾದರು. ಅವರ ಮಾತನ್ನು ಕೇಳಲು ಹೆಚ್ಚು ಹೆಚ್ಚಾಗಿ ಅವರ ಬಳಿ ಬರಲು ಪ್ರಾರಂಭಿಸಿದನು. ಕೆಲವು ದ್ವೇಷ ಪೂರಿತ ಜನರು ಅವರನ್ನು ತಡೆಯಲು ಬಯಸಿದರು. ಆದರೆ ಆ ಪಾದರಿ ಸಾಹೇಬರು ಅವರಿಗೆ ಉತ್ತರ ನೀಡಿದರು: ಇವರು ಮಹೋನ್ನತ ಮನುಷ್ಯರಾಗಿದ್ದಾರೆ. ಇವರ ಸರಿಸಾಟಿ ಯಾರೂ ಇಲ್ಲ ಇವರಿಗೆ ನೀವು ಅರಿಯುವುದಿಲ್ಲ. ನಾನು ಬಹುಚನ್ನಾಗಿ ಅರಿತಿದ್ದೇನೆ. (ತಾರೀಖೆ ಅಹ್ಮದಿಯತ್, ಸಂಪುಟ–1, ಪುಟ–93, 2007 ಎಡಿಷನ್, ಖಾದಿಯಾನ್)

1872ರಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಲೇಖನಿಯ ಜಿಹಾದ್ ಪ್ರಾರಂಭಿಸಿದರು. ಬೆಂಗಳೂರಿನ ಹತ್ತು ದಿನಗಳ ಪತ್ರಿಕೆ 'ಮನ್‌ಸೂರಿ ಮೊಹಮ್ಮದಿ'ಯಲ್ಲಿ 20 ಅಗಸ್ಟ್ 1872ರಲ್ಲಿ ಅವರ ಪ್ರಥಮ ಪ್ರಬಂಧವು ಪ್ರಕಟವಾಯಿತು. ಪ್ರಬಂಧವೇನಿತ್ತು ಎಂದರೆ ಎಲ್ಲಾ ಧರ್ಮಗಳ ಮೇಲೆ ಇಸ್ಲಾಮಿನ ಪ್ರಾಮುಖ್ಯತೆ ಮತ್ತು ವಿಶೇಷತೆಗಳ ಘೋಷಣೆಯಾಗಿತ್ತು. ಅವರು(ಅ) ಬರೆದರು ಎಲ್ಲಾ ಮಾನವೀಯ ವ್ಯವಹಾರಗಳಲ್ಲಿ ಮತ್ತು ಸಂಬಂಧಗಳಲ್ಲಿ ಸತ್ಯವು ಎಲ್ಲಾ ಗುಣಗಳ ಬುನಾದಿಯಾಗಿರುತ್ತದೆ. ಆದ್ದರಿಂದ ಒಂದು ಸದ್ಧರ್ಮವನ್ನು ಗುರುತಿಸಲಿರುವ ಸರಳವಾದ ಮಾರ್ಗವೇನಂದರೆ ಆ ಧರ್ಮವು ಸತ್ಯವನ್ನು ಅನುಸರಿಸಲು ಎಷ್ಟೊಂದು ಒತ್ತಾಯಪೂರ್ವಕ ಹಾಗೂ ಪ್ರಭಾವಪೂರ್ಣ ರೀತಿಯಲ್ಲಿ ಉಪದೇಶ ನೀಡಿವೆ ಎಂಬುದಾಗಿದೆ. ಅವರು(ಅ) ಎಲ್ಲಾ ಧರ್ಮದವರನ್ನು ಪಂಥಾಹ್ವಾನ ನೀಡಿದರು. ಅವರು(ಅ) ಪ್ರತಿಯೊಬ್ಬ ಮುಸ್ಲಿಮೇತರನಗೆ 500 ರೂಪಾಯಿ ಬಹುಮಾನ ರೂಪವಾಗಿ ನೀಡಲು ಸಿದ್ಧರಾದರು. ಯಾರು ತಮ್ಮ ವಿಶ್ವಾಸಿಕ ಧರ್ಮ ಗ್ರಂಥಗಳಿಂದ

*(ಉಳಿದ ಭಾಗ ಪುಟ ಸಂಖ್ಯೆ 18ರಲ್ಲಿ ಮುಂದುವರಿಸಲಾಗಿದೆ)*

**ದೇವನಾಣೆ, ಅವನೇ ನನ್ನನ್ನು ಕಳುಹಿಸಿರುವನು. ಅವನ ಮೇಲೆ ಸುಳ್ಳು ಹೇಳುವುದು ಶಾಪಗ್ರಸ್ತರ ಕೆಲಸವಾಗಿದೆ. ಅವನೇ ನನ್ನನ್ನು ವಾಗ್ದತ್ತ ಮಸೀಹನನ್ನಾಗಿ ಕಳುಹಿಸಿದ್ದಾನೆ. ನಾನು ಬೈತುಲ್ಲಾಹ್ (ಕಅಬ) ದಲ್ಲಿ ನಿಂತು ಆಣೆ ಮಾಡಿ ಹೇಳಬಲ್ಲೆ. ಆ ಪವಿತ್ರ ದಿವ್ಯವಾಣಿ (ವಹೀ) ಅವತರಿಸುತ್ತಿರುವುದು ಆ ದೇವನ (ಅಲ್ಲಾಹನ) ವಾಣಿಯೇ ಆಗಿದೆ. ಅವನು ಹಝ್ರತ್ ಮೂಸಾ(ಅ), ಹಝ್ರತ್ ಈಸಾ(ಅ) ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಮೇಲೆ ತನ್ನ ದಿವ್ಯವಾಣಿ ಅವತರಿಸಿದ್ದನು.**

## ಅಲ್ಲಾಹನ ಉಪದೇಶ

❁ اِهۡدِنَا الصِّرَاطَ الۡمُسۡتَقِيۡمَ ۝ صِرَاطَ الَّذِيۡنَ اَنۡعَمۡتَ عَلَيۡهِمۡ ۙ غَيۡرِ الۡمَغۡضُوۡبِ عَلَيۡهِمۡ وَلَا الضَّآلِّيۡنَ ۝ (ಅಲ್‌ಫಾತಿಹ: 6,7)

ನೀನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸು. ನಿನ್ನ ಅನುಗ್ರಹಕ್ಕೆ ಪಾತ್ರರಾದವರ. ಕ್ರೋಧಕ್ಕೆ ಈಡಾಗದವರ ಮತ್ತು ದಾರಿತಪ್ಪದವರ ಮಾರ್ಗದಲ್ಲಿ.

❁ وَاِذۡ اَخَذَ اللّٰهُ مِيۡثَاقَ النَّبِيّٖنَ لَمَاۤ اٰتَيۡتُكُمۡ مِّنۡ كِتٰبٍ وَّحِكۡمَةٍ ثُمَّ جَآءَكُمۡ رَسُوۡلٌ مُّصَدِّقٌ لِّمَا مَعَكُمۡ لَتُؤۡمِنُنَّ بِهٖ وَلَتَنۡصُرُنَّهٗ ؕ قَالَ ءَاَقۡرَرۡتُمۡ وَاَخَذۡتُمۡ عَلٰى ذٰلِكُمۡ اِصۡرِىۡ ؕ قَالُوۡۤا اَقۡرَرۡنَا ؕ قَالَ فَاشۡهَدُوۡا وَاَنَا مَعَكُمۡ مِّنَ الشّٰهِدِيۡنَ

(ಆಲಿ ಇಮ್ರಾನ್:82)

ಅಲ್ಲಾಹನು ಪ್ರವಾದಿಗಳಿಂದ ಒಪ್ಪಂದ ಪಡೆದ ಸಂದರ್ಭ (ಜ್ಞಾಪಿಸಿರಿ) – 'ನಾನು ನಿಮಗೆ ಯಾವುದೇ ಗ್ರಂಥವನ್ನೂ ಸುಜ್ಞಾನವನ್ನೂ ನೀಡಿದ ಬಳಿಕ ನಿಮ್ಮ ಬಳಿಯಿರುವುದನ್ನು (ಸಂದೇಶವನ್ನು) ದೃಢೀಕರಿಸುವ ಒಬ್ಬ ಪ್ರವಾದಿ ನಿಮ್ಮ ಹತ್ತಿರ ಬಂದರೆ ಕಡ್ಡಾಯವಾಗಿಯೂ ನೀವು ಆತನನ್ನು ನಂಬಿ ಆತನಿಗೆ ನೆರವೀಯಬೇಕು' (ಎಂದು ಹೇಳುತ್ತಾ) ಅವನು ಕೇಳಿದನು: 'ನಿಮಗೆ ಸಮ್ಮತಿಯೇ?; ನಾನು ನಿಮ್ಮ ಮೇಲೆ ಹೊರಿಸಿದ ಹೊಣೆಗಾರಿಕೆಯನ್ನು ನಿಭಾಯಿಸಲು ನೀವು ಒಪ್ಪಿಕೊಂಡಿದ್ದೀರಾ?' ಅವರು ಉತ್ತರಿಸಿದರು: 'ನಾವು ಒಪ್ಪಿಕೊಂಡಿದ್ದೇವೆ.' ಅಲ್ಲಾಹನು ಹೇಳಿದನು: 'ನೀವು ಸಾಕ್ಷ್ಯವಹಿಸಿರಿ, ನಿಮ್ಮ ಜೊತೆ ನಾನು ಸಹ ಸಾಕ್ಷಿಗಳ ಪೈಕಿಯಲ್ಲಿ ಸೇರುತ್ತೇನೆ.'

❁ وَمَنۡ يُّطِعِ اللّٰهَ وَالرَّسُوۡلَ فَاُولٰٓـئِكَ مَعَ الَّذِيۡنَ اَنۡعَمَ اللّٰهُ عَلَيۡهِمۡ مِّنَ النَّبِيّٖنَ وَالصِّدِّيۡقِيۡنَ وَالشُّهَدَآءِ وَالصّٰلِحِيۡنَ ۚ وَحَسُنَ اُولٰٓـئِكَ رَفِيۡقًا (ಅನ್ನಿಸಾಅ್:70)

ಯಾರಾದರೂ ಅಲ್ಲಾಹನಿಗೆ ವಿಧೇಯರಾಗಿ ಈ ಸಂದೇಶವಾಹಕರನ್ನು ಅನುಸರಿಸಿದರೆ, ಅವರು ಅಲ್ಲಾಹನು ಅನುಗ್ರಹಿಸಿದ ಪ್ರವಾದಿಗಳು, ಸತ್ಯಸಂಧರು, ಹುತಾತ್ಮರು ಮತ್ತು ಸಜ್ಜನರಲ್ಲಿ ಸೇರುವರು. ಅವರು ಅತ್ಯುತ್ತಮ ಸಂಗಾತಿಗಳಾಗಿದ್ದಾರೆ.

## ಪ್ರವಾದಿ ಮುಹಮ್ಮದ್(ಸ) ಅವರ ಉಪದೇಶಗಳು

۞ عَنْ اَبِيْ هُرَيْرَةَ رَضِيَ اللهُ عَنْهُ عَنِ النَّبِيِّ صَلَّى اللهُ عَلَيْهِ وَسَلَّمَ قَالَ : لَا تَقُوْمُ السَّاعَةُ حَتّٰى يَنْزِلَ عِيْسَى بْنُ مَرْيَمَ حَكَمًا مُقْسِطًا وَاِمَامًا عَدْلًا فَيَكْسِرُ الصَّلِيْبَ وَيَقْتُلُ الْخِنْزِيْرَ وَيَضَعُ الْجِزْيَةَ وَيَفِيْضُ الْمَالَ حَتّٰى لَا يَقْبَلَهُ اَحَدٌ

(ಸನನ್ ಇಬ್ನೆ ಮಾಜ ಕಿತಾಬುಲ್ ಫಿತನ್ ಬಾಬ್ ಫಿತ್ನತುದ್ದಜ್ಜಾಲ್ ವ ಖುರೂಜ್ ಈಸಬ್ನೆ ಮರ್‌ಯಮ್ ವಖುರೂಜ್ ಯಾಜೂಜ್ ವ ಮಾಜೂಜ್)

ಅಂದರೆ: ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ನುಡಿದರು ಈಸ ಮಸೀಹರು **ಹಕಮ್**(ತೀರ್ಮಗಾರ) ಹಾಗೂ **ಅದಲ್**(ನ್ಯಾಯಧೀಶರನ್ನಾಗಿ) ಅವತರಿಸುವುದಿಲ್ಲವೋ ಅಲ್ಲಿಯ ತನಕ ಪ್ರಳಯ ಸಂಭವಿಸುವುದಿಲ್ಲ. (ಅವರು ಆಗಮಿಸಿದ ನಂತರ) ಅವರು ಶಿಲುಬೆಯನ್ನು ಮುರಿಯುವವರು, ಖಿನ್‌ಝೀರನ್ನು ಕೊಲ್ಲುವರು, ಜಝಿಯವನ್ನು ಮುಕ್ತಾಯಗೊಳಿಸುವರು ಮತ್ತು ಅವರು ಸಂಪತ್ತನ್ನು ಹಂಚುವರು ಆದರೆ ಜನರು ಆ ಸಂಪತ್ತನ್ನು ಸ್ವೀಕರಿಸಲು ಸಿದ್ಧರಾಗುವುದಿಲ್ಲ.

۞ عَنْ حُذَيْفَةَ بْنِ يَمَانٍ قَالَ : قَالَ رَسُوْلُ اللهِ صَلَّى اللهُ عَلَيْهِ وَسَلَّمَ : اِذَا مَضَتْ اَلْفٌ وَ مِائَتَانِ وَاَرْبَعُوْنَ سَنَةً يَبْعَثُ اللهُ الْمَهْدِيَّ (ಅನ್ನಜ್‌ಮುಸ್ಸಾಖಿಬ್, ಸಂಪುಟ–2, ಪುಟ–209)

ಅಂದರೆ: ಹಝ್ರತ್ ಹುಝೈಫ ಬಿನ್ ಯಮಾನ್(ರ) ವರದಿ ಮಾಡುತ್ತಾರೆ ರಸೂಲುಲ್ಲಾಹ್ ಸಲ್ಲಾಹು ಅಲೈಹಿವಸಲ್ಲಮರು ನುಡಿಯುತ್ತಾರೆ 1240ರ ನಂತರ ಅಲ್ಲಾಹನು ಮಹ್‌ದಿಯವರನ್ನು ಅವತರಿಸುವನು.

## ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು:

ನಮ್ಮ ನಬಿ(ಸ) ರವರ ನಂತರ ಅಂತ್ಯ ತೀರ್ಮಾನದ ದಿನದವರೆಗೆ ಹೊಸ ಶರಿಅತ್ (ಧರ್ಮಶಾಸ್ತ್ರ) ಅವತರಿಸುವಂತಹ ಅಥವಾ ಅವರನ್ನು ಅನುಸರಿಸದೇ ನಬಿ(ಸ) ರವರಲ್ಲಿ ಸಂಪೂರ್ಣ ತ್ಯಾಗಮಯಿಯಾಗುವ ಸ್ಥಿತಿಗೆ ತಲುಪಿ ಆಕಾಶದ ಮೇಲೆ ಅವನ ಹೆಸರು ಮುಹಮ್ಮದ್ ಹಾಗೂ ಅಹ್ಮದ್ ಎಂದು ಕರೆಯಲ್ಪಡಬೇಕು. ಅದರಂತೆಯೇ ನುಬುವ್ವತ್ ಪದನಾಮ ನೀಡಬೇಕು. **ವಮನಿದ್ದಅ ಫಖದ್ ಕಫರ** ಅದರ ರಹಸ್ಯವೇನೆಂದರೆ ಖಾತಮುನ್ನಬಿಯ್ಯೀನ್‌ನ ಭಾವಾರ್ಥದಲ್ಲಿ ಎಲ್ಲಿಯವರೆಗೆ ತನ್ನತನದ ಭಾವ ಉಳಿದಿರುವುದೋ ಅಲ್ಲಿಯವರೆಗೆ ಯಾರಾದರು ನಬಿ ಎನಿಸಿಕೊಂಡರೆ ಅವರು ಖಾತಮುನ್ನಬಿಯ್ಯೀನ್ ಮೇಲಿರುವ ಮುದ್ರೆಯನ್ನು ಒಡೆಯುವವನಾಗುವನು. ಆದರೆ ಯಾವೊಬ್ಬ ವ್ಯಕ್ತಿ ಅದೇ ಖಾತಮುನ್ನಬಿಯ್ಯೀನ್‌ನಲ್ಲಿ ಯಾವ ಮಟ್ಟಕ್ಕೆ ಲೀನವಾಗಿರಬೇಕೆಂದರೆ ತನ್ನತನವನ್ನು ಇಲ್ಲವಾಗಿಸಿ ಕೊಳ್ಳಬೇಕು. ಅವರ ಹೆಸರೇ ಪಡೆಯಬೇಕು. ಸ್ವಚ್ಛ ಕನ್ನಡಿಯಲ್ಲಿರುವ ರೀತಿ ಮುಹ್ಮದ್(ಸ) ಮುಖ ಪ್ರತಿಬಿಂಬಿತವಾಗಿರಬೇಕು. ಹಾಗಾದಾಗ ಮಾತ್ರ ಅವನು ಮುದ್ರೆಯನ್ನು ಮುರಿಯದೆ ನಬಿ ಎನಿಸಿಕೊಳ್ಳುವನು. ಏಕೆಂದರೆ ಅವನು ಮುಹಮ್ಮದ್(ಸ) ಆಗಿದ್ದಾನೆ ಪ್ರತಿಬಿಂಬ ರೂಪದಲ್ಲಿ. ಆದ್ದರಿಂದ ಈಸರಲ್ಲಿ ಮುಹಮ್ಮದ್ ಹಾಗೂ ಅಹ್ಮದ್ ಆಗಿರುವುದು. ಅದಾಗ್ಯೂ ಸಯ್ಯದನಾ ಮುಹಮ್ಮದ್(ಸ) ರವರೇ ಖಾತಮುನ್ನಬಿಯ್ಯೀನ್ ಆಗಿರುವರು. ಏಕೆಂದರೆ ಇವರು ದ್ವಿತೀಯ ಮುಹಮ್ಮದ್ ಅದೇ ಮುಹಮ್ಮದ್(ಸ) ರವರ ಚಿತ್ರಿತ ಮತ್ತು ಅವರ ಹೆಸರೇ ಆಧಾರವಾಗಿದೆ. ಆದರೆ ಈಸಾ ಮುದ್ರೆ ಒಡೆಯದೇ ಬರಲು ಸಾಧ್ಯವಿಲ್ಲ. ಏಕೆಂದರೆ ಅವರ ನುಬುವ್ವತ್ ಪ್ರತ್ಯೇಕ ನುಬುವ್ವತ್ ಆಗಿದೆ. ಪ್ರತಿಬಿಂಬಿತ ಅರ್ಥದಲ್ಲಿಯೂ ಯಾವ ವ್ಯಕ್ತಿಯು ನಬಿ ಮತ್ತು ರಸೂಲ್ ಆಗುವುದಿಲ್ಲವಾದರೆ **ಇಹ್‌ದಿನಸ್ಸಿರಾತಲ್ ಮುಸ್ತಖೀಮ್. ಸಿರಾತಲ್ಲಝೀನ ಅನ್‌ಅಮ್‌ತ ಅಲೈಹಿಮ್ ಗೈರಿಲ್ ಮಗ್‌ಝೂಬಿ ಅಲೈಹಿಮ್** (ಸೂರಃ ಫಾತಿಹ) ಅರ್ಥವಾದರೂ ಏನು? ಆದ್ದರಿಂದ ನೆನಪಿಡಬೇಕು. ಈ ಅರ್ಥದಲ್ಲಿ ನನಗೆ ನುಬುವ್ವತ್ ಹಾಗೂ ರಿಸಾಲತ್‌ನಿಂದ ನಿರಾಕರಣೆ ಇಲ್ಲವಾಗಿದೆ. ಅದರನ್ವಯವೇ 'ಸಹೀ ಮುಸ್ಲಿಮ್' ನಲ್ಲಿಯೂ ವಾಗ್ದತ್ತ ಮಸೀಹರನ್ನು ನಬಿ ಎಂದು ಹೆಸರಿಸಲಾಗಿದೆ. ಅಲ್ಲಾಹನಿಂದ ಅಗೋಚರ ವಾರ್ತೆಗಳನ್ನು ಪಡೆಯುವವನು ನಬಿಯ ಹೆಸರು ಹೊಂದದೆ ಯಾವ ಹೆಸರು ಹೊಂದಬೇಕಾಗಿದೆ? ಅವನ ಹೆಸರು ಮುಹದ್ದೀಸ್ ಎಂದಾಗಬೇಕೆಂದಾದರೆ ನಾವು ಹೇಳುತ್ತೇವೆ. ತಹದೀಸ್ ಅರ್ಥ ಯಾವದೇ ಪದಕೋಷದಲ್ಲಿಯೂ ಅಗೋಚರ ವಾರ್ತೆಗಳನ್ನು ಹೊಂದುವವನು ಎಂದು ಇಲ್ಲ. ಆದರೆ ನುಬುವ್ವತ್‌ನ ಅರ್ಥ ಅಗೋಚರ ವಾರ್ತೆಗಳನ್ನು ಪಡೆಯುವವನು ಎಂದಾಗುತ್ತದೆ. ನಬಿ ಒಂದು ಪದವಾಗಿದೆ. ಅದು ಅರಬಿ ಮತ್ತು ಇಬ್ರಾನಿಯ ಸಂಯುಕ್ತ ಪದವಾಗಿದೆ. ಅಂದರೆ ಇಬ್ರಾನಿಯಲ್ಲಿ ಅದೇ ಪದವನ್ನು ನಾಬಿ ಎನ್ನುತ್ತಾರೆ. ಈ ಪದ ನಾಬಾದಿಂದ ಕೂಡಿರುತ್ತದೆ. ಅದರ ಅರ್ಥ ಅಲ್ಲಾಹನಿಂದ ವಾರ್ತೆ ಪಡೆದು ಭವಿಷ್ಯವಾಣಿ ನೀಡುವುದು. ನಬಿ ಆದವನಿಗೆ ಶಾರೆಹ್ (ಧರ್ಮಶಾಸ್ತ್ರ) ಹೊಂದುವುದು ಅನಿವಾರ್ಯ (ಶರತ್ತು) ಅಲ್ಲ. ಇದು ಕೇವಲ ಆತ್ಮಸಮ್ಮಿಲಿತವಾಗಿದೆ. ಆ ಮೂಲಕ ಅಗೋಚರ ವಾರ್ತೆಗಳನ್ನು ಪಡೆಯುವಂತಾಗುತ್ತದೆ. ಆದ್ದರಿಂದ ಈ ಅವಧಿಯವರೆಗೆ ಸುಮಾರು ನೂರಾ ಐವತ್ತು ಭವಿಷ್ಯವಾಣಿಗಳು ಅಲ್ಲಾಹನಿಂದ ಪಡೆದು ಸ್ಪಷ್ಟರೂಪದಲ್ಲಿ ಪೂರ್ಣಗೊಂಡಿದ್ದಕ್ಕೆ ಸ್ವಯಂ ನಾನು ಸಾಕ್ಷಿಯಾಗಿದ್ದೇನೆ. ಹೀಗಿರುವಾಗ ನನಗೆ ನಬಿ ಅಥವಾ ರಸೂಲ್ ಹೆಸರನ್ನು ಹೇಗೆ ನಿರಾಕರಿಸಲು ಸಾಧ್ಯ? ಅದಾಗ್ಯೂ ಅಲ್ಲಾಹನು ಸ್ವಯಂ ನನಗೆ ಈ ಹೆಸರನ್ನು ನೀಡಿದ್ದಾನೆ. ನಾನು ಹೇಗೆ ರದ್ದುಪಡಿಸಲಿ ಅಥವಾ ಅವನನ್ನು ಬಿಟ್ಟು ಇತರರಿಗೆ ಏಕೆ ಹೆದರಲಿ? ನನಗೆ ಆ ದೇವನಾಣೆ ಅವನೇ ನನ್ನನ್ನು ಕಳುಹಿಸಿದ್ದಾನೆ. ಅವನ ಮೇಲೆ ಸುಳ್ಳು ಹೇಳುವುದು ಶಾಪಗ್ರಸ್ತರ ಕೆಲಸವಾಗಿದೆ. ಅವನೇ ನನ್ನನ್ನು ವಾಗ್ದತ್ತ ಮಸೀಹನನ್ನಾಗಿ ಕಳುಹಿಸಿದ್ದಾನೆ. ನಾನು ಹೇಗೆ ಪವಿತ್ರ ಖುರ್‌ಆನಿನ ವಚನಗಳ ಮೇಲೆ ವಿಶ್ವಾಸ ಹೊಂದಿರುವೆನೋ ಹಾಗೆಯೇ ಒಂದಿಷ್ಟು ವ್ಯತ್ಯಾಸವಿಲ್ಲದೆ ಅಲ್ಲಾಹನ ಈ ಬಹಿರಂಗವಾದ ಸ್ಪಷ್ಟವಾದ ವಹೀಯ (ದೇವವಾಣಿ) ವಿಶ್ವಾಸ ಹೊಂದಿರುತ್ತೇನೆ. ಅದು ನನ್ನ ಮೇಲೆ ಅವತರಿಸಿದೆ. ಅದರ ಸತ್ಯಾಸಾಕ್ಷತೆ ನಿರಂತರವಾದ ದೃಷ್ಟಾಂತಗಳ ಮೂಲಕ ಮನಗಾಣುವಂತಾಗಿದೆ. ನಾನು ಬೈತುಲ್ಲಾಹ್ (ಕಅಬ) ದಲ್ಲಿ ನಿಂತು ಆಣೆ ಮಾಡಿ ಹೇಳುವೆನು. ಯಾವ ಪವಿತ್ರವಾದ ವಹ್ಯಿ (ದೇವವಾಣಿ) ನನ್ನ ಮೇಲೆ ಅವತರಿಸುತ್ತಿದೆಯೋ ಅದೇ ಅಲ್ಲಾಹನ ದಿವ್ಯವಾಣಿ ಆಗಿದೆ. ಅದು ಹಝ್ರತ್ ಮೂಸಾ, ಹಝ್ರತ್ ಈಸಾ ಮತ್ತು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರವರ ಮೇಲೆ ಅವತರಿಸಿದೆ. ನನಗಾಗಿ ಭೂಮಿಯೂ ಸಾಕ್ಷ್ಯವಹಿಸಿದೆ. ಮತ್ತು ಆಕಾಶವೂ ಸಹ. ಹೀಗೆ ನನಗಾಗಿ ಆಕಾಶವು ಸಾಕ್ಷ್ಯವಹಿಸಿದೆ ಮತ್ತು ಭೂಮಿಯೂ "ನಾನು ಖಲೀಫತುಲ್ಲಾಹ್" ಆದರೂ ಭವಿಷ್ಯವಾಣಿಗಳ ಪ್ರಕಾರ ತಿರಸ್ಕರಿಸಲ್ಪಡುವುದು ಅನಿವಾರ್ಯವಾಗಿತ್ತು. ಆದ್ದರಿಂದ ಯಾರ ಹೃದಯಗಳ ಮೇಲೆ ಪರದೆ ಬಿದ್ದಿದೆಯೋ ಅವರು ಸ್ವೀಕರಿಸುವುದಿಲ್ಲ. ನಾನು ಬಲ್ಲೆ ಅಲ್ಲಾಹನು ಅವಶ್ಯವಾಗಿ ಸದಾ ತನ್ನ ಪ್ರವಾದಿಗಳಿಗೆ ಸಹಕರಿಸುವಂತೆ ನನಗೂ ಸಹ ಸಹಕರಿಸುವನು. ನನ್ನ ವಿರುದ್ಧ ನಿಲ್ಲಲು ಯಾರಿಂದಲೂ ಸಾಧ್ಯವಾಗದು. ಏಕೆಂದರೆ ಅಲ್ಲಾಹನ ಬೆಂಬಲ ಅವರೊಂದಿಗೆ ಇಲ್ಲ.

**(ಏಕ್ ಗಲ್ತಿಕಾ ಇಝಾಲ,ರೂಹಾನಿ ಖಝಾಯೀನ್, ಸಂಪುಟ–18, ಪುಟ–208)**

# "ಮಹೋನ್ನತವಾದ ಸರ್ವಧರ್ಮ ಸಮ್ಮೇಳನ" ಲಾಹೋರಿನ ವಿಶ್ವಾಸ ವರ್ಧಕ ವಿವರಣೆ."

*ಹಝ್‌ರತ್ ಭಾಯಿ ಅಬ್ದುರ್ ರಹ್ಮಾನ್ ಸಾಹಿಬ್ ಖಾದಿಯಾನಿ(ರ) ಅವರ ಲೇಖನಿಯಿಂದ*

ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್(ಅ) ರವರ ಮೇರುಕೃತಿಯಾದ "ಇಸ್ಲಾಮ್ ಧರ್ಮದ ತತ್ವಜ್ಞಾನ" (ಇಸ್ಲಾಮಿ ಉಸೂಲ್ ಕಿ ಫಿಲಾಸಫಿ) ಕುರಿತು ಹಝ್‌ರತ್ ಭಾಯಿ ಅಬ್ದುರ್ ರಹ್ಮಾನ್ ಸಾಹಿಬ್ ಖಾದಿಯಾನಿ(ರ) ಸಹಾಬಿ ಹಝ್‌ರತ್ ಮಸೀಹ್ ಮೌಊದ್(ಅ) ರವರ ಒಂದು ಪ್ರಬಂಧ "ಮಹೋನ್ನತವಾದ ಸರ್ವಧರ್ಮ ಸಮ್ಮೇಳನ ಲೆಕ್ಚರ್(ಉಪನ್ಯಾಸ) ಇಸ್ಲಾಮ್ ಧರ್ಮದ ತತ್ವಜ್ಞಾನ" ಎಂಬ ಶೀರ್ಷಿಕೆಯಡಿಯಲ್ಲಿ 20 ಜಲ್ಸಾ 1946 ರಂದು ಬರೆದರು. ಈ ಪ್ರಬಂಧ ಓದುಗರ ಹಿತದೃಷ್ಟಿಯಿಂದ "ಸೀರತುಲ್ ಮಹ್‌ದಿ ಸಂಪುಟ–2ರಿಂದ ನೀಡಲಾಗುತ್ತಿದೆ. **ಈ ಲೇಖನದಲ್ಲಿ ಅವರು ಈ ಸಮ್ಮೇಳನ ಹಾಗೂ ಉಪನ್ಯಾಸದ ಅತ್ಯಂತ ವಿಶ್ವಾಸ ವರ್ಧಕ ವೀಕ್ಷಕ ವಿವರಣೆಯನ್ನು ನೀಡಿದ್ದಾರೆ.** (ಪತ್ರಿಕಾ ಬಳಗ)

1) ಸಯ್ಯದುನಾ ಹಝ್‌ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಪ್ರಚಾರದ ಉತ್ಸಾಹ ಮತ್ತು ಅಲ್ಲಾಹನ ದಿವ್ಯವಾಣಿಯನ್ನು ಪ್ರಚಾರಪಡಿಸಲಿಕ್ಕಾಗಿ ಅವರಿಗಿರುವ ಶ್ರದ್ಧೆ ಮತ್ತು ಹುಮ್ಮಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವುದು ಮಾನವ ಶಕ್ತಿಗೆ ಮೀರಿದ ಮಾತಾಗಿದೆ. **ಅಲ್ಲಾಹು ಅಅ್‌ಲಮು ಹೈಸು ಯಜ್‌ಅಲ್ ರಿಸಾಲತಹು.** ಹುಝೂರರ ಕಾರ್ಯ ಹಾಗೂ ಆಗಮನದ ಉದ್ದೇಶ ಅಲ್ಲಾಹನು ಇಸ್ಲಾಮ್ ಧರ್ಮವನ್ನು ಇತರ ಎಲ್ಲಾ ಧರ್ಮಗಳ ಮೇಲೆ ವಿಜಯ ಸಾಧಿಸುವುದಕ್ಕೆ ನಿಯುಕ್ತಗೊಳಿಸಲಾಗಿದೆ" ಮತ್ತು ಯಾರಿಗೆ ಈ ವಿಶೇಷವಾದ ಕರ್ತವ್ಯವನ್ನು ವಹಿಸಲಾಗುತ್ತದೆಯೋ ಅವರಿಗೆ **ಬಲ್ಲಿಗ್ ಮಾ ಉನ್‌ಝಿಲ ಇಲೈಕ ಮಿನ್ ರಬ್ಬಿಕ ಫಿಇನ್ ಲಮ್ ತಫ್‌ಅಲ್ ಫಮಾ ಬಲ್ಲಗ್‌ತ ರಿಸಾಲತಹು** ಆಜ್ಞೆಯು ನೀಡಲಾಗುತ್ತದೆ.

ಪ್ರಕಾಶಮಯರಾದ ಹುಝೂರ್ ಸತ್ಯ ಪ್ರಚಾರದ ಕಾರ್ಯದಲ್ಲಿ ತಮ್ಮೆಲ್ಲ ಶಕ್ತಿಯನ್ನು ಮುಡಿಪಾಗಿಟ್ಟಿದ್ದರು. ಹಗಲಿರಲಿ, ಇರುಳಿರಲಿ ಹುಝೂರರಿಗೆ ಇದೇ ಚಿಂತೆಯಿರುತ್ತಿತ್ತು. ಯಾವ ಸಂದರ್ಭವು ಕೈಯಿಂದ ಬಿಡುತ್ತಿರಲಿಲ್ಲ. ನಿಂತಲ್ಲಿ, ಕೂತಲ್ಲಿ, ನಡೆ ನುಡಿಯಿಂದ, ಏಕಾಂತದಲ್ಲಿರಲಿ, ಸಮೂಹದಲ್ಲಿರಲಿ ಒಟ್ಟಿನಲ್ಲಿ ಯಾವುದೇ ಸ್ಥಿತಿಯಲ್ಲೂ ಇದೇ ಚಿಂತೆ ಮತ್ತು ಇದೇ ಕಾರ್ಯದಲ್ಲಿ ಮುಳುಗುತ್ತಿದ್ದರು. ಆದ್ದರಿಂದ ಪ್ರಕಾಶಮಯ ಹುಝೂರರ ಚರಿತ್ರೆಯ ಪ್ರತಿ ಪುಟವು ಮತ್ತು ಜೀವನ ಶೈಲಿಯ ಪ್ರತಿ ಕ್ಷಣ ಈ ವಿದ್ಯಮಾನದ ಸಾಕ್ಷಾತ್ ರೂಪವಾಗಿದ್ದರು. ದೀರ್ಘವಾದ ಅಧ್ಯಯನ ಮತ್ತು ಹುಝೂರ್(ಅ) ಗ್ರಂಥಗಳ ಆಳ ಹೊರತಾಗಿಟ್ಟು ಹುಝೂರರ ಕೇವಲ ಎರಡು ಪುಟಗಳ ಜಾಹಿರಾತನ್ನೇ ಶುದ್ಧ ಮನಸ್ಸಿನಿಂದ ನ್ಯಾಯಸಮ್ಮತವಾಗಿ, ದ್ವೇಷರಹಿತವಾಗಿ ದೃಷ್ಟಿ ಹಾಯಿಸಿ ನೋಡಿದರೆ ಹುಝೂರ್(ಅ) ರವರು 9 ಡಿಸೆಂಬರ್ 1890 ರಂದು ಪ್ರಕಟಿಸಿದ್ದರು. ಖಂಡಿತವಾಗಿಯೂ ನಾನು ನೀಡಿದ ವಿವರಣೆಗೆ ಸಾಕ್ಷ್ಯವಹಿಸಬೇಕಾದೀತು. ಮತ್ತು ಹುಝೂರ್ ರ ಸತ್ಯಸಂಧತೆ ಹಾಗೂ ಪರಿಶುದ್ಧ ನಿಯತ್ತಿನ ಪರಿಣಾಮವಾಗಿಯೇ ಅಲ್ಲಾಹನು ಎಲ್ಲಾ ರೀತಿಯಲ್ಲಿ ಅಸಾಮಾನ್ಯ ಸಹಾಯ ನೀಡಿದನು. ದಿವ್ಯ ದೃಷ್ಟಾಂತಗಳನ್ನು ಒದಗಿಸಿದನು. ಅಲ್ಲಾಹನ ಇವೆಲ್ಲಾ ಸಹಾಯವನ್ನು ಔದಾರ್ಯವನ್ನು ವರ್ಣಿಸುತ್ತ ಹುಝೂರ್(ಅ) ಹೀಗೆ ನುಡಿದರು. ಅಲ್ಲಾಹನ ಎಷ್ಟೊಂದು ಉಪಕಾರ ಹಾಗೂ ಅನುಗ್ರಹವಿದೆ. ಇತ್ತ ನಮ್ಮ ಮನದಲ್ಲಿ ಒಂದು ಇಚ್ಛೆ ಉಂಟಾಗುತ್ತದೆ ಅಥವಾ ಯಾವುದೇ ಅಗತ್ಯತೆ ಉಂಟಾಗುತ್ತದೆ. ಆಗಲೇ ಅಲ್ಲಾಹನು ಅದರ ಪೂರ್ಣತೆಗಾಗಿ ಸಾಮಗ್ರಿಗಳನ್ನು ಒದಗಿಸುತ್ತಾನೆ.

(2) 1892 ವರ್ಷದ ಅರ್ಧ ಭಾಗದಲ್ಲಿ ಆಕಸ್ಮತ್ತಾಗಿ ಓರ್ವ ಮನುಷ್ಯ, ಸಾಧು ಸ್ವಭಾವದ ಕೇಸರಿ ವಸ್ತ್ರಧಾರಿ ಶಗುನ್ ಚಂದ್ರ ಹೆಸರಿನವನು ಖಾದಿಯಾನಿಗೆ ಬಂದನು ಮತ್ತು ಅತಿ ಶೀಘ್ರದಲ್ಲಿ ತಮ್ಮ ಸಭೆಗಳಿಗೆ ಸೇರುತ್ತ ಆಪ್ತ ಸದಸ್ಯನಾದನು. ಒಂದೆರಡು ದಿನ ಸಯ್ಯದುನಾ ಹಝ್‌ರತ್ ಹಕೀಮ್ ಮೌಲಾನ ನೂರುದ್ದೀನ್(ರ) ರವರ ಸಭೆಯಲ್ಲೂ ಭಾಗವಹಿಸಿದನು. ಮರುದಿನವೇ ಸಯ್ಯದುನಾ ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ) ನಡೆಸುತ್ತಿದ್ದ ಮುಂಜಾನೆಯ ಹಾಗೂ ಸಾಯಂಕಾಲದ ವಿಹಾರದಲ್ಲಿ ಪಾಲ್ಗೊಂಡು ಹುಝೂರ್(ಅ)ರ ಆಪ್ತನಾದನು. ಏಕೆಂದರೆ ಆ ವ್ಯಕ್ತಿಗೆ ಸತ್ಯಾನ್ವೇಷಣೆಯ ದಾಹವಿತ್ತು. ಸತ್ಯಸಂಧತೆ ಬಯಸುವವನಾಗಿದ್ದನು. ತಮ್ಮ ಆಧ್ಯಾತ್ಮಿಕ ತೃಷೆಯನ್ನು ನೀಗಿಸಲು ದೈವಿಕಬಲದ ಹುಡುಕಾಟದಲ್ಲಿ ದೂರ ಸಮೀಪ ಎಂದು ಪರಿಗಣಿಸದೆ ಊರೂರು ಅಲೆದಾಡುತ್ತಾ ಖಾದಿಯಾನಿನ ಪವಿತ್ರ ನೆಲಕ್ಕೆ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವ ಆಶಯದೊಂದಿಗೆ ಬಂದಿದ್ದನು. ಮತ್ತು ಇಲ್ಲಿಂದ ಏನಾದರೂ ಪಡೆದುಕೊಂಡೇ ಹೋಗಬೇಕೆಂಬ ನಿಯತ್ತಿನಿಂದ ಬಂದಿದ್ದ. ಅವನ ಈ ನಿಷ್ಕಪಟ ನಿಯತ್ತಿನ ಫಲವಾಗಿಯೇ ಅವನು ಅಪರಿಚಿತನಾಗಿದ್ದರೂ ಅತಿ ಶೀಘ್ರವಾಗಿ ಆತ್ಮೀಯನಾಗಿಬಿಟ್ಟನು. ಅವನು ಕೇಸರಿ ಬಟ್ಟೆ ಧರಿಸಿ ಯಾವುದೇ ಆಸೆಗಾಗಿ ಬಂದ ಸಾಧು ಆಗಿರಲಿಲ್ಲ. ಯಾವುದೇ ಹಣದ ಆಸೆಗಾಗಿ ಖಾದಿಯಾನಿಗೆ ಬಂದಿರಲಿಲ್ಲ. ಬದಲಾಗಿ ಸತ್ಯಾನ್ವೇಷಣೆ ಮತ್ತು ಸತ್ಯಪ್ರೇಮವೇ ಕಾರಣವಾಗಿತ್ತು. ಇಲ್ಲದಿದ್ದರೆ ಅಲ್ಲಾಹನ ಪ್ರಿಯ ಇಮಾಮರ ದಿವ್ಯದೃಷ್ಟಿ ಅವನ ಮೇಲೆ ಬೀಳುತ್ತಿರಲಿಲ್ಲ.

(3) ಶಗುನ್ ಚಂದ್ರ ಓರ್ವ ವಿದ್ಯಾವಂತ ಮತ್ತು ಬುದ್ಧಿವಂತ ಮನುಷ್ಯನಾಗಿದ್ದ. ಅವನು ಸರಕಾರದ ಒಂದು ಒಳ್ಳೆಯ ಹುದ್ದೆಯನ್ನು ಪಡೆದಿದ್ದ. ಕೆಲವು ಘಟನೆಗಳು ಅವನ ಮೇಲೆ ಅಳಿಸಲಾಗದಂತಹ ಪರಿಣಾಮ ಅವನ ಹೃದಯದ ಮೇಲೆ ಆವರಿಸಿತ್ತು. ಅವನ ಪತ್ನಿ ಮಕ್ಕಳು ಮತ್ತು ಸಂಬಂಧಿಕರೂ ಅವನಿಂದ ದೂರವಾದರು. ಅವನು ಒಬ್ಬಂಟಿಯಾಗಿ ಉಳಿದಿದ್ದನು. ಅವನ ಮನದಲ್ಲಿ ಒಂದು ಆಗ್ರಹ ತಳಮಳ ಜನ್ಮ ತಾಳಿತು. ಅಶಾಶ್ವತ ಲೋಕದ ಕಲ್ಪನೆಗಳು ಅವನ ಭಾವನೆಗಳಿಗೆ ಶಾಶ್ವತ ಹಾಗೂ ಅಲೌಕಿಕ ಶಕ್ತಿಯ ಕಡೆಗೆ ಎಳೆದು ತಂದಿತು. ಅವನು ತನ್ನ ನೌಕರಿಯನ್ನು ಬಿಟ್ಟು ಇಹಲೋಕದಿಂದ ಬೇಜಾರಾಗಿ ಸತ್ಪಥವನ್ನು ಹಿಡಿಯುವ ತವಕ ಉಂಟಾಯಿತು. ಸಾಧು ರೂಪಧಾರಣೆ ಮಾಡಿ ಅಲ್ಲಲ್ಲಿ ಅಲೆದಾಡುತ್ತ ಹೋದನು. ಎಷ್ಟೋ ಕಾಲದವರೆಗೆ ಎಲ್ಲೆಲ್ಲೋ ಅಲೆದಾಡಿದ ಅವನಿಗೆ ಯಾರೋ ಒಬ್ಬರು ನಮ್ಮ ನೇತಾರರಾದ ಜಗತ್ ಸುಧಾರಕರಾದ ಇಮಾಮರ ವಿಳಾಸ ಕೊಟ್ಟರು. ಅವನು ಖಾದಿಯಾನನ್ನು ಪತ್ತೆಹಚ್ಚಿ ಬಂದನು. ಅದರ ಮೇಲೆ ಶ್ರದ್ಧೆ ಹಾಗೂ ಆತ್ಮೀಯತೆ ಹೊಂದಿ ತನ್ನ ಉದ್ದೇಶ ಸಾಧನೆಯಲ್ಲಿ ಮಗ್ನನಾದನು. ಹುಝೂರ್(ಅ)ರ ಸಹವಾಸದಿಂದ ಅನುಗ್ರಹ ಪಡೆಯತೊಡಗಿದನು ಮತ್ತು ಅತ್ಯಂತ ನಿಕಟ ಸಂಬಂಧ ಹೊಂದಿ ಶಾಂತಿ ಸಮಾಧಾನ ಪಡೆದುಕೊಂಡನು. ಅವನು ಅಲ್ಲೇ ಠಿಕಾಣಿ ಹೂಡಲು ಸಿದ್ಧನಾದನು. ಆದರೆ ಅಲ್ಲಾಹನು ಅವನ ಮೂಲಕ ಒಂದು ದೃಷ್ಟಾಂತ ಗೋಚರಿಸುವುದು ಮತ್ತು ದೈವಿಕ ಪವಾಡ ತೋರಿಸುವುದು ನಿಶ್ಚಿತವಾಗಿತ್ತು. ಆದ್ದರಿಂದ ಆ ಮಹಿಮಾವಂತನಾದ ಅಲ್ಲಾಹನು ತನ್ನ ಪವಾಡಸದೃಶ್ಯವಾಗಿ ಪರಿಸ್ಥಿತಿಗಳನ್ನು ಬದಲಾಯಿಸಿ ಓರ್ವ ವ್ಯಕ್ತಿಯನ್ನು ಖಾದಿಯಾನಗೆ ತಲುಪಿಸಿದನು. ಅವನು ಒಮ್ಮೆ ಲಾಲಾ ಮತ್ತೊಮ್ಮೆ ಬಾವಾ ಕೊನೆಗೆ ಸ್ವಾಮಿ ಶಗುನ್ ಚಂದ್ರ ಎಂದು ಹೆಸರುವಾಸಿಯಾದನು.

(4) ಆತಿಥಿ ಸತ್ಕಾರವು ಪ್ರವಾದಿಗಳ ಗುಣವಾಗಿದೆ. ಪ್ರಕಾಶಮಾನರಾದ ಹುಝೂರ್(ಅ) ಇದರಲ್ಲಿ ಅಪೂರ್ವ ಸ್ಥಾನ ಹೊಂದಿದ್ದರು. ಅದರ ಜೊತೆಯಲ್ಲಿ ಸನ್ನಡತೆ ಉಪಕಾರ ಮತ್ತು ಮೃದುತನದಲ್ಲಿ ಹುಝೂರ್(ಅ) ರು ಅದ್ವಿತೀಯರಾಗಿದ್ದರು. ಇತರರ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಕರುಣೆ ಮತ್ತು ಸಜ್ಜನಿಕೆಯ ಭಾವದಲ್ಲಿ ಹುಝೂರರ ಸಾಟಿ ಯಾರೂ ಇರಲಿಲ್ಲ. ಅವರು ಅದ್ವಿತೀಯ ಮಾದರಿ ಹೊಂದಿದ್ದರು. ಇವೆಲ್ಲ ಸದ್ಗುಣಗಳಲ್ಲದೆ ಸತ್ಯ ಸಾಕ್ಷ್ಯಗಳು ಮತ್ತು ಜ್ಞಾನ ವಿವೇಕದ ಗಣಿಯಾಗಿದ್ದರು. ಅದು ಅವರಿಗೆ ಅಲ್ಲಾಹನೊಂದಿಗಿರುವ ನಂಟು ಮತ್ತು ದೈವಿಕ ಅನುಗ್ರಹಗಳ ಸಾಕ್ಷ್ಯವಾಗಿತ್ತು. ಅಲ್ಲಾಹನ ಪ್ರೀತಿ ಅನುಗ್ರಹಗಳ ಫಲವಾಗಿ ಅವರಿಗೆ ದಿವ್ಯವಾಣಿಗಳ ಭಾಗ್ಯವು ಲಭಿಸಿತು. ಅಲ್ಲಾಹನ ಈ ಅನುಗ್ರಹಗಳು ಆಯಸ್ಕಾಂತದಂತೆ ಸಜ್ಜನರು ಮತ್ತು ಶುದ್ಧ ಮನಸ್ಸು ಹೊಂದಿದವರನ್ನು ತನ್ನತ್ತ ಸೆಳೆಯುತ್ತಿತ್ತು. ವಾಸ್ತವ ತಿಳಿಯದ ಜನರು ಇದಕ್ಕೆ ಜಾದೂವಿನ ಹೆಸರು ಕೊಟ್ಟು ಜನರನ್ನು ಇದರಿಂದ ದೂರ ಇರಿಸುವ ಅಸಮಾನ್ಯ ಪ್ರಯತ್ನದಲ್ಲಿ ತೊಡಗಿದ್ದರು. ಸ್ವಾಮಿ ಶಗುನ್ ಚಂದ್ರರೂ ಈ ಪವಾಡಗಳಿಂದ ಆಕರ್ಷಿತರಾದರು. ಅವರು ಏನು ಬಯಸುತ್ತಿದ್ದರೋ, ಲೋಕದಲ್ಲಿ ಎಲ್ಲೂ ಸಿಗದಂತಹ ವಸ್ತು ವಿದ್ಯಮಾನ ಕೊನೆಗೆ ಅಲ್ಲಾಹನ ಕಾರುಣ್ಯದಿಂದ ಖಾದಿಯಾನಿನಲ್ಲಿ ಅವರಿಗೆ ದೊರೆಯಿತು. ಅದುವೇ ಅವರ ಆಸೆ ಆಕಾಂಕ್ಷೆಗಳಾಗಿದ್ದವು. ಇಲ್ಲಿ ನೋಡಿದಂತಹ ದೃಷ್ಟಾಂತಗಳು ಅವರು

ಲೋಕದಲ್ಲಿ ಎಂದೂ ಎಲ್ಲಿಯೂ ಕಂಡಿರಲಿಲ್ಲ. ಕೇಳಿರಲಿಲ್ಲ. ಅವರು ತಮ್ಮ ಈ ಭಾಗ್ಯದ ಮೇಲೆ ಹೆಮ್ಮೆ ಪಡುತ್ತಿದ್ದರು. ನಾನು ಬಯಸಿದ್ದು ಅಂತಿಮವಾಗಿ ಅಲ್ಲಾಹನು ನನಗೆ ದಯಪಾಲಿಸಿದ್ದಾನೆಂದು ನಮ್ಮ ನೇತಾರರು ಅವರಿಗಿಂತ ಹೆಚ್ಚು ಸಂತುಷ್ಠರಾಗಿದ್ದರು. ಅಲ್ಲಾಹನು ತನ್ನ ಅನುಗ್ರಹದಿಂದ ಹುಝೂರ್(ಅ) ರ ಆತ್ಮೀಯ ಇಚ್ಛೆಪೂರ್ತಿಗೊಳಿಸಲು ಶಗುನ್ ಚಂದ್ರ ಸಾಹಿಬರ ಅಸ್ತಿತ್ವದಲ್ಲಿ ಒದಗಿಸಿಕೊಟ್ಟಿದ್ದನು.

5) ಹುಝೂರ್(ಅ) ರವರು ಒಂದು ಸುದೀರ್ಘ ಕಾಲದಿಂದ ಒಂದು ಜಾಗತಿಕ ಸರ್ವಧರ್ಮಗಳ ಸಮ್ಮೇಳನ ಏರ್ಪಡಿಸುವ ಅಭಿಲಾಷೆ ಹೊಂದಿದ್ದರು. ಅದರಲ್ಲಿ ಪವಿತ್ರ ಖುರ್‌ಆನಿನ ಔದಾರ್ಯಗಳು, ಚಮತ್ಕಾರಗಳು ಮತ್ತು ಪವಾಡಗಳು ಅಂತೆಯೇ ಇಸ್ಲಾಮ್ ಧರ್ಮದ ಕೊಡುಗೆಗಳನ್ನು ವಿವರಿಸ ಬಯಸಿದ್ದರು. ಪ್ರತಿಯೊಂದು ಧರ್ಮದ ಪ್ರತಿನಿಧಿಯೂ ತನ್ನ ಧರ್ಮದ ಒಳಿತುಗಳನ್ನು ವಿವರಿಸಬೇಕು. ಆ ಸ್ಪರ್ಧಾ ಕ್ಷಣದಲ್ಲಿ ಸತ್ಯ ಬಯಲಾಗಬೇಕು. ಇಸ್ಲಾಮ್ ಧರ್ಮದ ಘನತೆ ಮತ್ತು ರಸೂಲುಲ್ಲಾಹ್(ಸ) ರವರ ಸತ್ಯಸಾಕ್ಷ್ಯ ಪ್ರಕಟಗೊಳ್ಳಬೇಕು ಎಂದು. ಆದ್ದರಿಂದ ಹುಝೂರ್(ಅ) ರ ಈ ಅಭಿಲಾಷೆಯನ್ನು ಈಡೇರಿಸಲು ದಯವಂತನಾದ ಅಲ್ಲಾಹನು ಸ್ವಾಮಿ ಶಗುನ್ ಚಂದ್ರರನ್ನು ಖಾದಿಯಾನಿಗೆ ತಲುಪಿಸಿಕೊಟ್ಟನು. ಅವರು ಹುಝೂರ್(ಅ) ರವರ ಈ ಯೋಜನೆಯನ್ನು ಸತ್ಯ ಹಾಗೂ ಮಿಥ್ಯದ ಅಸಲಿ ಬಣ್ಣ ವಾಸ್ತವ ರೂಪ ಬಹಿರಂಗಗೊಳ್ಳಲು ಮತ್ತು ಸತ್ಯವನ್ನು ಒರೆಗಲ್ಲಿಗೆ ಹಚ್ಚಲು ಇದರ ಏರ್ಪಾಡು ಮಾಡಲು ತನ್ನ ಸೇವೆಯನ್ನು ಪ್ರಸ್ತುತಪಡಿಸಿದರು, ಜ್ಞಾನ ಹಾಗೂ ಅನುಭವದ ಕಾರಣದಿಂದ ಅವರಿಗೆ ಹಿಂದೂಗಳ ಎಲ್ಲಾ ವರ್ಗಗಳ ಬೆಂಬಲ ಲಭ್ಯವಾಗತೊಡಗಿತು. ಮತ್ತು ಈ ಯೋಜನೆಯ ಬಗ್ಗೆ ವಿಚಾರ ಮಾಡತೊಡಗಿದರು. ಹೀಗೆ ಈ ಕಾರ್ಯದಲ್ಲಿ ಜೀವಕಳೆ ಬಂದೊದಗಿತು. ಕೇಂದ್ರೀಯ ನಿರ್ದೇಶಕರುಗಳ, ಸಲಹೆ ಸೂಚನೆಗಳು ಅವರಿಗೆ ಬಂದು ಒದಗಬಹುದಾದ ಕಠಿಣ ಸಮಸ್ಯೆಗಳ ಪರಿಹಾರಕ್ಕಾಗಿ ಈ ಕಾರ್ಯವು ಸುಲಲಿತವಾಗಿ ಪಡೆಯಲು ಪ್ರತಿ ಹಂತದಲ್ಲೂ ಪ್ರೋತ್ಸಾಹ ನೀಡಲಾಯಿತು. ಒಮ್ಮೆ ಅವರು ಸ್ವಯಂ ಆಸಕ್ತಿಯಿಂದ ಖಾದಿಯಾನಿಗೆ ಬರುತ್ತಿದ್ದರು. ಇನ್ನೊಮ್ಮೆ ವಿಶೇಷ ಸಂದೇಶವಾಹಕರ ಜೊತೆಗೂಡಿ ಅಗತ್ಯಾನುಸಾರ ವ್ಯವಸ್ಥೆಯಲ್ಲಿ ತೊಡಗುತ್ತಿದ್ದರು. ಹೀಗೆ ಬಯಸಿದ ಸಮ್ಮೇಳನ ನೆರವೇರುವ ಲಕ್ಷಣಗಳು ಗೋಚರವಾಗತೊಡಗಿದವು.

ಪ್ರಕಾಶಮಾನರಾದ ಹುಝೂರ್(ಅ) ರವರ ಮಾರ್ಗದರ್ಶನದಲ್ಲಿ ಒಂದು ಸೂಚನೆ ತಯಾರಿಸಲಾಯಿತು. ಕಾರ್ಯಕರ್ತರ ಮತ್ತು ಖರ್ಚು ವೆಚ್ಚಗಳ ವ್ಯವಸ್ಥೆಯನ್ನು ಸಯ್ಯದುನಾ ಹಝ್ರತ್ ಅಖದಸ್(ಅ) ರವರು ವಹಿಸಿಕೊಳ್ಳುತ್ತಿದ್ದನ್ನು ನೋಡಿ ಈ ಕಾರ್ಯಕ್ರಮದಲ್ಲಿ ಜೀವ ತುಂಬಿದಂತಾಯಿತು. ಹೀಗೆ ಸ್ವಾಮಿ ಶಗುನ್ ಚಂದ್ರ ಸಾಹೇಬರು ಹುಝೂರ್(ಅ) ರವರ ಈ ಧಾರ್ಮಿಕ ಅಭಿಲಾಷೆ ಈಡೇರಿಸಲು ಒಂದು ಅಗೋಚರ ದೇವದೂತನಂತೆ ಲಭಿಸಿದರು.

(6) ಕೊನೆಗೆ ಅಲ್ಲಾಹನ ಅನುಗ್ರಹದಿಂದ ಹಲವು ಆತಂಕಗಳ ನಂತರ ಗುಡ್ಡಗಾಡುಗಳನ್ನು ದಾಟಿಸಿ, ದಟ್ಟ ಕಾಡುಗಳನ್ನು ಕಡೆಗಣಿಸಿದ ನಂತರ ಈ ಸಮ್ಮೇಳನ (ಜಲ್ಸ) "ಮಹೋನ್ನತ ಸರ್ವ ಧರ್ಮಗಳ ಸಮ್ಮೇಳನ" ಏರ್ಪಡಿಸುವ ದಿನಾಂಕಗಳ ಘೋಷಣೆಯೂ ಆಯಿತು. ಅದು 26 ರಿಂದ 28 ಡಿಸೆಂಬರ್ 1896 ನಿಗದಿಗೊಂಡವು. ಲಾಹೋರಿನ ಪುರಭವನದಲ್ಲಿ ಏರ್ಪಡಿಸುವ ಘೋಷಣೆ ಮಾಡಲಾಯಿತು. ಆದರ್ಶ ಪುರುಷರ ಹಾಗೂ ಸಜ್ಜನರನ್ನು ಒಳಗೊಂಡ ಒಂದು ಸಮಿತಿ ರಚಿಸಲಾಯಿತು. ಅದರಲ್ಲಿ ವಿದ್ಯಾನುಭವಸ್ತರು ಭಾಗವಹಿಸಿದ್ದರು. ಸಯ್ಯದುನಾ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರಿಗೆ ಇದರ ಸುದ್ದಿ ತಲುಪುತ್ತಲೇ ಲೋಕದ ಆತ್ಮಶುದ್ಧಿ ಸಿಗುವುದಕ್ಕಿಂತ ಮಿಗಿಲಾದ ಸಂತೋಷ ಅವರಿಗಾಯಿತು.

ಆಗ ಹುಝೂರ್(ಅ) ಈ ಸಮ್ಮೇಳನಕ್ಕಾಗಿ ಪ್ರಬಂಧ ಬರೆಯಲು ನಿಶ್ಚಯಿಸಿದರು. ಆದರೆ ದೈವಇಚ್ಛೆ ಏನಿತ್ತೋ ಹುಝೂರ್(ಅ) ರರ ಆರೋಗ್ಯ ಕೆಟ್ಟಿತ್ತು ಮತ್ತು ಸ್ವಲ್ಪ ದೀರ್ಘ ಸಮಯವು ತೆಗೆದುಕೊಂಡಿತು. ಸಮ್ಮೇಳನದ ದಿನಾಂಕಗಳು ಹತ್ತಿರ ಬರುತ್ತಿದ್ದವು. ಪ್ರಬಂಧ ಬರೆಯಲು ಆಗಬಹುದೋ ಇಲ್ಲವೋ ಎಂಬ ಅಪಾಯ ತಲೆದೋರಿತ್ತು. ಆದರೆ ಹುಝೂರ್(ಅ) ಇಂತಹ ಸ್ಥಿತಿಯಲ್ಲೂ ಪ್ರಬಂಧ ಬರೆಯಲು ಪ್ರಾರಂಭಿಸಿದರು. ಆದಾಗ್ಯೂ ಹಝ್ರತ್ ಮೌಲಾನ ಅಬ್ದುಲ್ ಕರೀಮ್ ಸಾಹಿಬ್ ದಿವಂಗತರು ಈ ದಿನಗಳಲ್ಲಿ ಯಾವುದೋ ಕಾರ್ಯನಿಮಿತ್ತ ಸಿಯಾಲ್‌ಕೋಟ್‌ಗೆ ಹೋಗಿ ಅಸ್ವಸ್ಥರಾಗಿ ಮಲಗಿದ್ದರು. ಅವರ ಅನಾರೋಗ್ಯದ ಕಾರಣ ತಿಳಿದು ಅವರು ಜಲ್ಸಕ್ಕೆ ಬರಬಹುದೋ ಇಲ್ಲವೋ ಎಂಬ ಆತಂಕ ಉಂಟಾಯಿತು. ದೀರ್ಘವಾದ ಚಿಂತನೆ ವಿಚಾರ ಮಾಡಿದ ನಂತರ ಮಸೀಹರ ಪ್ರಬಂಧವನ್ನು ಖ್ವಾಜ ಕಮಾಲುದ್ದೀನ್ ಸಾಹಿಬ್‌ರವರು ಓದುವರು ಎಂದು ನಿರ್ಣಯಿಸಲಾಯಿತು. ಪ್ರಯುಕ್ತ ಈ ನಿರ್ಣಯ ಸೂಚಿಸಲಾಯಿತು.

(ಅ) ಹುಝೂರ್(ಅ) ರವರ ಪ್ರಬಂಧ ಗುಜರಾತಿನ ಬಲಿನಿ ಜಿಲ್ಲೆಯ ಮಾನ್ಯ ಹಝ್ರತ್ ಮುನ್‌ಶಿ ಜಲಾಲುದ್ದೀನ್ ಸಾಹಿಬ್ ಬರೆದುಕೊಳ್ಳುತ್ತಿದ್ದರು. ಅದನ್ನು ಹಝ್ರತ್ ಪೀರ್‌ಜೀ ಸಿರಾಜುಲ್‌ಹಖ್ ನೋಮಾನಿ ಅವರಿಗೆ ವಹಿಸಿಕೊಟ್ಟರು. ಬರವಣಿಗೆಯ ವಿಧಾನ ಹೇಳಿಕೊಡುತ್ತಿದ್ದರು. ಏಕೆಂದರೆ ಖಾಜ ಸಾಹಿಬರಿಗೆ ಓದುವಾಗ ತೊಂದರೆ ಆಗಬಾರದು ಎಂದು. ಆದರೆ ಹುಝೂರ್(ಅ) ಮತ್ತೆ ಅಸ್ವಸ್ಥರಾದ ಕಾರಣ ತಯಾರಿಯಲ್ಲಿ ಭಗ್ನ ಉಂಟಾಯಿತು. ಆ ಇಬ್ಬರು ಮಹಾಪುರುಷರು ಸೇರಿ ಅದನ್ನು ಪೂರ್ಣಗೊಳಿಸಿದರು.

(ಬ) ಈ ಪ್ರಬಂಧದಲ್ಲಿ ಬರುವ ಎಲ್ಲಾ ಖುರ್‌ಆನಿನ ವಚನಗಳು, ಹದೀಸುಗಳು ಅಥವಾ ಅರಬಿ ಬರಹಗಳು ಪ್ರತ್ಯೇಕ ಸುಂದರ ಅಕ್ಷರಗಳಲ್ಲಿ ಬರೆಯಿಸಿ ಕಾಜ ಸಾಹೇಬರಿಗೆ ಚೆನ್ನಾಗಿ ಹೇಳಿಕೊಡಲಾಯಿತು. ಏಕೆಂದರೆ ಜಲ್ಸದಲ್ಲಿ ಓದುವಾಗ ಯಾವುದೇ ರೀತಿಯ ಅಡೆತಡೆ ಬಂದು ಪ್ರಬಂಧ ಕೆಡಬಾರದು ಎಂದು.

(7) ಹುಝೂರ್(ಅ) ಅವರು ಈ ಪ್ರಬಂಧವನ್ನು ಸುಂದರ ಅಕ್ಷರದಲ್ಲಿ ಬರೆದದ್ದು ಮುಂಜಾವಿನ ವಿಹಾರದ ಸಮಯದಲ್ಲಿ ಅಕ್ಷರಶಃ ಓದಿ ಕೇಳಿಸಲಾಗುತ್ತಿತ್ತು. ಇದು ಹುಝೂರ್(ಅ) ರವರ ಸಾಮಾನ್ಯ ಪ್ರವೃತ್ತಿಯೂ ಆಗಿತ್ತು. ಅವರು ಯಾವುದೇ ಗ್ರಂಥ ಬರೆದರೆ ಅಥವಾ ಜಾಹಿರಾತು ಹಾಗೂ ಪತ್ರಿಕೆಯನ್ನು ಬರೆದರೆ ಆ ವಿಷಯಗಳನ್ನು ಸಭೆಯಲಿ ಪುನಃ ಪುನಃ ಓದಿಸಲಾಗುತ್ತಿತ್ತು. ಎಲ್ಲಿಯವರೆಗೆ ಎಂದರೆ ಹಾಜರಿರುವವರು ಆ ವಿಷಯ ತಪ್ಪದೇ ಕಂಠಸ್ತವಾಗಿಬಿಡುತ್ತಿತ್ತು. ಆ ದಿನಗಳಲ್ಲಿ ವಿಹಾರವು ಸಾಮಾನ್ಯವಾಗಿ ಖಾದಿಯಾನಿನ ಉತ್ತರ ಭಾಗದ ಬಬರ್ ಗ್ರಾಮದ ಕಡೆ ಆಗುತ್ತಿತ್ತು. ಈ ಪ್ರಬಂಧ ಕೇಳುವ ಕಾರಣದಿಂದಲೇ ಖಾದಿಯಾನಿಯಲ್ಲಿ ಉಪಸ್ಥಿತರಿದ್ದ ಬಂಧುಗಳು ಮತ್ತು ಅತಿಥಿಗಳು ಎಲ್ಲರೂ ಸಂತೋಷದಿಂದ ಕೇಳಲು ವಿಹಾರದಲ್ಲಿ ಭಾಗವಹಿಸುತ್ತಿದ್ದರು. ಅವರ ಸಂಖ್ಯೆ ಸುಮಾರು 15, 20 ಅಥವಾ 25 ರವರೆಗೆ ಆಗಬಹುದಿತ್ತು. ಪ್ರಬಂಧದದ ಕೆಲ ಭಾಗಗಳ ವಿಶ್ಲೇಷಣೆಯು ಹುಝೂರ್(ಅ) ನಡೆಯುತ್ತಲೇ ಹೇಳುತ್ತಿದ್ದರು. ಈ ಬರವಣಿಗೆ, ಭಾಷಣ ಹೊಸ ಹೊಸ ಟಿಪ್ಪಣಿಯಲ್ಲಿ ಅದ್ಭುತವಾದ ಆಧ್ಯಾತ್ಮಿಕತೆಯಿಂದ ತುಂಬಿದ ಜ್ಞಾನ ಹಾಗೂ ವಿಶ್ವಾಸವರ್ಧಕ ಸಾಕ್ಷ್ಯಗಳಿಂದ ಕೂಡಿದ್ದಾಗಿದ್ದವು. ಆ ದಿನಗಳಲ್ಲಿ ಹುಝೂರ್(ಅ) ಅನಾರೋಗ್ಯದಿಂದ ಬಳಲುತ್ತಿದ್ದರು. ಮುಂಜಾನೆ ಇದಕ್ಕಾಗಿಯೇ ವಿಹಾರಕ್ಕಾಗಿ ತೆರಳುತ್ತಿದ್ದರು. ನಂತರ ತಿಳಿದು ಬಂದದ್ದೇನೆಂದರೆ ಮೌಲ್ವಿ ಅಬು ಸಯೀದ್ ಮುಹಮ್ಮದ್ ಹುಸೇನ್ ಬಟಾಲ್ವಿ ಸಾಹಿಬ್‌ರ ಕೆಲವು ಗೂಢಾಚಾರರು ಈ ಪ್ರಬಂಧವನ್ನು ಕೇಳಿ ಅವರಿಗೆ ವರದಿ ಮಾಡುತ್ತಿದ್ದರು. ಆದ್ದರಿಂದ ಹುಝೂರ್(ಅ) ರವರ ಪ್ರಬಂಧದ ಹಲವು ವಚನಗಳು ಸಾಂದರ್ಭಿಕವಾಗಿ ಮುತ್ತಿನ ಹಾರದಂತೆ ಪೋಣಿಸಿ ಶೃಂಗಾರಗೊಳ್ಳುತ್ತಿದ್ದವು. ಮೌಲ್ವಿ ಸಾಹಿಬ್ ತನ್ನ ಪ್ರಬಂಧವನ್ನು ಒಟ್ಟುಗೂಡಿಸಿಕೊಂಡರು. ಆದರೆ ಸಂದರ್ಭ ಅಕ್ಷರ ಜೋಡಣೆ ಸರಿಯಾಗಿರಲಿಲ್ಲ.

(8) ಜನಾಬ್ ಖಾಜ ಕಮಾಲುದ್ದೀನ್ ಸಾಹಿಬ್ ಪ್ರಬಂಧ ಓದುತ್ತಿದ್ದರು. ಓದುವ ಅಭ್ಯಾಸ ಮಾಡುತ್ತಿದ್ದರು. ಹಾವಭಾವ ಒಳ್ಳೆಯ ಉಚ್ಛಾರದೊಂದಿಗೆ ಓದಲು ಪ್ರಯತ್ನಪಡುತ್ತಿದ್ದರು. ಏಕೆಂದರೆ ಕೇಳುಗರಿಗೆ ಮೆಚ್ಚುಗೆ ಆಗಬೇಕು ಎಂದು ಖುರ್‌ಆನ್ ವಚನಗಳನ್ನು ಹದೀಸುಗಳನ್ನು ಅಥವಾ ಅರಬಿ ಪದಗಳನ್ನು ಸುಲಲಿತವಾಗಿ ಹೇಳುವ ಪ್ರಯತ್ನ ಮಾಡುತ್ತಿದ್ದರು. ಅಲ್ಲಾಹನು ಖಾಜಾ ಸಾಹೇಬರಿಗೆ ಉರ್ದು ಪಠಣದಲ್ಲಿ ವಿಶೇಷವಾದ ಪ್ರಾವಿಣ್ಯ ನೀಡಿದ್ದನು. ಆದರೆ ಅವರಲ್ಲಿ ಖುರ್‌ಆನ್ ವಚನಗಳನ್ನು ಪಠಿಸುವುದರಲ್ಲಿ ಪ್ರಯತ್ನಗಳ ನಂತರವು ದುರ್ಬಲತೆಗಳಿದ್ದವು. ಅದನ್ನು ಖಾಜಾ ಸಾಹೇಬ್ ಶ್ರಮ ವಹಿಸಿಯೂ ಇಚ್ಛಾಶಕ್ತಿಯಿದ್ದರು. ಪರಿಪೂರ್ಣ ರೀತಿಯಲ್ಲಿ ಹೇಳಲು ಅಸಮರ್ಥರಾಗಿದ್ದರು. ಅಷ್ಟೇ ಅಲ್ಲದೇ ಇವು ದಿನಗಳಲ್ಲಿಯೇ ಅವರ ಆಪ್ತಮಿತ್ರರಿಂದ ತಿಳಿದು ಬಂದುದೇನೆಂದರೆ ಖಾಜಾ ಸಾಹೇಬರಿಗೆ ಪ್ರಬಂಧದ ಉತ್ಕೃಷ್ಟತೆ, ಗಾಂಭೀರ್ಯ ಹಾಗೂ ಪ್ರಾವಿಣ್ಯತೆ ಮತ್ತು ಸೌಂದರ್ಯಗಳ ಕುರಿತು ಅವರಿಗೆ ಅನುಮಾನಗಳು ಕಾಡುತ್ತಿತ್ತು. ಆದ್ದರಿಂದ ಅದರ ಪ್ರಭಾವ ಅವರ ಓದುವ ಶೈಲಿಯಲ್ಲಿಯೂ ಬೀಳುವುದು ಅನಿವಾರ್ಯವಾಗಿತ್ತು. ಇದರ ಸುಳಿವು ಸಯ್ಯದನಾ ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರಿಗೂ ತಲುಪಿತ್ತು.

(9) ಸಮ್ಮೇಳನದ (ಜಲ್ಸ) ಕೆಲವು ದಿನಗಳ ಮುಂಚೆಯೇ ಅಲ್ಲಾಹನು ಹುಝೂರ್(ಅ) ಅವರಿಗೆ ತನ್ನ ದಿವ್ಯವಾಣಿಯ ಮೂಲಕ ಸುವಾರ್ತೆ ನೀಡಿದನು. ಈ ಪ್ರಬಂಧವು ಎಂತಹ ಪ್ರಬಂಧವಾಗಿದೆ ಎಂದರೆ ಎಲ್ಲರ ಮೇಲೆ ವಿಜಯ ಸಾಧಿಸುವುದು ಮತ್ತು ಅದರ ಖ್ಯಾತಿ ಎಲ್ಲರ ಹೃದಯ ಸೂರೆಗೊಳಿಸುವುದು ಮತ್ತು ಇದು "ಸತ್ಯ ಸಂಧತೆಯ" ಕುರುಹು ಆಗುವುದು. ಆದ್ದರಿಂದ ಹುಝೂರ್(ಅ) 21 ಡಿಸೆಂಬರ್ 1896 ರಂದು ಒಂದು ಜಾಹಿರಾತು "ಸತ್ಯಾನ್ವೇಷಕರಿಗೆ ಒಂದು ಮಹೋನ್ನತ ಸುಸಂಧಿ" ಶೀರ್ಷಿಕೆಯಲ್ಲಿ ಬರೆದು ಬರಹಗಾರರಿಗೆ ಕೊಟ್ಟರು. ಅಂತೆಯೇ ಈ ದಾಸನನ್ನು ನೆನೆದು ಕರೆಯಿಸಿ ಈ ಗೌರವವನ್ನು ನೀಡಿದರು. ಮಿಯಾ ಅಬ್ದುಲ್ ರಹ್ಮಾನ್! ಈ ಜಾಹಿರಾತನ್ನು ಮುದ್ರಿಸಿ ಸ್ವಯಂ ಲಾಹೋರಿಗೆ ಹೋಗಿರಿ ಮತ್ತು ಖಾಜಾ ಸಾಹಿಬರಿಗೆ (ಅವರು ಒಂದು ದಿನ ಮುಂಚೆಯೇ ಜಲ್ಸದ ವ್ಯವಸ್ಥೆಗೋಸ್ಕರ ಲಾಹೋರ್‌ಗೆ ಕಳುಹಿಸಿಕೊಟ್ಟಿದ್ದರು) ಕೊಟ್ಟು ನಮ್ಮ ಕಡೆಯಿಂದ ತಾಕೀತು ಮಾಡಬೇಕು" ಇದನ್ನು ಸರಿಯಾಗಿ ಎಲ್ಲ ಕಡೆ ಪ್ರಚಾರಪಡಿಸಬೇಕು. ಅಗತ್ಯ ಬಿದ್ದರೆ ಅಲ್ಲೇ ಇನ್ನಷ್ಟು ಮುದ್ರಿಸಿಕೊಳ್ಳಿ, ನಮ್ಮ ಕಡೆಯಿಂದ ಅವರಿಗೆ ಸರಿಯಾಗಿ ತಾಕೀತು ಮಾಡಬೇಕು. ಏಕೆಂದರೆ ಅವರು ಕೆಲವು ಬಾರಿ ಹೆದರಿಕೊಳ್ಳುತ್ತಾರೆ. ಪದೇ ಪದೇ ಒತ್ತಾಯಪೂರ್ವಕವಾಗಿ ಈ ಸಂದೇಶ ತಲುಪಿಸಬೇಕು. ಹೆದರುವ ಯಾವ ಮಾತು ಇಲ್ಲ. ಈ ಕಾರ್ಯದಲ್ಲಿ ಜನರ ವಿರೋಧದ ಭಾವನೆ ಬರಬಾರದು. ಇದು ಮನುಷ್ಯನ ಕಾರ್ಯವಲ್ಲ. ಯಾರೊಬ್ಬರೂ ತಡೆದರೆ ನಿಲ್ಲಲಿಕ್ಕೆ, ಬದಲಾಗಿ ಇದು ಅಲ್ಲಾಹನ ಕಾರ್ಯವಾಗಿದೆ, ಸಂಪೂರ್ಣವಾಗಿಯೇ ತೀರುವುದು."

(10) ಜಾಹಿರಾತು ಸುಮಾರು ಅರ್ಧ ರಾತ್ರಿಯಲ್ಲಿ ತಯಾರಾಯಿತು. ನಾನು ಅದೇ ಸಮಯಕ್ಕೆ ತೆಗೆದುಕೊಂಡು ನಡಿಗೆಯಲ್ಲಿ ಬಟಾಲಕ್ಕೆ ಹೊರಟೆನು. 22 ಡಿಸೆಂಬರ್ 1896 ರ ಮಧ್ಯಾಹ್ನದ ಹೊತ್ತಿಗೆ ಲಾಹೋರ್ ತಲುಪಿದೆ. ಜನಾಬ್ ಖಾಜಾ ಸಾಹಿಬ್ ಆ ಕಾಲದಲ್ಲಿ ಲಾಹೋರಿನ ಪ್ರಸಿದ್ಧ ಮಸೀದಿ "ವಝೀರ್ ಖಾನ್ ಮಸೀದಿ"ಯ ಹಿಂದುಗಡೆ ಒಂದು ಇಕ್ಕಟ್ಟಾದ ಓಣಿಯಲ್ಲಿ ವಾಸಿಸುತ್ತಿದ್ದರು. ಹುಡುಕುತ್ತ ಹೋಗಿ ಅವರನ್ನು ಭೇಟಿಯಾದೆನು. ಜಾಹೀರಾತುಗಳ ಕಟ್ಟು ಮತ್ತು ಹುಝೂರ್(ಅ) ರವರ ಆದೇಶವನ್ನು ಕೂಲಂಕುಷವಾಗಿ ಹೇಳಿದೆನು. ಪದೇ ಪದೇ ತಾಕೀತು ಮಾಡಿಯೂ ಹೇಳಿದೆನು. ಖಾಜಾ ಸಾಹಿಬರ ಜೊತೆಯಲಿ ಆ ಸಮಯ ಇನ್ನಿಬ್ಬರು ಅಲ್ಲಿ ಉಪಸ್ಥಿತರಿದ್ದರು. ಅವರ ಹೆಸರುಗಳು ನನಗೆ ನೆನಪಿಲ್ಲ. ಖಾಜಾ ಸಾಹೇಬರು ಜಾಹಿರಾತುಗಳ ಕಟ್ಟು ಬಿಚ್ಚಿದರು ಮತ್ತು ಜಾಹಿರಾತಿನ ವಿಷಯವನ್ನು ಓದಿದರು. ನಾನು ನೋಡಿದೆ. ಅವರ ಮುಖವು ಸಂತೋಷಭರಿತ ಆಗುವ ಬದಲು ಕಳೆಗುಂದಿತು ಮತ್ತು ನಿರಾಶರಾದರು ಮತ್ತು ನನಗೆ ಸಂಬೋಧಿಸಿ ಹೇಳಿದರು. ಮಿಯಾಂ! ಹಝ್ರತ್ ಅವರಿಗೆ ಏನು ಗೊತ್ತು. ನಾವು ಇಲ್ಲಿ ಏನೆಲ್ಲ ಕಷ್ಟಗಳನ್ನು ಎದುರಿಸುತ್ತಿದ್ದೇವೆ ಎಂದು. ಇಲ್ಲಿ ಎಷ್ಟೊಂದು ವಿರೋಧವಿದೆ. ಇಂತಹ ಅವಸ್ಥೆಯಲ್ಲಿ ಈ ಜಾಹಿರಾತು ಪ್ರಕಟಿಸಿದರೆ ಇದು ಬಾರೂದಿಗೆ ಬೆಂಕಿ ಕೊಟ್ಟಂತಾಗುವುದು. ಅದನ್ನು ತಡೆಯುವುದೇ ಕಷ್ಟವಾಗಬಹುದು. ಸಂದರ್ಭಾನುಸಾರವಾಗಿ ಪರಿಸ್ಥಿತಿಗಳ ಕ್ಲಿಷ್ಟತೆಯಿಂದಾಗಿ ನಮ್ಮ ಮೇಲೆಯೂ ಕೆಲವು ಜವಾಬ್ದಾರಿಗಳಿರುತ್ತವೆ. ಇರಲಿ ದೇವರ ಇಚ್ಛೆ ಇನ್‌ಶಾಅಲ್ಲಾಹ್ ಮಾಡುವೆವು."

ಕೊನೆಗೆ ವಿಚಾರ ಮಾಡಿ, ಸಲಹೆ ಸೂಚನೆ ಮತ್ತು ಬೇಕು ಬೇಡ ಮೇಲು, ಕೀಳು ನೋಡಿಕೊಂಡು ನಂತರ ಎರಡನೇ ಅಥವಾ ಮೂರನೇ ರಾತ್ರಿಯ ಕತ್ತಲೆಯಲ್ಲಿ ಕೆಲವು ಅಪರಿಚಿತ ಸ್ಥಳಗಳಲ್ಲಿ ಕೆಲವೇ ಜಾಹಿರಾತುಗಳನ್ನು ಅಂಟಿಸಿದರು. ಅದು ಇದ್ದು ಇಲ್ಲದ ಹಾಗಿತ್ತು. ಏಕೆಂದರೆ ಅಪರಿಚಿತ ಸ್ಥಳಗಳಲ್ಲಿ ಜಾಹಿರಾತುಗಳು ಎಷ್ಟೊಂದು ಮೇಲಕ್ಕೆ ಅಂಟಿಸಲಾಗಿತ್ತೆಂದರೆ ಮೊದಲಂತೂ ನೋಡಲು ಆಗುವುದಿಲ್ಲ. ನೋಡಿದರೆ ಓದಲು ಸಾಧ್ಯವಿಲ್ಲ.

(11) ನಾನು ನೋಡಿ ಕೇಳಿದೆ. ಅವರು ಸಯ್ಯದುನಾ ಹಝ್ರತ್ ಅಖದಸ್ ಅವರ ವಾಸ್ತವ ಪ್ರಬಂಧದ ಭಾಗ ಖಾಜಾ ಸಾಹಿಬ್ ಖಾದಿಯಾನಿನಿಂದ ತಮ್ಮ ಜೊತೆಯಲ್ಲಿ ಲಾಹೋರಿಗೆ ತಂದಿದ್ದರು. ಅದರ ಅಧ್ಯಯನ ಮತ್ತು ಖುರ್‌ಆನಿನ ವಚನಗಳ ಪಠಣದ ಅಭ್ಯಾಸ ಮಾಡುತ್ತಿದ್ದರು. ಖಾಜಾ ಸಾಹಿಬ್ ಲಾಹೋರ್ ಹೋದ ಮೇಲೆ ಪ್ರಬಂಧದ ಯಾವ ಭಾಗ ಪೂರ್ಣವಾಗುತ್ತಿತ್ತೋ. ಅದರ ನಕಲು ಅವರಿಗೆ ಲಾಹೋರ್‌ಗೆ ಮುಟ್ಟಿಸಲಾಗುತ್ತಿತ್ತು. ಇದು 25 ಡಿಸೆಂಬರ್ 1896 ರ ಸಂಜೆಯ ತನಕ ಜಾರಿಯಲ್ಲಿತ್ತು ಬಹುಶ: ಡಿಸೆಂಬರ್ ರಾತ್ರಿ ತನಕವು ಜಾರಿಯಲ್ಲಿತ್ತು.

(12) ಅಲ್ಲಾಹನ ಅನುಗ್ರಹದಿಂದ ಜಲ್ಸ ಆಯಿತು. ಉತ್ತಮ ಸ್ಥಳ ಮತ್ತು ವ್ಯವಸ್ಥೆಯೊಂದಿಗೆ ನಿಜವಾಗಿಯೂ ಘೋರ ವಿರೋಧಗಳ ಮತ್ತು ಕಠಿಣ ಪರಿಸ್ಥಿತಿ ಹಾಗೂ ಅಪಾಯಕಾರಕ ಹಂತಗಳನ್ನು ದಾಟಿತು. ದೊಡ್ಡ ದೊಡ್ಡ ಆತಂಕಗಳನ್ನು ಒಡ್ಡಲಾಯಿತು. ವಿವಿಧ ತರಹದ ನೆಪಗಳು ಮತ್ತು ಸೂಕ್ಷ್ಮ ಅತಿಸೂಕ್ಷ್ಮ ಸಂಚುಗಳನ್ನು ಹೂಡಲಾಯಿತು. ಆದರೆ ಅಂತಿಮವಾಗಿ ಹಿಂದೂ, ಯಹೂದ್ ಮತ್ತು ಅವರ ಜೊತೆಗಾರರ ಖೈಬರ್ ಕೋಟೆಯು ಮುರಿದುಹೋಯಿತು. ಅದು ದಿವ್ಯವಾಣಿಯ ಪ್ರಕಾರವೇ ನಡೆಯಿತು: **ಅಲ್ಲಾಹು ಅಕ್‌ಬರ್ ಖರಬತ್ ಖೈಬರ್** ಎಂಬ ದೇವವಾಣಿಯಲ್ಲಿ ವಿವರಿಸಲಾಗಿತ್ತು. ವಿರೋಧಿಗಳು ಮುರಭವನ ಪಡೆಯದಂತೆ ಮಾಡಿದರು. ಆದರೆ ಅಲ್ಲಾಹನು ಅದಕ್ಕಿಂತ ಉತ್ತಮ ರಹದಾರಿ ತೋರಿಸಿದನು. ಇಸ್ಲಾಮಿಯಾ ಹೈಸ್ಕೂಲ್ ಶೇರಾನ್‌ವಾಲಾ ಒಳಗೆ ವಿಶಾಲವಾದ ಬಾಗಿಲು ಮತ್ತು ಎರಡು ಅಂತಸ್ತಿನ ಕಟ್ಟಡ ಭಾರಿ ಉದ್ದಗಲದ ಆವರಣ, ದೊಡ್ಡ ದೊಡ್ಡ ಕೋಣೆಗಳು, ಆವರಣ ಕೋಣೆ ಮತ್ತು ಗ್ಯಾಲರಿಗಳನ್ನು ಸೇರಿ ಒಂದು ಮಹೋನ್ನತ ಕಟ್ಟಡ ಅದು ಒಂದು ಬೃಹತ್ ಸಮಾವೇಶಕ್ಕಾಗಿ ಉತ್ತಮವಾಗಿತ್ತು. ಅದನ್ನು ಅಲ್ಲಾಹನು ದಯಪಾಲಿಸಿದನು. 26 ಡಿಸೆಂಬರ್ ಜಲ್ಸದ ಮೊದಲನೆಯ ದಿನವಾಗಿತ್ತು. ಹಾಜರಿ ಪ್ರೋತ್ಸಾಹದಾಯಕವಾಗಿರಲಿಲ್ಲ. ಸಯ್ಯದುನಾ ಹಝ್ರತ್ ಅಖದಸ್ ಮಸೀಹ್(ಅ) ರವರ ಪ್ರಬಂಧಕ್ಕಾಗಿ 27 ಡಿಸೆಂಬರ್ ದಿನದ 1.30 ಗಂಟೆ ಮಧ್ಯಾಹ್ನ ನಿಗದಿಯಾಗಿತ್ತು. ಅಲ್ಲಾಹನ ಚಮತ್ಕಾರಕ ದೃಷ್ಟಾಂತ ಎಂಬಂತೆ ಮತ್ತು ಅವನ ವಿಶೇಷವಾದ ಅನುಗ್ರಹಗಳ ಫಲವಾಗಿ ಹಝ್ರತ್ ಮೌಲಾನ ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಅತೀವ ಪ್ರೇಮಾಕಾಂಕ್ಷೆಗಳೊಂದಿಗೆ ಸಮಯಕ್ಕಿಂತ ಮೊದಲೇ ಲಾಹೋರ್ ತಲುಪಿದರು. ಅವರ ಆಗಮನದಿಂದ ನಮಲ್ಲಿ ವಿಶೇಷ ರೀತಿಯ ಸಮಾಧಾನ ಮತ್ತು ಸಂತೋಷದ ಭಾವ ಅಲ್ಲಾಹನು ದಯಪಾಲಿಸಿದನು.

(13) ಅಸಂಬಂಧ ಪರಿಸ್ಥಿತಿಗಳು, ವಿರೋಧಿಗಳ ಗೊಂದಲ ಮತ್ತು ವಿವಧ ರೀತಿಯ ಕಠಿಣತೆ ಒಳಗೊಂಡು ಸಮುದಾಯವು ಉಚಿತವಾಗಿರಲಿಲ್ಲ. ಹೀಗಾಗಿ ಬಹುಶ ಜಲ್ಸ ಎಣಿಸಿದಂತೆ ಉತ್ತಮ ಆಗಲಿಕ್ಕಿಲ್ಲ ಅಂದುಕೊಂಡೆನು. ಆದರೆ ಅಲ್ಲಾಹನ ಅಪಾರವಾದ ಅನುಗ್ರಹದಿಂದ ಜನಸಮೂಹ ನುಗ್ಗಿ ಬರುತ್ತಿದ್ದವು. ಹೀಗೆ ಅನಿಸುತ್ತಿತ್ತು. ಅಲ್ಲಾಹನ ದೇವದೂತರು ಅವರನ್ನು ಕರೆದುಕೊಂಡು ಬರುತ್ತಿದೆ ಎಂದು. ಅವರ ಮೇಲೆ ಈ ಆಳವಾದ ಪ್ರಭಾವ ಎಷ್ಟು ಬೀರಿತೆಂದರೆ ಜನರ ಮನೋಭಾವನೆ ಬದಲಾಯಿತು. ಅವರ ಹೃದಯಗಳಲ್ಲಿ ಹಗೆತನ, ದ್ವೇಷ ಬದಲಾಗಿ ಪ್ರೀತಿ ಮತ್ತು ಸ್ನೇಹದಿಂದ ತುಂಬಿದ್ದವು. ವಿರೋಧಿಗಳ ವಿರೋಧವು ಗೊಬ್ಬರದ ಕೆಲಸ ಮಾಡಿತು. ಅವರ ತಡೆಗಟ್ಟುವಿಕೆ ಸುಳ್ಳಿನ ಪ್ರಚಾರ ಜನರಿಗೆ ಈ ಕಡೆ ಗಮನಹರಿಸುವಂತೆ ಮಾಡಿತು. ಆದ್ದರಿಂದ ಜನರು ಹರಿದು ಬಂದರು. ಜಲ್ಸ ಸ್ಥಳವು ಜನಸಂದಣಿಯಿಂದ ತುಂಬಿ ಹೋಗಿತ್ತು. ಗ್ಯಾಲರಿ ತನಕವು ಜನ ಬಂದು ನಿಂತಿಕೊಂಡಿದ್ದರು. ಕಾಲು ಇಡಲಿಕ್ಕೆ ಜಾಗವಿರಲಿಲ್ಲ. ಜನರು ನುಸುಳಿಕೊಂಡು ನಿಲ್ಲುವಂತೆ ಕುಳಿತುಕೊಳ್ಳುವಂತೆ ಆಗಿತ್ತು. ಡಿಸೆಂಬರ್ ರಜಾ ದಿನಗಳಿಂದಾಗಿ ಅಲ್ಲಲ್ಲಿ ಸಭೆಗಳು, ಸಮ್ಮೇಳನಗಳೂ ನಡೆಯುತ್ತಿದ್ದವು. ಜನರ ಮಗ್ನತೆ ಅವರ ಸಂಸಾರಿಕ ಕೆಲಸಗಳು, ಭೌತಿಕ ಲಾಭದ ದಾಹಗಳಲ್ಲಿ ಒಂದು ಧಾರ್ಮಿಕ ಸಮ್ಮೇಳನದಲ್ಲಿ ಇಷ್ಟೊಂದು ಜನ ಸೇರುವಿಕೆ ನೋಡುವವರು ಪ್ರತಿಯೊಬ್ಬರೂ ಈ ದೃಶ್ಯದಿಂದ ಪ್ರಭಾವಿತರಾಗಿ ಈ ಹಾಜರಿ ಸಂಖ್ಯೆಯನ್ನು ಅಸಾಮಾನ್ಯ ಜಯ, ವಿಶೇಷವಾದ ಅಲ್ಲಾಹನ ಅನುಗ್ರಹ ಪವಾಡವೇ ಸರಿ ಎನ್ನುವಂತಿತ್ತು. ಇದನ್ನು ಒಬ್ಬ ಹಿಂದುವನ್ನಾಗಲಿ, ಸಿಖ್, ಆರ್ಯ ಸಮಾಜದವನಾಗಲಿ ನಿರಾಕರಿಸುವಂತಿರಲಿಲ್ಲ. ಮುಸಲ್ಮಾನ, ಕ್ರೈಸ್ತ, ಯಹೂದಿ ಅಥವಾ ದೇವ ಸಮಾಜ ಅಲ್ಲದೇ ಪ್ರತಿ ವರ್ಗ ಪಂಗಡಗಳ ಜನರು ಇಂದಿನ ಅದ್ಭುತ ಪವಾಡ ಸದೃಶ್ಯ ರೀತಿ ಕಂಡು ಬೆರಗಾಗುತ್ತಿದ್ದರು. ನೋಡುವುದರಲ್ಲಿ ಮತ್ತು ಕೇಳುವುದರಲಿ ವ್ಯತ್ಯಾಸವಿರುತ್ತದೆ. ಈ ಸಮ್ಮೇಳನದ ರೂಪುರೇಷೆ ಪದಗಳಲ್ಲಿ ವಿವರಿಸಲು ಅಸಾಧ್ಯ. ಸಂಕ್ಷಿಪ್ತವಾಗಿ ಹೇಳಬೇಕಾದರೆ ಈ ಸಮ್ಮೇಳನವು ತನ್ನ ಪರಿಸರದ ನಿಮಿತ್ತ ಖಂಡಿತವಾಗಿಯೂ ಮಹೋನ್ನತವಾದುದು. ಅದ್ವಿತೀಯ ಮತ್ತು ಅನುಮಾನರಹಿತವಾಗಿತ್ತು.

(14) ಪ್ರಬಂಧ ಪ್ರಾರಂಭವಾಗುತ್ತಿದ್ದಂತೆಯೇ ಜನರು ತನ್ನಂತಾನೇ ಪ್ರಭಾವಿತರಾಗಿ ಮಂತ್ರಮುಗ್ಧರಾಗುತ್ತಿದ್ದರು. ಅವರ ನಾಲಿಗೆಯ ಮೇಲೆ ಸುಬ್‌ಹಾನಲ್ಲಾಹ್! ಸುಬ್‌ಹಾನಲ್ಲಾಹ್! ಎಂಬ ಪದಗಳು ಹೊರಬೀಳುತ್ತಿದ್ದವು. ವಿದ್ಯಾಬಲದಿಂದ ಮತ್ತು ಮಿಸ್‌ಮೇರೇಝುಂ ಮೂಲಕ ಮಂತ್ರಮುಗ್ಧರನ್ನಾಗಿ ಮಾಡಬಹುದೆಂದು ಕೇಳಿದ್ದೆವು. ಆದರೆ ಸಾವಿರಾರು ಜನರ ಸಮೂಹ ಅದರಲ್ಲಿ ವಿವಿಧ ಸಾಮರ್ಥ್ಯಉಳ್ಳವರು, ವಿಶ್ವಾಸ ಹೊಂದಿದವರು, ಮೊದಲಾದವರು ಭಾಗವಹಿಸಿದ್ದರು. ಈ ತರಹದ ಪ್ರಭಾವ ಬೀರಿರುವುದು ನಿಜವಾಗಿಯೂ ಒಂದು ಪವಾಡ, ದೈವಶಕ್ತಿಯ ಫಲವಾಗಿತ್ತು. ಹಝ್ರತ್

ಮೌಲಾನಾ ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಅವರಿಗೆ ಪವಿತ್ರ ಖುರ್‌ಆನಿನೊಂದಿಗೆ ಒಂದು ರೀತಿಯ ಅನ್ಯೋನ್ಯ ಪ್ರೇಮವಿತ್ತು. ಅಂತೆಯೇ ಅಲ್ಲಾಹನು ಅವರಿಗೆ ಅವರ ಧ್ವನಿಯಲ್ಲಿ ದಾಊದರ ಮಧುರತೆ ನೀಡಿದ್ದನು. ಅಲ್ಲದೇ ಅವರು ಈ ವಚನಗಳನ್ನು ವಿಷಯದೊಂದಿಗೆ ಸಬಂಧಿಸಿದಂತೆ ಮತ್ತು ಅದರ ಸತ್ಯತೆಯಿಂದ ಪ್ರಭಾವಿತಗೊಂಡು ಆವೇಶಭರಿತವಾಗಿ ಮನೋಲ್ಲಾಸದಿಂದ ಪಠಿಸುತ್ತಿದ್ದರು. ಅವರ ಈ ತನ್ಮಯತೆಯಿಂದ ಶ್ರೋತೃಗಳು ಪ್ರಭಾವಿತರಾಗದೆ ಇರುತ್ತಿರಲಿಲ್ಲ. ಆದರೂ ಈ ಸಭೆಯು ಅತ್ಯಂತ ಅದ್ಭುತಕರವಾಗಿತ್ತು. ಯಾವ ತರಹದ ಪ್ರಭಾವ ಬೀರುತ್ತಿದ್ದರೆಂದರೆ ಪ್ರಾರಂಭದಿಂದ ಹಿಡಿದು ಕೊನೆಯವರೆಗೂ ಅವರ ಖುರ್‌ಆನ್ ವಚನಗಳ ಉಚ್ಚಾರವಾಗಲಿ ಅದರ ವಿಶ್ಲೇಷಣೆ ಕ್ರಮವಾಗಲಿ ಇಡೀ ಪ್ರಬಂಧ ಎಂತಹದೊಂದು ವಿವೇಕಪೂರ್ಣ ಸಾಹಿತ್ಯ, ಪ್ರಭಾವಶಾಲಿ ಹಾಗೂ ಉತ್ಸಾಹಭರಿತವಾಗಿತ್ತೆಂದರೆ ಅವರ ಭಾಷಾಶೈಲಿ ಕಿಂಚಿತ್ತೂ ತಡಪಡಿಸುತ್ತಿರಲಿಲ್ಲ. ಉತ್ಸಾಹದಲ್ಲಿ ಕುಂದುಂಟಾಗುತ್ತಿರಲಿಲ್ಲ. ಮಾರ್ಮಿಕ, ಅರ್ಥಗಾಂಭೀರ್ಯ ಜೊತೆಯಲಿ ಅವರ ವಾಕ್‌ಚಾತುರ್ಯತೆ, ಪ್ರಬಂಧದ ಸೌಂದರ್ಯತೆ, ಸೂಕ್ಷ್ಮತೆ ಕೇಳುಗರ ಮೇಲೆ ಅಪ್ರತಿಮ ಪ್ರಭಾವ ಬೀರಿ ಮಂತ್ರಮುಗ್ಧ ಮಾಡುವಂತಿತ್ತು. ಹಿಂದೂ ಸಿಖ್ ಅಲ್ಲದೇ ಅಪ್ಪಟ ಆರ್ಯ ಸಮಾಜದವರ ಹಾಗೂ ಕ್ರೈಸ್ತರ ಬಾಯಿಂದಲೂ ಸ್ವಯಂ ಪ್ರೇರಣೆಯಿಂದ ಸುಬ್‌ಹಾನಲ್ಲಾಹ್! ಸುಬ್‌ಹಾನಲ್ಲಾಹ್ ಎನ್ನುತ್ತಿದ್ದರು.

ಸಾವಿರಾರು ಮನುಷ್ಯರ ಈ ಸಮೂಹ ಕಿಂಚಿತ್ತು ಅಲುಗಾಡದೆ ವಿಗ್ರಹಮೂರ್ತಿಯಂತಾಗಿದ್ದರು. ಅವರ ಶಿರದ ಮೇಲೆ ಪಕ್ಷಿಗಳು ಬಂದು ಕುಳಿತರೂ ಅವರಿಗೆ ಜ್ಞಾನ ಹೊಂದುತ್ತಿರಲಿಲ್ಲ. ಪ್ರಬಂಧದ ಆಧ್ಯಾತ್ಮಿಕ ಪ್ರಭಾವ ಹೃದಯಗಳ ಮೇಲೆ ಆವರಿಸಿತ್ತು. ಅದರ ಓದುವಿಕೆಯ ಧ್ವನಿಯನ್ನು ಹೊರತುಪಡಿಸಿ ಶ್ವಾಸ ತೆಗೆದುಕೊಳ್ಳುವ ಸದ್ದು ಬರುತ್ತಿರಲಿಲ್ಲ. ದೈವಿಶಕ್ತಿಯಿಂದ ಪ್ರಾಣಿಗಳೂ ಮೌನ ಸಾಧಿಸಿದ್ದವು. ಆಯಸ್ಕಾಂತ ರೀತಿಯಲ್ಲಿ ಪ್ರಬಂಧವು ತನ್ನತ್ತ ಸೆಳೆಯುತ್ತಿತ್ತು. ಯಾವ ಬಾಹ್ಯ ಧ್ವನಿಯು ಅಡ್ಡ ಬರುತ್ತಿರಲಿಲ್ಲ. ಹೆಚ್ಚು ಕಮ್ಮಿ ಎರಡು ಗಂಟೆಯವರಗೆ ನಿರಂತರ ಇದೇ ಪ್ರಭಾವವಿತ್ತು. ವಿಷಾದದ ಸಂಗತಿ ಏನೆಂದರೆ ಆ ವಸ್ತುಸ್ಥಿತಿ ವರ್ಣಿಸಲು ನಾನು ಅಸಮರ್ಥನಾಗಿದ್ದೇನೆ. ಅಕಟಾ! ನಾನು ಆ ಸ್ಥಿತಿ ಅಲ್ಲಿ ಪಡೆದಂತಹ ಘಟನೆಗಳು ನಾನು ನೋಡಿದ್ದು ಕೇಳಿದ್ದು ಲವಲೇಶ ಮಾತ್ರವಾದರೂ ವಿವರಿಸಲು ಸಮರ್ಥನಾಗಬೇಕಿತ್ತು. ಆದ್ದರಿಂದ ಈ ಶೈಕ್ಷಣಿಕ ಪವಾಡ ಮತ್ತು ಪ್ರಭಾವ ಸ್ಪಷ್ಟವಾಗಿ ಅಲ್ಲಾಹನ ಸೃಷ್ಟಿಗಳ ಕಿವಿಗಳು ಸತ್ಯವನ್ನು ಆಲಿಸಲು ಮತ್ತು ಮನಃ ಪೂರ್ವಕವಾಗಿ ಅದನ್ನು ಸ್ವೀಕರಿಸಲು ಸಿದ್ಧರಾಗುತ್ತಿದ್ದರು. ಅದರಿಂದ ಲೋಕದ ಪಾಪಗಳು ತಮ್ಮ ಆಲಸ್ಯತನ ದೂರವಾಗಿ ಸಾವಿರಾರು ಮನುಜರು ಸತ್ಯವನ್ನು ಸ್ವೀಕರಿಸುವ ಭಾಗ್ಯ ಪಡೆಯುತ್ತಿದ್ದರು.

(15) ಮೂರೂವರೆ ಗಂಟೆಯಾಯಿತು. ಸಮಯ ಮುಗಿಯಿತು. ಅ ಕಾರಣದಿಂದ ಈ ರಸಿಕತೆಯಲ್ಲಿ ವಿರಾಮ ಉಂಟಾಯಿತು. ಮುಂದೆ ಅರ್ಧ ಗಂಟೆತನಕ ಮೌಲ್ವಿ ಮುಬಾರಕ್ ಅಲಿ ಸಾಹಿಬ್ ಸಿಯಾಲ್ಕೋಟಿ ತಮ್ಮ ಪ್ರಬಂಧ ಓದಬೇಕಾಗಿತ್ತು. ಅವರು ತಟ್ಟನೆ ಎದ್ದು ನಿಂತು ಜನರ ಮಿಡಿತ ಅರಿತುಕೊಂಡು "ಇದೆ ಪ್ರಬಂಧ ಜಾರಿಯಲ್ಲಿರಲಿ. ಇನ್ನೊಬ್ಬರ ಬದಲಿಗೆ ಅವರ ಪ್ರಬಂಧಕ್ಕೆಯೇ ಸಮಯ ನೀಡಿ, ಅವರು ಪೂರ್ಣಗೊಳಿಸಲಿ." ಹೀಗೆ ತಮ್ಮ ಸಮಯವನ್ನು ಕೊಟ್ಟು ಪುರ್ಣಗೊಳಿಸಲು ಹೇಳಿದರು. ಅಲ್ಲದೇ ಘಂಟಾಘೋಷವಾಗಿ ಹೇಳಿದರು. ನಾನು ನನ್ನ ಸಮಯ ಮತ್ತು ನನ್ನ ಇಚ್ಛೆ ಈ ಅಮೂಲ್ಯ ಪ್ರಬಂಧಕ್ಕಾಗಿ ತ್ಯಾಗ ಮಾಡುವೆನು. ಹಾಗೆಯೇ ಮತ್ತೆ ಅದೇ ಪ್ರಿಯ ಅಚ್ಚುಮೆಚ್ಚಿನ ಮತ್ತು ಮನೋಹರವಾದ ಮತ್ತು ಸುಂದರವಾದ ವಿಷಯ ಮುಂದುವರೆಯಿತು. ಮತ್ತೆ ಅದೇ ದೃಶ್ಯ ಕಟ್ಟುವಂತಾಯಿತು. ನಾಲ್ಕು ಗಂಟೆಯಾಯಿತು. ಆದರೂ ಪ್ರಬಂಧ ಇನ್ನೂ ಬಾಕಿ ಇತ್ತು. ಆದರ ದಾಹ ಕುಗ್ಗುವ ಬದಲು ಇನ್ನೂ ಇಮ್ಮಡಿಗೊಳ್ಳುತ್ತಿತ್ತು. ಕೇಳುಗರ ಒತ್ತಾಯ ಮತ್ತು ಸ್ವಯಂ ವ್ಯವಸ್ಥಾಪಕರ ಆಸಕ್ತಿಯ ಮೇರೆಗೆ ಪ್ರಬಂದದ ಓದುವಿಕೆ ಮುಂದುವರೆಯಿತು. ಐದೂವರೆ ಗಂಟೆಯಾಯಿತು. ರಾತ್ರಿಯ ಅಂಧಕಾರವು ತನ್ನ ಕಪ್ಪು ನೆರಳನ್ನು ನೀಡತೊಡಗಿತು. ವಿವಶರಾಗಿ ಈ ಅತ್ಯಂತ ಮಧುರ ಹಾಗೂ ವಿವೇಕಪೂರ್ಣ ಮತ್ತು ಸಂತಸ ಭರಿತ ಸಭೆ ಮುಕ್ತಾಯ ಹಂತಕ್ಕೆ ತಲುಪಿತು ಮತ್ತು ಉಳಿದ ಪ್ರಬಂಧವು 29 ಡಿಸೆಂಬರ್‌ವರೆಗೆ ಮುಂದೂಡಲಾಯಿತು.

ಇದರ ರಸಿಕತೆ ಮತ್ತು ಮಧುರತೆಯಿಂದ ಪ್ರಭಾವಿತರಾಗದ ಯಾವ ಹೃದಯವು ಇರಲಿಲ್ಲ. ಇದರ ಸುಮದುರತೆ ಹಾಗೂ ಉತ್ಕೃಷ್ಟತೆ ವರ್ಣಿಸದ ಯಾವ ನಾಲಿಗೆಯೂ ಇರಲಿಲ್ಲ. ಪ್ರತಿಯೊಬ್ಬರ ನಾಲಿಗೆಯು ಇದರ ಪ್ರಶಂಸೆ ಮತ್ತು ಹೊಗಳಿಕೆಯಿಂದ ತುಂಬಿದ್ದವು. ಪ್ರತಿಯೊಬ್ಬರೂ ಮನಸಾರೆ ಸಾಕ್ಷಿವಹಿಸುತ್ತಿದ್ದರು. ಈ ಪ್ರಬಂಧ ಎಲ್ಲರ ಮೇಲೆ ವಿಜಯ ಸಾಧಿಸಿದೆ. ನನ್ನ ವಿಶಾಲತೆ, ಸಾಹಿತ್ಯಕ ಸೂಕ್ಷ್ಮತೆ ಮತ್ತು ಸೌಂದರ್ಯತೆಯಿಂದಾಗಿ ಈ ಪ್ರಬಂಧ ಜಲ್ಸದ ಸುಮದರತೆ, ಆತ್ಮ ಮತ್ತು ಯಶಸ್ಸಿಗೆ ಕಾರಣವಾಗಿತ್ತು. ಕೇವಲ ಅಷ್ಟೇ ಅಲ್ಲ. ಬದಲಾಗಿ ನಾವು ನಮ್ಮ ಕಿವಿಗಳಿಂದ ಕೇಳಿದೆವು ಹಾಗೂ ಕಣ್ಣುಗಳಿಂದ ಕಂಡಿದ್ದೇವೆ. ಹಲವು ಹಿಂದೂ ಮತ್ತು ಸಿಖ್ ಮಹಾನೀಯರು ಮುಸಲ್ಮಾನರನ್ನು ತಬ್ಬಿಕೊಂಡು ಹೇಳುತ್ತಿದ್ದರು. "ಪವಿತ್ರ ಖುರ್‌ಆನಿನ ಶಿಕ್ಷಣ ಇದೇ ಎಂದಾದರೆ ಮತ್ತು ಇದೇ ಇಸ್ಲಾಂ ಎಂದಾದರೆ ಇಂದು ಮಿರ್ಝಾ ಸಾಹೇಬ್ ಏನೆಲ್ಲಾ ವಿವರಿಸಿದ್ದಾರೆ. ನಾವು ಇಂದಿಲ್ಲ ನಾಳೆ ಅದನ್ನು ಸ್ವೀಕರಿಸಲು ವಿವಶರಾಗುವೆವು. ಮಿರ್ಝಾ ಸಾಹೇಬರು ಇದೇ ತರಹದ ಒಂದೆರಡು ಪ್ರಬಂಧಗಳನ್ನು ಕೇಳಿಸಿದರೆ ನಿಸ್ಸಂಶಯವಾಗಿ ಇಸ್ಲಾಂ ನಮ್ಮ ಧರ್ಮವಾಗುವುದು.

(16) ಇಂದಿನ ಜಲ್ಸ 27 ಡಿಸೆಂಬರ್‌ಗೆ ಮುಕ್ತಾಯಗೊಂಡಿದೆ. ಜನರು ತಮ್ಮ ಮನೆಗಳಿಗೆ ಹೋಗುತ್ತಿದ್ದರು. ಜಲ್ಸ ಸ್ಥಳದ ಬಾಗಿಲಲ್ಲಿ ನಾನು ನೋಡಿದೆ. ಅದರ ಎರಡೂ ಬದಿಯಲ್ಲಿ ಇಬ್ಬರು ನಿಂತಿದ್ದರು. ಸಯ್ಯದುನಾ ಹಝ್ರತ್ ಅಖದಸ್(ಅ) ರವರ ಅದೇ ಜಾಹಿರಾತು ಹಂಚುತ್ತಿದ್ದರು. ಅದನ್ನು ಹುಝೂರ್ ತನ್ನ ಕೈಯಲ್ಲಿ ವಿಶೇಷ ತಾಕೀತಿನೊಂದಿಗೆ ಕಳುಹಿಸಿದ್ದರು. ಅದನ್ನು ಪ್ರಸಿದ್ಧ ಸ್ಥಳಗಳಲ್ಲಿ ಅಂಟಿಸಬೇಕು ಎಂದು. ಜಲ್ಸಕ್ಕಿಂತ ಮುಂಚೆಯೇ ಧಾರಾಳವಾಗಿ ಪ್ರಕಟಿಸಲು ಹೇಳಿದ್ದರು. ಅಲ್ಲದೇ ಹೀಗೂ ತಾಕೀತು ಮಾಡಿದ್ದರು. ಇವು ಸ್ವಲ್ಪ ಮಾತ್ರ ಇವೆ. ಅಗತ್ಯಬಿದ್ದರೆ ಲಾಹೋರಿನಲ್ಲಿ ಇನ್ನು ಮುದ್ರಸಿಕೊಳ್ಳಿ. ಏಕೆಂದರೆ ಸಮಯಕ್ಕೆ ಮುಂಚಿತವಾಗಿ ಪ್ರಕಟಿಸಿದ ಅಲ್ಲಾಹನ ಈ ದೃಷ್ಟಾಂತದ ಗೌರವ ಬಹಿರಂಗವಾಗುವುದು. ಅದರಿಂದ ಪವಿತ್ರ ಆತ್ಮಗಳು ಸತ್ಯವನ್ನು ಸ್ವೀಕರಿಸುವರು. ಆದರೆ ಆದದ್ದೇನೆಂದರೆ ಖಾಜಾ ಕಮಾಲುದ್ದೀನ್ ಸಾಹೇಬ್ ಹೆದರಿಕೊಂಡ ಕಾರಣ ಇಡೀ ಲೋಕವು ಮೊದಲು ಅಲ್ಲಾಹನ ದೃಷ್ಟಾಂತವನ್ನು ಕಂಡಿತು. ನಂತರ ಅದರ ವಿಜಯವನ್ನು ಮನ್ನಿಸಿದರು ಅದಾದ ನಂತರ ಅವರಿಗೆ ಆ ಜಾಹಿರಾತು ತಲುಪಿಸಲಾಯಿತು. ಅದು ಎಷ್ಟೋ ದಿವಸಗಳ ಮೊದಲೇ ಮುದ್ರಿಸಿ ಒಳ್ಳೆಯ ರೀತಿಯಲ್ಲಿ ಪ್ರಕಟಿಸಲು ಕಳುಹಿಸಲಾಗಿತ್ತು. ಅದಾಗ್ಯೂ ಸಯ್ಯದುನಾ ಹಝ್ರತ್ ಅಖದಸ್ ಮಸೀಹ್(ಅ) ರವರಿಗೆ ಖಾಜಾ ಕಮಾಲುದ್ದೀನ್ ಸಾಹೇಬರ ಈ ದುರ್ಬಲತೆಯ ಮತ್ತು ಆಲಸ್ಯದ ಮಾಹಿತಿ ದೊರೆಯಿತು. ಆಗ ಹುಝೂರ್(ಅ) ತುಂಬ ಕೋಪಗೊಂಡರು. ಮತ್ತು ಎಷ್ಟೋ ದಿನಗಳವರೆಗೆ ಈ ದೈವಿಕ ದೃಷ್ಟಾಂತದ ಮಾತು ಬರುತ್ತಿತ್ತು ಅಥವಾ ಹೊರಗಡೆಯಿಂದ ಇದರ ಯಶಸ್ಸಿನ ಪ್ರತಿ ವರದಿಗಳು ದೊರೆತಿತ್ತು. ಖಾಜಾ ಸಾಹೆಬರ ಆ ದುರ್ಬಲತೆ ಕುರಿತು ವಿಶಾದ ವ್ಯಕ್ತಪಡಿಸುತ್ತಿದ್ದರು ಎಂದು ಕೇಳಿಬರುತ್ತದೆ.

ಪ್ರಬಂಧದ ಖ್ಯಾತಿ ಮತ್ತು ಜನರ ಒತ್ತಾಯ ಹಾಗೂ ಆಪೇಕ್ಷೆಯಿಂದ ಪ್ರಭಾವಿತಗೊಂಡು ಪ್ರಬಂಧಕರ ಸಮಿತಿಯ ವಿಶೇಷ ಸಭೆ ಸೇರಿತು. ಅದರಲ್ಲಿ ಈ ಠರಾವು ಮಂಜೂರು ಮಾಡಲಾಯಿತು. ಹಝರತ್ ಮಿರ್ಝಾ ಸಾಹೇಬರ ಪ್ರಬಂಧ ಪೂರ್ಣಗೊಳಿಸಲು ಸಭೆ ತನ್ನ ಕಾರ್ಯಕ್ರಮದಲ್ಲಿ ಒಂದು ದಿನ ಬಡ್ತಿಗೊಳಿಸಿ 29 ಡಿಸೆಂಬರ್ ನಾಲ್ಕನೇ ದಿನವನ್ನಾಗಿ ಸೇರಿಸಿಕೊಳ್ಳುತ್ತಿದ್ದೆ.

ಹುಝೂರ್(ಅ) ಪ್ರಬಂಧದ ಈ ಅಸಾಮಾನ್ಯ ಪ್ರಖ್ಯಾತಿ ಸಹಿಸುವವರು ಮೌಲ್ವಿ ಮುಹಮ್ಮದ್ ಅಬ್ದುಲ್ಲಾಹ್ ಸಾಹಿಬ್ ಬಡ್ತಿಗೊಳಿಸಿದ ಸಮಯ ಮತ್ತು ವಿಶೇಷ ರೀತಿಯ ಪ್ರಾಮುಖ್ಯತೆಯನ್ನು ಕಡಿತಗೊಳಿಸಲು ತನಗಾಗಿಯೇ ಸಮಯ ಹೆಚ್ಚಿಸುವಂತೆ ನೋಡಿಕೊಂಡರು. ಆದ್ದರಿಂದ ಅವರಿಗಾಗಿ ಅರ್ಧ ಗಂಟೆ ಹೆಚ್ಚು ಮಾಡಲಾಯಿತು. ಆದರೆ ಮರುದಿನ ಅವರು ಆಗಮಿಸಲಿಲ್ಲ ಮತ್ತು ತನ್ನ ಸಮಯವನ್ನು ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಬಟಾಲ್ವಿಗಾಗಿ ಬಿಟ್ಟುಕೊಟ್ಟರು. ಅದಕ್ಕೆ ಕಾರಣ ಸ್ಪಷ್ಟವಾಯಿತು. ಅದರೆ ಅಲ್ಲಾಹನ ವಿಧಿ! ಹಾಜರಿ ತುಂಬ ನಿರುತ್ಸಾಹಜನಕವಾಗಿತ್ತು. ಜಲ್ಸ ಸ್ಥಳ ತುಂಬುವ ನಿರೀಕ್ಷೆಯಲ್ಲಿಯೇ ಸಮಯ ಕಳೆಯುತ್ತಿತ್ತು. ನಿನ್ನೆಯ ಹಾಗೆ ಸಭೆ ಕಳೆ ಹೊಂದಿರಲಿಲ್ಲ. ದೀರ್ಘ ನಿರೀಕ್ಷೆಯ ನಂತರವೂ ಅವರ ಆಸೆ ಪೂರ್ಣಗೊಳ್ಳುವ ಲಕ್ಷಣ ಕಾಣದಿದ್ದಾಗ ಸುಖಾ ಸುಮ್ಮನೆ ನಿಂತುಕೊಂಡರು. ಬರೆದುಕೊಂಡು ಬಂದದ್ದೆಲ್ಲ ಓದಿಯಾಯಿತು. ಹೆಚ್ಚು ಸಮಯ ತೆಗೆದುಕೊಂಡರೂ ಸಂತುಷ್ಟರಾಗಲಿಲ್ಲ ಜನರು ಕೂಡ ಪ್ರಶಂಸೆ ಮಾಡಲಿಲ್ಲ.

(17) 29 ಡಿಸೆಂಬರ್ ಮುಂಜಾನೆಯ 9:30 ಗಂಟೆಗೆ ಜಲ್ಸ ಕಾರ್ಯಕ್ರಮ ಪ್ರಾರಂಭವಾಗಲಿಕ್ಕಿತ್ತು. ಡಿಸೆಂಬರಿನ ಅಂತಿಮ ದಿನಗಳು, ವಿಪರೀತ ಚಳಿ ಮತ್ತು ಇಷ್ಟು ಮುಂಜಾನೆಯ ಅವಧಿಯಲ್ಲಿ ಜನರು ತಮ್ಮ

ಅಗತ್ಯಗಳನ್ನು ಪೂರೈಸಿಕೊಳ್ಳುವುದೇ ಕಷ್ಟವಾಗಿತ್ತು. ಇಷ್ಟು ಮುಂಜಾನೆಯಲ್ಲಿ ಸಾಮಾನ್ಯವಾಗಿ ನಗರಗಳಲ್ಲಿ ಹಾಸಿಗೆ ಬಿಟ್ಟು ಏಳುವುದೇ ಕಷ್ಟ. ಆದ್ದರಿಂದ ಚಿಂತೆ ಕಾಡುತ್ತಿತ್ತು. ಹಾಜರಿ ಕಡಿಮೆ ಆಗುವ ಅಪಾಯ ಕಾದಿತ್ತು. ಹೀಗೆ ನಿನ್ನೆಯ ಹಾಗೆ ಇಂದು ಆ ದೃಶ್ಯ ಲಭಿಸಿರಲಿಕ್ಕಿಲ್ಲ ಎಂದುಕೊಂಡಿದ್ದೆವು. ಆದರೆ ದೈವಿಕ ಕಾರ್ಯಗಳು ತನ್ನೊಳಗೆ ಅಸಾಮಾನ್ಯ ಲವಲವಿಕೆ ಮತ್ತು ಆಯಸ್ಕಾಂತ ರೂಪದ ಸೆಳೆತ ಹೊಂದಿರುತ್ತವೆ. ಅದನ್ನು ಯಾವ ಶಕ್ತಿಯು ತಡೆಯಲು ಸಾಧ್ಯವಿಲ್ಲ ಮನುಷ್ಯರು ಅಲಕ್ಷ್ಯತೆ ಆಲಸ್ಯ ತೋರಿದರೆ ಅವನು ತನ್ನ ದೇವದೂತರಿಂದ ಕಾರ್ಯ ಮಾಡಿಸಿಕೊಳ್ಳುತ್ತಾನೆ. ಅಂದ ಹಾಗೆ ಮುಂಜಾನೆಯೇ ಕಂಪಿಸುತ್ತ ಮತ್ತು ಚಳಿಯಿಂದ ಮುದುರಿಕೊಂಡು ತಬ್ಬಿಕೊಂಡು ಭಕ್ತದಾಸರ ಸಮೂಹಕ್ಕೆ ಸಮೂಹವೇ, ಗುಂಪುಗುಂಪಾಗಿ, ಹೇರಳವಾಗಿ ಜನರು ಎಷ್ಟು ವೇಗವಾಗಿ ಬಂದರೆಂದರೆ 27 ರ ಮಧ್ಯಾಹ್ನದ ದೃಶ್ಯವು ಸೋಲುವಂತಿತ್ತು. ಹೀಗೆ ಜಲ್ಸವು ಅತ್ಯಂತ ಮಾನ ಸಮ್ಮಾನದಿಂದ ಮತ್ತು ಉತ್ತಮ ರೀತಿಯಲ್ಲಿ ಜಾರಿಯಾಗಿ ಅತ್ಯಂತ ಯಶಸ್ವಿಯಿಂದ ಮುಕ್ತಾಯ ಹಂತಕ್ಕೆ ತಲುಪಿತು. ಅಂತೂ ಹುಝೂರ್(ಅ) ರವರ ಪ್ರಬಂಧವು ಲೋಕದೆಲ್ಲೆಡೆ **ಅಲಾರಗ್‌ಮಿ ಉನುಫಿಲ್ ಅಲ್‌ದಾಲ** ತನ್ನ ಪ್ರಭುತ್ವ, ಸುಂದರತೆ, ಜಯ ಹಾಗೂ ಮಹಾನತೆ ಮತ್ತು ಸತ್ಯ ಸಾಕ್ಷ್ಯಗಳ ಮುದ್ರೆ ಒತ್ತಿ ಶೈಕ್ಷಣಿಕ ಲೋಕದಲ್ಲಿ ಸದಾ ನೆಲೆ ನಿಲ್ಲುವಂತಹ ದೃಷ್ಟಾಂತ ಆಗಿ ಲೌಕಿಕ ಆಕಾಶದ ಮೇಲೆ ಸೂರ್ಯ ಚಂದ್ರಗಳಂತೆ ಮಿನುಗತೊಡಗಿತು. ಮಿತ್ರರಲ್ಲದೆ ಶತ್ರುಗಳು ಸಹ ಪ್ರಶಂಸೆ ಮಾಡದೆ ಇರಲಿಲ್ಲ. ತಮ್ಮವರು ಪರರು ಜನಸಾಮಾನ್ಯರು ಮತ್ತು ಆಯೋಜಕರು ಒಟ್ಟಿನಲ್ಲಿ ಪ್ರತಿ ವಿಭಾಗದಲ್ಲೂ ಇದೇ ಪ್ರಬಂಧದ ಚರ್ಚೆ ಸಾಗಿತ್ತು. ಮತ್ತು ಸತ್ಯವು ಅವರ ನಾಲಿಗೆಯ ಮೆಲೆ ಜಾರಿಯಲ್ಲಿತ್ತು. ವಾರ್ತಾ ಪತ್ರಿಕೆಗಳು ಟಿಪ್ಪಣಿ ಬರೆದರು. ಮತ್ತು ಸತ್ಯಸಂಧತೆಯನ್ನು ಮನ್ನಿಸಿದರು. ಆಯೋಜಕ ಸಮಿತಿಯೂ ತನ್ನ ಕಡೆಯಿಂದ ಈ ಹೇಳಿಕೆಗಳನ್ನು ಸಂಬಂಧಿತ ವರದಿಗಳನ್ನು ದಾಖಲಿಸಿಕೊಂಡು ಈ ವಾಸ್ತವವನ್ನು ಸ್ಪಷ್ಟಪಡಿಸಿದರು. ನಿಜವಾಗಿಯೂ,

**ಚಢೆ ಚಾಂದ್ ಛುಪೆ ನಹಿ ರೆಹ್‌ಸಕ್ತೆ** (ಮೇಲ್ಕಾಣುವ ಚಂದ್ರವು ಅಡಗಿರಲು ಸಾಧ್ಯವಿಲ್ಲ)

ಮತ್ತು ಇದನ್ನು ನಿರಾಕರಿಸುವವರು ಮೂರ್ಖರೇ ಸರಿ. ಅಂದ ಹಾಗೆ ಅಲ್ಲಾಹನು ಮುಂಚಿತವಾಗಿ ತನ್ನ ಪವಿತ್ರ ಮತ್ತು ಪ್ರಿಯ ದಾಸ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಮೂಲಕ ಏನೆಲ್ಲಾ ಹೇಳಿದ್ದನು. ಅದು ಪೂರ್ಣಗೊಂಡಿತ್ತು. ಅಲ್ಲಾಹನ ಮಾತು ನಿಜವಾಯಿತು ಮತ್ತು ಲೋಕದ ಯಾವ ಶಕ್ತಿ ಯಾವ ಯುಕ್ತಿ, ಯಾವ ತಂತ್ರ ಮತ್ತು ನೆನಪುಗಳು ಅಲ್ಲಾಹನ ಕಾರ್ಯವು ಪೂರ್ಣಗೊಳ್ಳುವುದರಲ್ಲಿ ಅಡ್ಡಿ ಬರಲಾಗಲಿಲ್ಲ.

(18) ಮಹೋನ್ನತ ಸರ್ವಧರ್ಮ ಸಮ್ಮೇಳನದ ವರದಿ ಪ್ರಕಟವಾಯಿತು. ಆಯೋಜಕ ಸಮಿತಿ ಅದರ ಸದಸ್ಯರು ಎಲ್ಲ ಧರ್ಮ ಪಂಥಗಳ ಸದಸ್ಯರು ಉತ್ತಮ ವರ್ಗಗಳ ಹೊಣೆ ಅರಿತ ಜನರಾಗಿದ್ದರೆಂದು ಅವರ ಖರ್ಚು ವೆಚ್ಚದಿಂದ ಪ್ರಕಟವಾಯಿತು. ಈ ಜಲ್ಸದಲ್ಲಿ ಓದಿದ ಎಲ್ಲಾ ಪ್ರಬಂಧಗಳನ್ನು ಅಥವಾ ಅದಕ್ಕಾಗಿ ಬರೆದ ಬರಹಗಳು ಅದರಲ್ಲಿ ಅಕ್ಷರಶಃ ಪರಿಗಣಿಸಲಾಯಿತು. ಲೋಕವು ಈ ಧಾರ್ಮಿಕ ಮೈದಾನದಲಿ ಎಲ್ಲ ಧರ್ಮದವರನ್ನು ಒಂದೇ ವೇದಿಕೆಯಲ್ಲಿ ಕಾಣುವಂತಾಯಿತು. ಮತ್ತು ಸತ್ಯ ಮಿಥ್ಯವನ್ನು ಪರೀಕ್ಷಿಸುವಂತಾಯಿತು. ಆದರೆ ವಾಸ್ತವವೇನೆಂದರೆ ಪವಿತ್ರ ಖುರ್‌ಆನಿನ ಘನತೆ, ಇಸ್ಲಾಂ ಧರ್ಮದ ಸತ್ಯತೆ, ಮುಹಮ್ಮದ್ ರಸೂಲುಲ್ಲಾಹ್(ಸ) ಅವರ ಸತ್ಯಸಂಧತೆ ಹಾಗೂ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನ ಸಾನಿಧ್ಯ ಉಳ್ಳವರು ಮತ್ತು ಪ್ರಿಯ ದಾಸರು, ಅವನು ಹೇಳಿಸಿದ್ದನ್ನೇ ಹೇಳುವವರು ಅವರ ಸತ್ಯ ಪ್ರವಾದಿಗಳು ಸಾಬೀತುಗೊಲಿಸಲು ಸಾಕ್ಷ್ಯವಾಗಿ ಈ ಪುರಾವೆಗಳು ಸದಾ ನೆಲೆ ನಿಲ್ಲುವಂತಾಗಬೇಕು. ಹುಝೂರ್(ಅ) ರವರ ಈ ಪ್ರಬಂಧವೇ ಅಗಿದೆ. ಅದು ಉರ್ದುವಿನಲ್ಲಿ "ಇಸ್ಲಾಮಿ ಉಸೂಲ್ ಕಿ ಫಿಲಾಸಫಿ" ಹೆಸರಿನಿಂದ ಮತ್ತು ಇಂಗ್ಲೀಷಿನಲ್ಲಿ "The Philosophy of the teachings of Islam" ಶೀರ್ಷಿಕೆಯಿಂದ ಹಲವು ಸಲ ಲಕ್ಷೋಪ ಲಕ್ಷ ಸಂಖ್ಯೆಯಲ್ಲಿ ಮುದ್ರಿತವಾಗಿ ಲೋಕದ ಆಧ್ಯಾತ್ಮಿಕ ದೃಷ್ಟಿಯನ್ನು ನೀಗಿಸುವ ಸಾಮಗ್ರಿ ಹಾಗೂ ಉಪದೇಶ ಸನ್ಮಾರ್ಗದ ಹಾದಿಯನ್ನು ಸುಗಮ ಗೊಳಿಸುವ ಕಾರ್ಯ ಮಾಡುತ್ತ ಅಲ್ಲದೇ ಲೋಕದ ಹಲವು ಭಾಷೆಗಳಲ್ಲಿ ಮುದ್ರಿತವಾಗಿ ಪ್ರಕಟವಾಗುತ್ತಿದೆ.

(19) ಈ ವರದಿ ಪ್ರಕಟವಾಯಿತು. ಅಲ್ಲಾಹನ ಸಾಕ್ಷ್ಯದಂತೆ ಸಾವಿರಾರು ಜನರು ಜಲ್ಸದಲ್ಲಿ ಏನೆಲ್ಲ ನೋಡಿದರೋ ಕೇಳಿದರೋ ಅದುವೇ ವರದಿಯಲ್ಲಿ ಪ್ರಕಟವಾಗಿತ್ತು. ಎಲ್ಲ ಧಾರ್ಮಕ ಪ್ರತಿನಿಧಿಗಳು ಅವರು ಏನೆಲ್ಲ ಪ್ರಬಂಧಗಳನ್ನು ಬರೆದು ಆಯೋಜಕರ ಸಮಿತಿಗೆ ಒಪ್ಪಿಸಿದ್ದರೋ ಜಲ್ಸದಲ್ಲಿ ಓದಿದ್ದರೋ ವರದಿಯಲ್ಲಿ ಅದನ್ನೇ ನಮೂದಿಸಲಾಗಿತ್ತು. ಆದರೂ ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಬಟಾಲ್ವಿ ಅವರಿಗೆ ಮತ್ತು ಅವರ ಬುದ್ಧಿವಂತಿಗೆಗೆ ಏನೆಲ್ಲ ಬೇಕು. ವರದಿ ಪ್ರಕಟವಾದ ಮೇಲೆ ತಕರಾರು ಎಬ್ಬಿಸಿದರು. ನನ್ನ ಹೆಸರಿನಂದ ಪ್ರಕಟಿಸಲಾದ ಪ್ರಬಂಧವು ನನ್ನದ್ದಲ್ಲ ಎಂದು ಹೇಳಿದರು.

ಮೌಲ್ವಿ ಸಾಹೇಬರ ಈ ಅಪವಾದದ ಹಿಂದೆ ಇದ್ದ ಉದ್ದೇಶವು ಸ್ಪಷ್ಟವಿದೆ. ಅವರು ಸ್ಪರ್ಧೆಯಲ್ಲಿ ತೋರಿದ ಕಳಪೆ ಪ್ರದರ್ಶನದಿಂದ ಆದ ಅಪಮಾನ ಮುಚ್ಚಿಕೊಳ್ಳಬಯಸುತ್ತಿದ್ದರು. ಹಾಗೆ ನೋಡಿದರೆ ಅವರ ಈ ಕೃತ್ಯ "ಹುಝೂರ್ ಗುನಾಹ್ ಬದ್‌ತರ್ ಅಝ್ ಗುನಾಹ್" (ಪಾಪ ಮಾಡುವುದಕ್ಕಿಂತ ದೊಡ್ಡ ಪಾಪ, ಪಾಪಕ್ಕೆ ಕಾರಣ ಹುಡುಕುವುದಾಗಿದೆ) ಮತ್ತು "ಅಪ್ನೆ ಹಾತೊಂ ಅಪ್ನಿ ಖಾಕ್ ಉಡಾನ" (ತಮ್ಮ ಕೈಯಿಂದಲೇ ತಮ್ಮ ಮೇಲೆ ದೂಳು ಎಳೆದುಕೊಳ್ಳುವೆವು) ಎಂಬಂತಾಗಿದೆ. ಈ ಕೃತ್ಯ ಆಯೋಜಕರಿಗೆ ತಿಳಿಯದೇ ಇರಲಿಲ್ಲ. ಹಾಗಾಗಿ ಮೌಲ್ವಿ ಸಾಹೇಬರ ಗುಪ್ತವಾದ ವಿಷಯ ಇನ್ನೂ ಬಹಿರಂಗವಾದಂತಾಯಿತು. ಇದರಿಂದ ಮೌಲಾನ ಸಾಹೇಬ್ ಇನ್ನೂ ಕೆಂಡಾಮಂಡಲವಾದರು. ಆದ ಈ ಅಘಾತದಿಂದ ತಲ್ಲಣಗೊಂಡರು. ಅವರಲ್ಲಿ ಇದರ ಪರಿಹಾರವೇ ಇರಲಿಲ್ಲ. ಏಕೆಂದರೆ ಇದರಲ್ಲಿ ಮಾನವರ ಕೈವಾಡ ಇರಲಿಲ್ಲ. ಹೇಗೆ ತಾನೇ ಮಾನವ ಕುತಂತ್ರಗಳು ಫಲಿಸಬಹುದಾಗಿದೆ. ಅವರು ಹೇಳಿದ್ದು ವಾಸ್ತವವಾಗಿದ್ದರೆ ತಮ್ಮ ಅಸಲು ಪ್ರಬಂಧ ಪ್ರಕಟಿಸಿ ಏಕೆ ಆದ ಮೋಸವನ್ನು ಬಹಿರಂಗಕ್ಕೆ ತರಲಿಲ್ಲ.

**ಬರೀಂ ಅಖಲ್ ವ ದಾನಿಷ್ ಬಬಾಎದ್ ಗುರೇಸ್ತ್**

(20) ಸ್ವಾಮಿ ಶುಗರ್‌ಚಂದ್ರ ಸಾಹಿಬ್ ಅವರಿಂದ ಅಲ್ಲಾಹನು ಈ ಮಹೋನ್ನತ "ಸತ್ಯಸಾಕ್ಷ್ಯದ ಕುರುಹು' ಬಹಿರಂಗ ಮಾಡಬೇಕಿತ್ತು. ಅದಕ್ಕೆ ತಕ್ಕುದಾದ ಎಲ್ಲ ಸಾಮಗ್ರಿಗಳನ್ನು ಒದಗಿಸಿದರು. ಅವರು ಜಲ್ಸದ ಎಲ್ಲ ಚಟುವಟಿಕೆಗಳ ಮದ್ಯ ಮತ್ತು ವರದಿ ಪ್ರಕಟ ಆಗುವವರೆಗೆ ಆಗಾಗ ಭೇಟಿಯಾಗುತ್ತಿದ್ದರು. ಮತ್ತೆ ಅವರು ಎಲ್ಲಿ ಹೋದರು. ಏನೂ ತಿಳಿಯದಂತಾಯಿತು. ಎಂದರೆ ಅಲ್ಲಾಹನ ಚಮತ್ಕಾರದ ಕೈ ಅವರನ್ನು ಇಡೀ ಉದ್ದೇಶದಿಂದ ಖಾದಿಯಾನಿಗೆ ಕರೆ ತಂದಿದ್ದನು ಮತ್ತು ಅವನೇ ಮಾಯವಾಗಿಸಿದನು.

Note: ಹಝ್ರತ್ ಮುನ್‌ಶಿ ಜಲಾಲುದ್ದೀನ್ ಸಾಹಿಬ್ ಬಲಾನ್ವಿ ಮತ್ತು ಹಝ್ರತ್ ಫೀರ್‌ಜೀ ಸಿರಾಜುಲ್ ಹಖ್ ಸಾಹಿಬ್ ನೊಮಾನಿ(ರ) ಇಬ್ಬರೂ ಗೌರವಾನ್ವಿತರ ಕೈಗಳಿಂದ ನಕಲಾದ ಹಜ್‌ರತ್ ಅಖದಸ್ ಅವರ ಪ್ರಬಂಧ ಅದು ಹಝ್ರತ್ ಮೌಲಾನ ಮೌಲ್ವಿ ಅಬ್ದುಲ್ ಕರೀಮ್ ಸಾಹಿಬ್ ಈ ಜಲ್ಸದಲ್ಲಿ ಓದಿದ್ದರು. ಇಂದಿನವರೆಗೆ ನನ್ನ ಬಳಿ ಸುರಕ್ಷಿತವಿದೆ. ಆದರೆ ಈ ಪವಿತ್ರ ಮತ್ತು ಅಮೂಲ್ಯ ಅಮಾನತ್ ರಕ್ಷಿಸುವ ಹೋಣೆ ಹಕ್ಕು ನನ್ನಿಂದಾಗದ ಕೆಲಸ. ಆದ್ದರಿಂದ ಈ ಸಾಮುದಾಯಕ ಹೊಣೆ ಅದರ ರಕ್ಷಣೆಯ ಹಕ್ಕು ಪಾಲನೆಗಾಗಿ ನಾನು ಇದನ್ನುಸಯ್ಯದಾ ಖಮರುಲ್ ಅಂಬಿಯಾ ಹಝ್ರತ್ ಸಾಹಿಬ್‌ಝಾದ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ ಅವರಿಗೆ ಒಪ್ಪಿಸುತ್ತೇನೆ. ಅವರು ಇಂತಹ ಕಾರ್ಯಗಳಿಗೆ ಅರ್ಹರು ಮತ್ತು ಹಕ್ಕುದಾರರಾಗಿದ್ದಾರೆ. ಅವರು ಸ್ಥಾಪಿಸುತ್ತಿರುವ ರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿ ಇಡಬಹುದಾಗಿದೆ. ಆದ್ದರಿಂದ ಬರುವ ಪೀಳಿಗೆಗಳು ತಮ್ಮ ವಿಶ್ವಾಸ ಶ್ರದ್ದೆಯು ವರ್ಧನೆಗಾಗಿ ಮತ್ತು ಜ್ಞಾನಾರ್ಜನೆಗಾಗಿ ಬಳಸಿಕೊಳ್ಳಬಹುದು.

ಇಂತಿ ತಮ್ಮ
ಅಬ್ದುರ್ ರಹ್ಮಾನ್ ಖಾದಿಯಾನಿ

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**Love for All, Hatred for None**
**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

# "ಜಂಗೆ ಮುಖದ್ದಸ್" (ಪವಿತ್ರ ಸಮರ)

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹಾಗೂ ಡೆಪ್ಟಿ ಅಬ್ದುಲ್ಲಾ ಆಥಮ್‌ನ ನಡವೆ ಅದ್ಭುತವಾದ ವಾದಪ್ರತಿವಾದ(ಚರ್ಚೆ)

ದಿನಾಂಕ 22 ಮೇ 1893ರಿಂದ 5 ಜೂನ್ 1893ರವರೆಗೆ ಅಮೃತ್ಸರ್‌ನಲ್ಲಿ ಕ್ರೈಸ್ತರ ಹಾಗೂ ಮುಸ್ಲಿಮರ ನಡವೆ ಒಂದು ಚರ್ಚೆ ನಡೆಯಿತು ಅದರಲ್ಲಿ ಇಸ್ಲಾಮಿನ ಪರವಹಿಸಿ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಕ್ರೈಸ್ತರ ಪರವಾಗಿ ಡೆಪ್ಟಿ ಅಬ್ದುಲ್ಲಾ ಆಥಮ್ ಚರ್ಚೆ ಮಾಡುವವರಿದ್ದರು. ಈ ಚರ್ಚೆಯನ್ನು "ಜಂಗೆ ಮುಖದ್ದಸ್" (ಪವಿತ್ರ ಸಮರ) ಎಂಬ ಹೆಸರಿನಿಂದ ಝಿಯಾಉಲ್ ಇಸ್ಲಾಮ್ ಖಾದಿಯಾನ್ ಮುದ್ರಣಾಲಯದಿಂದ ಹಾಜಿ ಹಾಫಿಝ್ ಹಕೀಮ್ ಫಝ್ಲುದ್ದೀನ್ ಸಾಹೆಬ್ ಅವರು ದಿನಾಂಕ 20 ಅಕ್ಟೋಬರ್ 1904ರಲ್ಲಿ ಪ್ರಕಟಗೊಳಿಸಿದರು. ಈ ಸಂದರ್ಭದಲ್ಲಿ ಹಝ್ರತ್ ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹೆಬ್ ಅವರು ರೂಹಾನಿ ಖಝಾಯಿೀನ್ ಸಂಪುಟ 6ರ ಪ್ರಾರಂಭದಲ್ಲಿ ಈ ಪುಸ್ತಕದ ಪರಿಚಯವನ್ನು ಮಾಡಿಸಿದ್ದಾರೆ. ಓದುಗರ ಲಾಭಕ್ಕಾಗಿ ಪ್ರಕಟಗೊಳಿಸಲಾಗುತ್ತಿದೆ. (ಪತ್ರಿಕಾ ಬಳಗ)

**"ಜಂಗೆ ಮುಖದ್ದಸ್"** ಗ್ರಂಥವು ಆ ಅದ್ಭುತವಾದ ಚರ್ಚೆಯ ಸಂಪೂರ್ಣ ಘಟನೆಯ ಹೆಸರಾಗಿದೆ. ಅದು ಅಮೃತ್ಸರಿನಲ್ಲಿ ಮುಸ್ಲಿಮರು ಹಾಗೂ ಕ್ರೈಸ್ತರ ನಡವೆ ದಿನಾಂಕ 22 ಮೇ 1893ರಿಂದ 5 ಜೂನ್ 1893ರವರೆಗೆ ನಡೆಯಿತು. ಅದರಲ್ಲಿ ಇಸ್ಲಾಮಿನ ಪರವಹಿಸಿ ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಕ್ರೈಸ್ತರ ಪರವಾಗಿ ಡೆಪ್ಟಿ ಅಬ್ದುಲ್ಲಾ ಆಥಮ್ ಚರ್ಚೆ ಮಾಡುವವರಿದ್ದರು.

ಚರ್ಚೆಯ ಕಾರಣಗಳು: ರೂಹಾನಿ ಖಝಾಯೀನಿನ ಸಂಪುಟ 1 ಹಾಗೂ 3ರಲ್ಲಿ ನಾವು ಪಂಜಾಬ್ ಮತ್ತು ಹಿಂದುಸ್ತಾನದ ಕ್ರೈಸ್ತ ಮಿಶಿನರಿಯವರ ಪ್ರಯತ್ನಗಳ ಬಗ್ಗೆ ಪ್ರಸ್ತಾಪಿಸಿದ್ದೇವೆ ಹಾಗೂ ಆ ಕಾಲದಲ್ಲಿ ಕ್ರೈಸ್ತರ ಪ್ರಚಾರವು ಪ್ರಾರಂಭಾವಸ್ಥೆಯಲ್ಲಿತ್ತು ಮತ್ತು ಅನೇಕ ಪಟ್ಟಣಗಳಲ್ಲಿ ಮತ್ತು ಹಳ್ಳಿಗಳಲ್ಲಿ ಅವರ ಮಿಶನ್‌ಗಳನ್ನು ಸ್ಥಾಪಿಸಿದ್ದರು. ಹಿಂದುಸ್ತಾನ ಹಾಗೂ ಬೇರೆ ಸಮುದಾಯಗಳ ಜನರು ಕ್ರೈಸ್ತ ಮತಕ್ಕೆ ಸೇರ್ಪಡೆ ಆಗುತ್ತಿದ್ದರು. ಎಷ್ಟರ ಮಟ್ಟಿಗೆ ಸೇರುತ್ತಿದ್ದರು ಎಂದರೆ ಕೆಲವೇ ವರ್ಷಗಳಲ್ಲಿ ಹಿಂದುಸ್ತಾನಪೂರ್ತಿ ಕ್ರೈಸ್ತರ ಮಡಿಲಿಗೆ ಸೇರುವುದು ಎಂದು ಭಾವಿಸಲಾಗುತ್ತಿತ್ತು. ಆದ್ದರಿಂದ 1888ರಲ್ಲಿ ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಚಾರ್ಲ್ಸ್ ಎಚನ್‌ಸನ್ ಎಂಬವನು ಶಿಮ್‌ಲದಲ್ಲಿ ಕ್ರೈಸ್ತ ಪ್ರಚಾರಕರ ಒಂದು ಸಭೆಯಲ್ಲಿ ಬಾಷಣೆ ಮಾಡುತ್ತ ಹೀಗೆ ಹೇಳಿದನು:

"ಹಿಂದುಸ್ತಾನದಲ್ಲಿ ಸಾಮಾನ್ಯವಾಗಿ ಒಂದು ಮಿತಿಯಲ್ಲಿ ಜನಸಂಖ್ಯೆ ಹೆಚ್ಚುತ್ತಿದೆಯೋ ಅದಕ್ಕಿಂತ ನಾಲ್ಕು ಐದು ಪಟ್ಟು ಹೆಚ್ಚು ಕ್ರೈಸ್ತ ಮತ ಹರಡುತ್ತಿದೆ. ಈಗ ಹಿಂದುಸ್ತಾನದಲ್ಲಿ ಕ್ರೈಸ್ತರ ಸಂಖ್ಯೆ ಹತ್ತು ಲಕ್ಷದವರೆಗೆ ತಲುಪಿದೆ." ('ದಿ ಮಿಶಿನ್ಸ್', ರೆವರೆಂಡ್ ರಾಬರ್ಡ್ ಕ್ಲಾರ್ಕ್)

ಅಡಿ ಟಿಪ್ಪಣಿ: ರೆವರೆಂಡ್ ರಾಬರ್ಡ್ ಕ್ಲಾರ್ಕ್ ತನ್ನ ಪುಸ್ತಕ 'ದಿ ಮಿಶಿನ್ಸ್ ಆಫ್ ದಿಸಿ.ಎಂ.ಎಸ್. ಇನ್ ಪಂಜಾಬ್ ಎಂಡ್ ಸಿಂಧ್' ಪ್ರಕಾಶಕರು– ಸಿ.ಎಂ.ಎಸ್.ಲಂಡನ್ 1904ರಲ್ಲಿ ಈ ಚರ್ಚೆಯನ್ನು THE GREAT CONTROVERSY ಅಂದರೆ ಒಂದು ಅದ್ಭುತವಾದ ಚರ್ಚೆ ಎಂದು ಘೋಷಿಸಿದನು ಮತ್ತು ಈ ಚರ್ಚೆಯನ್ನು ಜಂಗೆ ಮುಖದ್ದಸ್ ಎಂದು ಹೆಸರು ಸ್ವತಹ ಡಾ॥ ಹೆನ್ರಿ ಮಾರ್ಟಿನ್ ಕ್ಲಾರ್ಕ್ ನೀಡಿದನು.

ಅಡಿಟಿಪ್ಪಣಿ: ಅಬ್ದುಲ್ಲಾ ಆಥಮ್ ಸುಮಾರು 1838ರಲ್ಲಿ ಅಂಬಾಲದಲ್ಲಿ ಜನಿಸಿದರು ಮತ್ತು 28 ಮಾರ್ಚ್ 1853ರಂದು ಅವರು ಕರಾಚಿಯಲ್ಲಿ ಬಪ್‌ತಸ್‌ಮ (ಕ್ರೈಸ್ತ ಧರ್ಮ ಸ್ವೀಕರಿಸುವಾಗ ಮಾಡುವ ಒಂದು ಪದ್ಧತಿ) ಪಡೆದರು. ಆ ಸಂದರ್ಭದಲ್ಲಿ ಅವರು ತಮ್ಮ ಹೆಸರಿನೊಂದಿಗೆ ಆಸಮ್ ಅಂದರೆ ಪಾಪಿಷ್ಠ ಎಂದು ಸೇರಿಸಿಕೊಂಡರು. ಮೊದಲು ಅಂಬಾಲ, ತರನ್‌ತಾರನ್ ಹಾಗೂ ಬಟಾಲದಲ್ಲಿ ತಹಶೀಲದಾರರಾಗಿದ್ದರು. ಅನಂತರ ಸಿಯಾಲ್‌ಕೋಟ್, ಅಂಬಾಲ ಹಾಗೂ ಕರ್ನಾಲ್‌ನಲ್ಲಿ ಐ.ಎ.ಸಿ ಹುದ್ದೆಯಲ್ಲಿದ್ದರು. ನಿವೃತ್ತಿ ಹೊಂದಿದ ನಂತರ ಅವರು ಅಮರತ್ಸರದ ಮಿಶನ್‌ನಿಗೆ ತಮ್ಮ ಸೇವೆ ಅರ್ಪಿಸಿದರು ಮತ್ತು ಇಸ್ಲಾಮ್ ವಿರುದ್ಧ ಕೆಲವು ಪುಸ್ತಕಗಳನ್ನು ರಚಿಸಿದರು.

ಮುಂಚೆ 1851ರಲ್ಲಿ ಹಿಂದುಸ್ತಾನದಲ್ಲಿ ಕ್ರೈಸ್ತರು ಕೇವಲ 91092 ಸಂಖ್ಯೆಯಲ್ಲಿದ್ದರು ಮತ್ತು 1881ರಲ್ಲಿ ಅವರ ಜನಸಂಖ್ಯೆ 417372 ಆಯಿತು. ಈ ಚರ್ಚೆ ನಡೆದ ಕಾಲದಲ್ಲಿ ಕ್ರೈಸ್ತ ಪ್ರಚಾರಕರು ಹಿಂದುಸ್ತಾನದ ಪಂಜಾಬ್ ರಾಜ್ಯದಲ್ಲಿ ಅನೇಕ ಸ್ಥಳಗಳಲ್ಲಿ ಕ್ರೈಸ್ತ ಮತದ ಬಗ್ಗೆ ಪ್ರಚಾರ ಮಾಡಿ ಅವರನ್ನು ಕ್ರೈಸ್ತರನ್ನಾಗಿ ಅಪರಿವತ್ನೆ ಮಾಡುತ್ತಿದ್ದರು ಮತ್ತು ದಜ್ಜಾಲ್ ತನ್ನ ಸಂಪೂರ್ಣಬಲದಿಂದ ಇಸ್ಲಾಮ್ ಧರ್ಮವನ್ನು ನಶಿಸಲು ಪ್ರಯತ್ನಿಸುತ್ತಿತ್ತು ಮತ್ತು ಇಸ್ಲಾಮ್ ಧರ್ಮದ ವಿದ್ವಾಂಸರು ಗಾಢವಾದ ನಿದ್ರೆಯಲ್ಲಿದ್ದರು. ಎಲ್ಲದಕ್ಕಿಂತ ಮೊದಲು ಚರ್ಚ್ ಮಿಶಿನರಿ ಸೊಸೈಟಿಯವರು ಹಿಂದುಸ್ತಾನದಲ್ಲಿ 1799ರಲ್ಲಿ ಪ್ರಚಾರದ ಕಾರ್ಯ ಪ್ರಾರಂಭಿಸಿದರು. ಆದರೆ ಆಕಾಲದಲ್ಲಿ ಅನೇಕ ಮಿಶಿನರಿ ಸೊಸೈಟಿಗಳು ಕಾರ್ಯ ನಿರ್ವಹಿಸುತ್ತಿದ್ದವು ಅವರ ಕೇಂದ್ರ ಇಂಗ್ಲೇಂಡ್, ಜರ್ಮನಿ ಹಾಗೂ ಅಮೇರಿಕ ಮುಂತಾದವು ಇದ್ದವು. 1901ರಲ್ಲಿ ಆ ಮಿಶಿನರಿ ಸೋಸೈಟಿಗಳ ಸಂಖ್ಯೆ 37 ಇತ್ತು ಇನ್ನೊಂದೆಡೆ ಒಂದು ಬಹು ಸಂಖ್ಯೆಯ ಮಿಶಿನರಿಗಳು ಈ ಸೋಸೈಟಿಗಳ ಸಂಪರ್ಕದಲ್ಲಿ ಇರಲಿಲ್ಲ. ಏಶಿಯದ ಮಧ್ಯಭಾಗದಲ್ಲಿ ಕ್ರೈಸ್ತ ಮಿಶಿನರಿಗಳು ಕಾರ್ಯ ನಿರ್ವಹಿಸಲು ಪಂಜಾಬ್ ರಾಜ್ಯವನ್ನು ಒಂದು ಕೇಂದ್ರವನ್ನಾಗಿಸಿದ್ದರು ಮತ್ತು ಪಂಜಾಬಿನ ಹದಿಮೂರು ಪ್ರಸಿದ್ಧ ಪಟ್ಟಣಗಳಲ್ಲಿ ಅವರ ಮಿಶನ್‌ಗಳನ್ನು ಸ್ಥಾಪಿತಗೊಳಿಸಿದರು. ಅದರಲ್ಲಿ ಒಂದು ಮಿಶನ್ ಅಮೃತ್ಸರದಲ್ಲಿ ಸ್ಥಾಪಿತವಾಗಿತ್ತು. ಈ ಮಿಶನ್ ಚರ್ಚ್ ಮಿಶನರಿ ಸೊಸೈಟಿಯವರು 1852ರಲ್ಲಿ ಸ್ಥಾಪಿಸಿದರು ಮತ್ತು ಅಮೃತ್ಸರ್ ಜಿಲ್ಲೆಯ ಜಂಡಿಯಾಲದಲ್ಲಿ ಕ್ರೈಸ್ತ ಮಿಶನ್‌ನ ಬುನಾದಿ 1854ರಲ್ಲಿ ಹಾಕಲಾಯಿತು ಆದರೆ ಡಾ॥ ಹೆನ್ರಿ ಮಾರ್ಟಿನ್ ಕ್ಲಾರ್ಕ್ ಎಮ್. ಡಿ.ಸಿ.ಎಮ್ (ಎಡಂಬ್ರ) ಎಂ.ಆರ್.ಎ.ಎಸ್.ಸಿ.ಎಮ್.ಎಸ್‌ನ ಅಮೃತ್ಸರ್ ಜಿಲ್ಲೆಯ ಮೆಡಿಕಲ್ ಮಿಶಿನರಿ ಇನ್‌ಚಾರ್ಜ್ ಆಗಿದ್ದಾಗ ಅವರು 1882ರಲ್ಲಿ ಅಮೃತ್ಸರದ ಒಂದು ಮೆಡಿಕಲ್‌ನ ಶಾಖೆಯು ಜಂಡಿಯಾಲದಲ್ಲಿಯು ಪ್ರಾರಂಭಿಸಿದರು ಇದು ಕ್ರೈಸ್ತ ಧರ್ಮವನ್ನು ಉನ್ನತಿಗೊಳಿಸುವುದಕ್ಕೆ ಹೊಸ ಮಾರ್ಗವಾಯಿತು. ಕೈಸ್ತ ಪ್ರಚಾರಕರು ಸಾರ್ವತ್ರಿಕವಾಗಿ ಪ್ರಚಾರವನ್ನು ಮಾಡುತ್ತಿದ್ದರು. ಜಂಡ್ಯಾಲದ ಮುಸ್ಲಿಮರಲ್ಲಿ ಓರ್ವ ವ್ಯಕ್ತಿ ಮಿಯಾಂ ಮುಹಮ್ಮದ್ ಬಖ್ಷ್ ಪಾಂದ ಇದ್ದರು ಅವರ ವಿದ್ಯಾಭ್ಯಾಸ ಕಡಿಮೆ ಇದ್ದರು ಸಹ ಅವರು ವಾದವಿವಾದ ಮಾಡಲು ನಿಂತುಕೊಂದಡರು. ಅವರು ಅನ್ಯ ಮುಸ್ಲಿಮರನ್ನು ಸಹ ಕ್ರೈಸ್ತ ಪ್ರಚಾರಕರನ್ನು ಪ್ರಶ್ನಿಸುವುದನ್ನು ಕಲಿಸಿದರು. ಈಗ ಜಂಡಿಯಾಲದ ಮುಸ್ಲಿಮರ ಹಾಗೂ ಕ್ರೈಸ್ತ ಪ್ರಚಾರಕರ ಮಧ್ಯೆ ವಾದವಿವಾದ ಪ್ರಾರಂಭವಾಯಿತು. ಕೊನೆಗೆ ಜಂಡಿಯಾಲದ ಕ್ರೈಸ್ತರು ಡಾ॥ ಮಾರ್ಟಿನ್ ಕ್ಲಾರ್ಕ್ ಅವರಿಗೆ ಈ ಪರಿಸ್ಥಿತಿಯ ಬಗ್ಗೆ ತಿಳಿಸಲಾಯಿತು ಆಗ ಅವರು ಜಂಡಿಯಾಲದ ಕ್ರೈಸ್ತರ ವತಿಯಿಂದ ಮಿಯಾಂ ಬಖ್‌ಷ್ ಸಾಹೆಬ್ ಅವರನ್ನು ಉದ್ದೇಶಿಸಿ ಜಂಡಿಯಾಲದ ಮುಸ್ಲಿಮರ ಕಡೆಗೆ ಒಂದು ಪತ್ರ ಬರೆದರು ಅದರಲ್ಲಿ ಡಾ॥ ಕ್ಲಾರ್ಕ್ ಜಂಡಿಯಾಲದ ಕ್ರೈಸ್ತರ ವತಿಯಿಂದ ಹೀಗೆ ಬರೆದನು:

"ನೀವು ಸ್ವತಃ ಅಥವಾ ತಮ್ಮ ಸಮುದಾಯದವರೊಂದಿಗೆ ಕಾರ್ಯಕ್ರಮವನ್ನು ರೂಪಿಸಿ ಒಂದು ಸಮಯವನ್ನು ನಿಗದಿಪಡಿಸಿರಿ ಮತ್ತು ನಿಮ್ಮ ಮನಸ್ಸಿಗೆ ಸಮಾಧಾನವಾಗುವ ಓರ್ವ ವ್ಯಕ್ತಿಯನ್ನು ನಿಯುಕ್ತಿಗೊಳಿಸಿರಿ ಮತ್ತು ನಾವು ನಮ್ಮ ಕಡೆಯಿಂದ ನಿಶ್ಚಯಿಸಿದ ಸ್ಥಳಕ್ಕೆ ನಿಗದಿತ ಸಮಯಕ್ಕೆ ಓರ್ವ ವ್ಯಕ್ತಿಯನ್ನು ಕಳುಹಿಸುವೆವು ಹೀಗೆ ಜಲ್ಸ ಹಾಗೂ ನಿರ್ಧಾರವು ಮೇಲೆ ವಿವರಿಸಿದ ರೀತಿಯಲ್ಲಿ ಮುಖ್ಯವಾಗಿರುತ್ತದೆ."

ಹಾಗೂ "ಒಂದು ವೇಳೆ ಮುಸ್ಲಿಮರು ಇಂತಹ ಚರ್ಚೆಯಲ್ಲಿ ಭಾಗವಹಿಸಲು ಬಯಸದಿದ್ದಲ್ಲಿ ಮುಂದೆ ತಮ್ಮ ಮಾತುಗಳನ್ನು ಚರ್ಚೆಯ ಮೈದಾನದಲ್ಲಿ ಬಿಟ್ಟುಕೊಡಬೇಕು ಮತ್ತು ಪ್ರಚಾರದ ಸಮಯ ಅಥವಾ ಇನ್ನುಳಿದ ಸಂದರ್ಭಗಳಲ್ಲಿಯು ಸುಮ್ಮನೆ ಇರಬೇಕಾಗುವುದು. (ಹುಜ್ಜತೆ ಇಸ್ಲಾಮ್, ರೂಹಾನಿ ಖಝಾಯೀನ್ ಸಂಪುಟ–6, ಪುಟ–60)

11 ಏಪ್ರಿಲ್ 1893ರಂದು ಈ ಪತ್ರ ಮಿಯಾಂ ಬಖ್‌ಷ್ ಸಾಹೆಬ್ ಅವರಿಗೆ ಸಿಕ್ಕಿತು ಅದನ್ನು ಅವರು ತಮ್ಮ ಪತ್ರದೊಂದಿಗೆ ಹಝ್ರತ್ ಮಸೀಹ್ ಮೌದ್ ಅಲೈಹಿಸ್ಸಲಾಮ್ ಅವರಿಗೆ ಕಳುಹಿಸಿದರು. ಅವರು ತಮ್ಮ ಪತ್ರದಲ್ಲಿ ಹಿಗೆ ಕೇಳಿಕೊಂಡರು:

"ಜಂಡಿಯಾಲದ ಬಹುತೇಕ ಮುಸ್ಲಿಮರು ದೌರ್ಬಲ್ಯ ಹೊಂದಿದವರಾಗಿದ್ದಾರೆ ಮತ್ತು ಬಡವರಾಗಿದ್ದಾರೆ ಆದ್ದರಿಂದ ನಿಮ್ಮ ಸೇವೆಯಲ್ಲಿ ಅತಿ ವಿನಮ್ರತೆಯಿಂದ ಕೇಳಿಕೊಳ್ಳುವುದೇನೆಂದರೆ ತಾವು ಜಂಡಿಯಾಲದ ಮುಸ್ಲಿಮರಿಗೆ ಸಹಾಯ ಮಾಡಿರಿ ಇಲ್ಲದಿದ್ದರೆ ಇದು ಇಸ್ಲಾಮ್ ಧರ್ಮದ ಮೇಲೆ ಒಂದು ಕಳಂಕವಾಗುವುದು." (ಹುಜ್ಜತೆ ಇಸ್ಲಾಮ್, ರೂಹಾನಿ ಖಝಾಯೀನ್ ಸಂಪುಟ–06, ಪುಟ–59)

ಹಝ್ರತ್ ಮಸೀಹೆ ಮೌಊದ್ ಅಲೈಹಿಸ್ಸಲಾಮ್ ಅವರಿಗೆ ಈ ಪತ್ರ ದೊರೆತಾಗ ಅವರು ಬಹಳ ಸಂತೋಷಗೊಂಡರು ಮತ್ತು ಮಿಯಾಂ ಮುಹಮ್ಮದ್ ಬಖ್ಷ್ ಸಾಹೆಬ್ ಅವರನ್ನು ಅದರ ಉತ್ತರ ನೀಡಿದಲ್ಲದೆ ತಮ್ಮ ಕಡೆಯಿಂದ ಒಂದು ಪತ್ರ 13 ಏಪ್ರಿಲ್ 1893ರಂದು ಜಂಡಿಯಾಲದ ಕ್ರೈಸ್ತರನ್ನು ಡಾ॥ ಮಾರ್ಟೀನ್ ಕ್ಲಾರ್ಕ್‌ನ ಮೂಲಕ ಒಂದು ನೇರ ಪತ್ರವನ್ನು ಬರೆದರು. ಅಲ್ಲದೆ ಅವರು ಕ್ರೈಸ್ತ ಧರ್ಮದವರು ನೀಡಿದ ಚರ್ಚೆಯ ಆಹ್ವಾನವನ್ನು ಸ್ವೀಕರಿಸಿದ್ದೇನೆ ಎಂದು ಒಂದು ಪತ್ರ ಮಿಯಾಂ ಮುಹಮ್ಮದ್ ಬಖ್ಷ್ ಸಾಹೆಬ್ ಅವರ ಹೆಸರಿಗೆ ಹೀಗೆ ಬರೆದರು:

"ಜಂಡಿಯಾಲದ ಮುಸ್ಲಿಮರ ಮೇಲೆ ನಾನು ಯಾವ ಉಪಕಾರ ಮಾಡುತ್ತಿಲ್ಲ ಬದಲಿಗೆ ಕಾರುಣ್ಯನಿಧಿಯು ಆದ ಅಲ್ಲಾಹನು ನನಗೆ ಇಂತಹ ಕಾರ್ಯಕ್ಕಾಗಿಯೇ ಕಳುಹಿಸಿದ್ದಾನೆ ಆದ್ದರಿಂದ ಇಂತಹ ಸಂದರ್ಭದಲ್ಲಿ ಸುಮ್ಮನಿರುವುದು ಪಾಪವಾಗುತ್ತದೆ. ಆದ್ದರಿಂದ ನಾನು ನಿಮಗೆ ತಿಳಿಸುವುದೇನಂದರೆ ನಾನು ಸ್ವತಃ ಈ ಕಾರ್ಯಕ್ಕಾಗಿ ಹಾಜರಾಗುವೆನು." (ಹುಜ್ಜತೆ ಇಸ್ಲಾಮ್, ರೂಹಾನಿ ಖಿಝಾಯೀನ್, ಸಂಪುಟ–6, ಪುಟ–61)

ಮುಂದೆ ಬರೆಯುತ್ತಾರೆ:

"ಈ ಚರ್ಚೆಯು ಜೀವಂತ ಸಮುದಾಯ ಅಥವಾ ಮೃತ ಸಮುದಾಯದ ವಿಚಾರಣೆಯ ಬಗ್ಗೆ ಆಗುವುದು ಮತ್ತು ಒಂದು ಧರ್ಮ ಮತ್ತು ಅದರ ಪವಿತ್ರ ಗ್ರಂಥ ತೋರಿಸುವಂತಹ ಆಧ್ಯಾತ್ಮಿಕ ಕುರುಹುಗಳ ದಾವೆಯು ಈಗಲು ಆ ಧರ್ಮದಲ್ಲಿ ಕಾಣ ಬರುತ್ತವೆಯೋ ಎಂಬುದು ನೋಡಲಾಗುವುದು." (ಹುಜ್ಜತುಲ್ ಇಸ್ಲಾಮ್, ರೂಹಾನಿ ಖಿಝಾಯೀನ್ ಸಂಪುಟ–6, ಪುಟ–63–64)

ಈ ವಿಷಯದ ಸಾಕ್ಷ್ಯಾಧಾರವನ್ನು ಹೀಗೆ ನೀಡಲಾಗುವುದು:

"ಇಸ್ಲಾಮ್ ಸಮುದಾಯದಿಂದ ಓರ್ವ ವ್ಯಕ್ತಿ ಇಸ್ಲಾಮಿನ ಬೋಧನೆಗಳನ್ನು ಮತ್ತು ಅದರ ಕುರುಹುಗಳನ್ನು ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಿದ ಹಾಗೆ ಸ್ವತಃ ತನ್ನಲ್ಲಿ ಸಾಬೀತು ಪಡಿಸಬೇಕು ಒಂದು ವೇಳೆ ಅವನು ಅದನ್ನು ಸಾಬೀತು ಪಡಿಸಲಿಲ್ಲವಾದಲ್ಲಿ ಅವನು ಸುಳ್ಳುಗಾರನಾಗುವನು ಮುಸಲ್ಮಾನನಲ್ಲ. ಅದೇ ರೀತಿ ಓರ್ವ ಕ್ರೈಸ್ತ ಧರ್ಮಕ್ಕೆ ಸೇರಿದ್ದ ಓರ್ವ ವ್ಯಕ್ತಿಯು ಕ್ರೈಸ್ತ ಬೋಧನೆಗಳನ್ನು ಮತ್ತು ಅದರ ಕುರುಹುಗಳನ್ನು ಪವಿತ್ರ ಇಂಜೀಲಿನಲ್ಲಿ ಪ್ರಸ್ತಾಪಿಸಿದ ಹಾಗೆ ಸ್ವತಃ ತನ್ನಲ್ಲಿ ಸಾಬೀತು ಪಡಿಸಬೇಕು ಒಂದು ವೇಳೆ ಅವನು ಅದನ್ನು ಸಾಬೀತು ಪಡಿಸಲು ಸಾಧ್ಯವಾಗದಿದ್ದರೆ ಅವನು ಸುಳ್ಳುಗಾರನಾಗುವನು ಕ್ರೈಸ್ತನಲ್ಲ." (ಹುಜ್ಜತುಲ್ ಇಸ್ಲಾಮ್, ರೂಹಾನಿ ಖಿಝಾಯೀನ್ ಸಂಪುಟ–06, ಪುಟ–62)

ಇದಕ್ಕೆ ಉತ್ತರವಾಗಿ ಜಂಡಿಯಾಲದ ಕ್ರೈಸ್ತರವತಿಯಿಂದ 18 ಏಪ್ರಿಲ್ 1893ರಲ್ಲಿ ಡಾ॥ ಕ್ಲಾರ್ಕ್ ಹೀಗೆ ಬರೆದನು:

"ನಮ್ಮ ಪಂಥಾಹ್ವಾನ ನಿಮ್ಮೊಡನೆ ಇರುವುದಲ್ಲ ಜಂಡಿಯಾಲದ ಮುಸ್ಲಿಮರೊಂದಿಗೆ ಇದೆ. ನಾವು ನಿಮ್ಮ ಆಹ್ವಾನವನ್ನು ಸ್ವೀಕರಿಸಲು ಸಿದ್ಧರಾಗಿಲ್ಲ. ಅವರಿಗೆ ನಾವು ಪತ್ರವನ್ನು ಬರೆದಿದ್ದೇವೆ ಅವರ ಉತ್ತರದ ನಿರೀಕ್ಷೆಯಲ್ಲಿದ್ದೇವೆ...... ಒಂದು ವೇಳೆ ಅವರು ನಿಮ್ಮನ್ನು ಸ್ವೀಕರಿಸಿ ಈ 'ಜಂಗೆ ಮುಖದ್ದಸ್'ಗಾಗಿ ಕಳುಹಿಸಲು ಬಯಸಿದ್ದಲ್ಲಿ ನಾವು ಸಂತೋಷದಿಂದ ಸ್ವೀಕರಿಸುವೆವು." (ಹುಜ್ಜತೆ ಇಸ್ಲಾಮ್, ರೂಹಾನಿ ಖಿಝಾಯೀನ್ ಸಂಪುಟ–6, ಪುಟ–64)

23 ಏಪ್ರಿಲ್ 1893ರಂದು ಈ ಪತ್ರಕ್ಕೆ ಉತ್ತರವನ್ನು ಪಾದರಿ ಸಾಹೇಬರಿಗೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬರೆಯುತ್ತಾರೆ: ನಾನು ನನ್ನ ಕೆಲವು ಆತ್ಮೀಯರಲ್ಲಿ ನನ್ನ ಪ್ರತಿನಿಧಿ ಆಗಿ ನಿಮ್ಮ ಬಳಿ ಕಳಿಸಿಸುವೆನು ಮತ್ತು ತಾವು ನನ್ನನ್ನು ಈ ಪವಿತ್ರ ಯುದ್ಧಕ್ಕಾಗಿ ಮುಖಾಮುಖಿ ಆಗಲು ಸ್ವೀಕರಿಸುವಿರಿ ಎಂದು ಆಶಿಸುತ್ತೇನೆ. ತಾವಯ ಜಂಡಿಯಾಲದ ಮುಸ್ಲಿಮರನ್ನು ಉದ್ದೇಶಿಸಿ ಬರೆದ ಪತ್ರ ನನಗೆ ತಲುಪಿತು ನಾನು ಅದನ್ನು ಓದಿದೆ ಅದರಲ್ಲಿ ತಾವು "ಯಾರಾದರು ಇದ್ದರೆ ಅವರು ನಮ್ಮನ್ನು ಎದುರಾಗಲಿ" ಎಂದು ಬರೆದಿದ್ದೀರಿ ಆಗ ನನ್ನ ಆತ್ಮವು ನನ್ನನ್ನು ಉದ್ರೇಕಿಸಿತು ಹೌದು ನಿಮ್ಮನ್ನು ಎದುರಾಗಲು ನಾನಿದ್ದೇನೆ ಅಲ್ಲಾಹನು ನನ್ನಿಂದ ಮುಸ್ಲಿಮರಿಗೆ ಗೆಲುವು ನೀಡುವನು ಮತ್ತು ಸತ್ಯವನ್ನು ನನ್ನಿಂದ ಹೇಳಿಸುವನು. ಆ ನೈಜ್ಯತೆ ನನಗೆ ನೀಡಲಾಗಿದೆ ಮತ್ತು ನಮ್ಮಲ್ಲಿ ಉದಯಿಸಿರುವಂತಹ ಸೂರ್ಯವು ಈಗ ರಹಸ್ಯವಾಗಿರಬಾರದು. ನಾನು ನೋಡುತ್ತಿದ್ದೇನೆ ಈಗ ಆ ಸೂರ್ಯವು ತನ್ನ ಪ್ರಬಲವಾದ ಕಿರಣಗಳೊಂದಿಗೆ ವ್ಯಕ್ತವಾಗುತ್ತಿದೆ ಮತ್ತು ಅದು ಎಲ್ಲರ ಹೃದಯಗಳನ್ನು ಮುಟ್ಟುತ್ತಿದೆ ಮತ್ತು ಅದು ತನ್ನ ಕಡೆ ಆಕರ್ಷಿಸುತ್ತಿದೆ.

ಪುನಃ ಹೇಳುತ್ತಾರೆ:

"ನಿಮಗೆ ತಿಳಿದಿರಬೇಕು ಜಂಡಿಯಾಲದಲ್ಲಿ ಯಾವುದೇ ಪ್ರಸಿದ್ಧ ವಿದ್ವಾಂಸರಿಲ್ಲ ಎಂದು ಮತ್ತು ಹೀಗೆ ಜನರೊಂದಿಗೆ ಸಂವಾದ ಮಾಡುತ್ತಾ ಇರುವುದು ನಿಮ್ಮ ಗೌರವಕ್ಕೆ ದಕ್ಕೆ ತರುತ್ತದೆ. ಮತ್ತು ನನ್ನ ಬಗ್ಗೆ ನಿಮಗೆ ಅರಿವಿದೆ ನಾನು ಕಳೆದ ಹತ್ತು ವರ್ಷಗಳಿಂದ ನಿಮ್ಮನ್ನು ಎದುರಾಗಲು ಕಾಯುತ್ತಿದ್ದೇನೆ ಎಂದು. ಜಂಡಿಯಲದಲ್ಲಿ ನನ್ನ ಪ್ರಕಾರ ಯಾವ ಒಬ್ಬ ವ್ಯಕ್ತಿಯು ಈ ಮೈದಾನದಲ್ಲಿ ಸೈನಿಕನಾಗಿ ನಿಲ್ಲಿಲಾರ." (ಹುಜ್ಜತೆ ಇಸ್ಲಾಮ್ ರೂಹಾನಿ ಖಿಝಾಯೀನ್ ಸಂಪುಟ–6, ಪುಟ–65)

ಮತ್ತು ಹಝ್ರತ್ ಮಸೀಹ್ ಮೌಊದ್(ಅ) ಅವರು ಮತ್ತೊಮ್ಮೆ ಸ್ಪಷ್ಟ ಪಡಿಸಿದರು:

"ಈ ಚರ್ಚೆಯು ಕೇವಲ ಭೂಮಿಯ ತನಕ ಸೀಮಿತವಾಗಿರಬಾರದು ಅದು ಆಕಾಶವನ್ನು ಸಹ ತನ್ನಲ್ಲಿ ಒಳಗೊಂಡಿರಬೇಕು ಮತ್ತು ಈ ವಾದವಿವಾದವು ಕೇವಲ ಆಧ್ಯಾತ್ಮಿಕ ಜೀವನ ಹಾಗೂ ಆಕಾಶದ ಸ್ವೀಕರಣೆ ಹಾಗೂ ಪ್ರಜ್ವಲವಾದ ಅಂತರಾತ್ಮ ಯಾವ ಧರ್ಮದಲ್ಲಿದೆ ಎಂದು ನಾನು ಮತ್ತು ನನ್ನ ಎದುರಾಳಿಯು ತಮ್ಮ ತಮ್ಮ ಪವಿತ್ರ ಧಾರ್ಮಿಕ ಗ್ರಂಥದ ವೈಶಿಷ್ಟ್ಯವನ್ನು ತಮ್ಮ ತಮ್ಮ ಅಸ್ತಿತ್ವದಲ್ಲಿ ಸಾಬೀತ್ ಪಡಿಸಬೇಕು." (ಹುಜ್ಜತೆ ಇಸ್ಲಾಮ್, ರೂಹಾನಿ ಖಿಝಾಯೀನ್, ಸಂಪುಟ–6, ಪುಟ–66)

ಹಝ್ರತ್ ಮಸೀಹ್ ಮೌಊದ್(ಅ) ಅವರ ಪ್ರತಿನಿಧಿಗಳ ಒಂದು ತಂಡ ಈ ಪತ್ರದೊಂದಿಗೆ ಅಮೃತ್ಸರಕ್ಕೆ ತಲುಪಿದರು. ಅಲ್ಲಿ ಡಾ॥ ಹೆನ್ರಿ ಮಾರ್ಟೀನ್ ಕ್ಲಾರ್ಕ್ ಅವರೊಂದಿಗೆ ಸಮಾಲೋಚನೆ ನಡೆಯಿತು ಅದೇ ರೀತಿ ಅಲ್ಲಿ ಆ ಚರ್ಚೆಯ ನಿಯಮಗಳು ಸಹ ನಿಶ್ಚಯಗೊಳಿಸಲಾಯಿತು. ಆಗ 24 ಏಪ್ರಿಲ್ 1893ರಂದು ಡಾ॥ ಕ್ಲಾರ್ಕ್ ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಒಂದು ಪತ್ರ ಹೀಗೆ ಬರೆದನು:

"ಮಾನ್ಯರೇ! ತಾವು ಮುಸ್ಲಿಮರ ಕಡೆಯಿಂದ ನನ್ನನ್ನು ಎದುರಾಗಲು ಅಹ್ವಾನಿಸಿದ್ದೀರ ನಾನು ಅದನ್ನು ಬಹಳ ಸಂತೋಷದಿಂದ ಒಪ್ಪುತ್ತೇನೆ ನಿಮ್ಮ ಕಡೆಯಿಂದ ನಿಮ್ಮ ಪ್ರತಿನಿಧಿಗಳು ಆಗಮಿಸಿ ಚರ್ಚೆ ಹಾಗೂ ಚರ್ಚೆಯ ನಿಯಮಗಳನ್ನು ನಿಶ್ಚಯಿಸಿಕೊಂಡು ಹೋಗಿರುವರು...... ತಾವು ಈ ನಿಯಮಗಳನ್ನು ಒಪ್ಪುತ್ತೀರೋ ಅಥವಾ ಇಲ್ಲ ಎಂದು ನನಗೆ ತಿಳಿಸಿರಿ." (ಹುಜ್ಜತೆ ಇಸ್ಲಾಮ್, ರೂಹಾನಿ ಖಿಝಾಯೀನ್, ಸಂಪುಟ–6, ಪುಟ–66,67)

ಹಝ್ರತ್ ಮಸೀಹ್‌ಮೌಊದ್(ಅ) ಅವರು 25 ಏಪ್ರಿಲ್ 1893ರಂದು ಪಾದರಿ ಡಾ॥ ಕ್ಲಾರ್ಕ್‌ರವರಿಗೆ ಹೀಗೆ ಉತ್ತರವನ್ನು ಬರೆದರು:

"ನಾನು ನನ್ನ ಹಾಗೂ ನನ್ನ ಮಿತ್ರರ ಹಸ್ತಾಕ್ಷರ ಆಗಿರುವ ಆ ಎಲ್ಲಾ ನಿಯಮಗಳನ್ನು ಶರತ್ತುಗಳನ್ನು ಒಪ್ಪುತ್ತೇನೆ." (ಹುಜ್ಜತುಲ್ ಇಸ್ಲಾಮ್, ರೂಹಾನಿ ಖಿಝಾಯೀನ್ ಸಂಪುಟ–6, ಪುಟ–69)

ಒಪ್ಪಿಗೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಹೀಗೆ ಬರೆದರು: ಈ ಚರ್ಚೆಯನ್ನು ಇಬ್ಬರ ಧರ್ಮದಲ್ಲಿಯು ನಿರ್ಣಾಯಕವಾಗಿಸಲು ಆರು ದಿವಸದ ಈ ಚರ್ಚೆಯ ನಂತರ ಏಳನೆಯ ದಿವಸ ಒಂದು ಆಧ್ಯಾತ್ಮಿಕ ಸ್ಪರ್ಧೆ ಮುಬಾಹಿಲದ(ಯಾರು ಸುಳ್ಳುಗಾರರಾಗಿದ್ದಾರೆ ಅವರ ಮೇಲೆ ಶಾಪ ಹಾಕುವುದು) ರೂಪದಲ್ಲಿ ಆಗಬೇಕು ಎಂಬುದು ಅವಶ್ಯಕವಾಗಿದೆ ಮತ್ತು ಇಬ್ಬರು ವಾದಿ ಪ್ರತಿವಾದಿಗಳು ಮುಬಾಹಿಲದಲ್ಲಿ ಹೀಗೆ ಶಪಿಸಬೇಕು:

"ಉದಾಹರಣೆಗೆ ಕ್ರೈಸ್ತರು ಹೀಗೆ ಹೇಳಬೇಕು ಅಂದರೆ ಅವರು ನಾನು ನಂಬಿರುವಂತಹ ಈಸ ಮಸೀಹರು ಸ್ವತಃ ದೇವರಾಗಿದ್ದಾರೆ, ಮತ್ತು ಖುರ್‌ಆನ್ ಮನುಷ್ಯನ ಕಡೆಯಿಂದ ಸುಳ್ಳಾಗಿದೆ ಅದು ಅಲ್ಲಾಹನ ಪವಿತ್ರ ಗ್ರಂಥವಲ್ಲ ಒಂದು ವೇಳೆ ನಾನು ನನ್ನ ಮಾತಿನಲ್ಲಿ ಸುಳ್ಳಾಗಿದ್ದ ಪಕ್ಷದಲ್ಲಿ ಒಂದು ವರ್ಷದ ಒಳಗೆ ನನ್ನ ಮೇಲೆ ಎಂತಹ ಶಿಕ್ಷೆಯನ್ನಾದರು ಆ ದೇವರು ನೀಡಲಿ ಎಂದರೆ ಅದರಿಂದ ನನ್ನ ಅಪಕೀರ್ತಿ ವ್ಯಕ್ತವಾಗಲಿ ಮತ್ತು ಅದೇ ರೀತಿ ನಾನು ಕೂಡ ದುಆ ಮಾಡುವೆನು ಎಲೈ ಕಾರುಣ್ಯನಿಧಿಯಾದ ಅಲ್ಲಾಹನೇ ನಾನು ತಿಳಿದಿರುವೆನು ಈಸ ಮಸೀಹರು ನಿನ್ನ ದಾಸ ಮತ್ತು ನಿನ್ನ ಪ್ರವಾದಿ ಆಗಿದ್ದರು ದೇವನಾಗಿರಲಿಲ್ಲ ಮತ್ತು ಪವಿತ್ರ ಖುರ್‌ಆನ್ ನಿನ್ನ ಕಡೆಯಿಂದ ಒಂದು ಪವಿತ್ರ ಗ್ರಂಥವಾಗಿದೆ ಮತ್ತು ಮುಹಮ್ಮದ್ ಮುಸ್ತಫ ಸಲ್ಲಲ್ಲಾಹು ಅಲೈಹಿವಸಲ್ಲಮರು ನಿನ್ನ ಪ್ರೀಯ ಮತ್ತು ಆಯ್ಕೆಯಾದ ಪ್ರವದಿ ಆಗಿದ್ದರು, ಒಂದು ವೇಳೆ ನಾನು ಈ ನಂಬಿಕೆಯಲ್ಲಿ ಸುಳ್ಳಾಗಿದ್ದಲ್ಲಿ ಒಂದು ವರ್ಷದ ಒಳಗೆ ನನ್ನ ಮೇಲೆ ಎಂತಹ ಶಿಕ್ಷೆ ಆ ದೇವರು ಅವತರಿಸಲಿ ಎಂದರೆ ಅದರಿಂದ ನನ್ನ ಅಪಕೀರ್ತಿ ವ್ಯಕ್ತವಾಗಲಿ. ಓ ಅಲ್ಲಾಹನೆ ನನ್ನ ಅಪಕೀರ್ತಿಗಾಗಿ ಈ ಮಾತು ಸಾಕಾಗುವುದು ಅಂದರೆ ಒಂದು ವರ್ಷದ ಒಳಗೆ ನಿನ್ನ ಕಡೆಯಿಂದ ನನ್ನ ಬೆಂಬಲದಲ್ಲಿ ಯಾವುದಾದರು ಕುರುಹು ವ್ಯಕ್ತವಾಗದಿರಲಿ ಅದನ್ನು ಎದುರಿಸಲು ಎಲ್ಲಾ ವಿರೋಧಿಗಳು ಅಶಕ್ತರಾಗಿರಲಿ." (ಹುಜ್ಜತುಲ್ ಇಸ್ಲಾಮ್, ರೂಹಾನಿ ಖಿಝಾಯೀನ್ ಸಂಪುಟ–6, ಪುಟ–70)

**ದೈವಿಕ ಕುರುಹು ತೋರಿಸುವುದಕ್ಕೆ ಅಹ್ವಾನ**

ಅನಂತರ ಹಝ್ರತ್ ಮಸೀಹ್ ಮೌಊದ್(ಅ) ಅವರು ಒಂದು ಇಶ್ತಿಹಾರ್(ಪ್ರಕಟಣೆ) ಬರೆದರು ಅದರ ಶೀರ್ಷಿಕೆ ಹೀಗಿತ್ತು:

"ಡಾ॥ ಪಾದ್ರಿ ಕ್ಲಾರ್ಕ್‌ನ ಜಂಗೆ ಮುಖದ್ದಸ್ ಮತ್ತು ಅವರನ್ನು ಎದುರಾಗಲು ಆಹ್ವಾನ" ಇದರಲ್ಲಿ ವಿವರವಾಗಿ ಚರ್ಚೆಗಾಗಿ ನಿಶ್ಚಯಿಸಲಾದ ಶರತ್ತುಗಳನ್ನು ಪ್ರಸ್ತಾಪಿಸಿದರು ಅದಲ್ಲದೆ ಚರ್ಚೆಯ ನಂತರ ಮುಬಾಹಿಲ ಹಾಗೂ ಕುರುಹು ತೋರಿಸುವುದರ ಬಗ್ಗೆಯೂ ಪ್ರಕಟಣೆಯಲ್ಲಿ ಇತ್ತು.

ಮುಬಾಹಿಲದ ಬಗ್ಗೆ ಹುಝೂರ್(ಅ) ನುಡಿಯುತ್ತಾರೆ:

"ಅದು ಎಷ್ಟರ ಮಟ್ಟಿಗೆ ಸಾಕು ಎಂದರೆ ಎರಡು ಪಕ್ಷದವರು ತನ್ನ ಧರ್ಮದ ಬೆಂಬಲದಲ್ಲಿ ಅಲ್ಲಾಹನಿಂದ ದೈವಿಕ ಕುರುಹು ಪಡೆಯುವುದಕ್ಕೆ ಆಶಿಸಬೇಕು ಮತ್ತು ಈ ಕುರುಹುಗಳನ್ನು ವ್ಯಕ್ತಪಡಿಸಲು ಒಂದು ವರ್ಷ ಅವಧಿ ನಿಶ್ಚಯಿಸಬೇಕು ಅನಂತರ ಯಾವ ಪಕ್ಷದವರ ಬೆಂಬಲದಲ್ಲಿ ದೈವಿಕ ಕುರುಹು ವ್ಯಕ್ತವಾದರೆ ಆ ಕುರುಹು ಮನುಷ್ಯನ ಸಾಮಾನ್ಯ ಶಕ್ತಿಕ್ಕಿಂತ ಹೆಚ್ಚಾಗಿರಬೇಕು ಅದನ್ನು ಎದುರಿಸಲು ಇನ್ನೊಂದು ಪಕ್ಷದವರಿಗೆ ಸಾಧ್ಯವಾಗಬಾರದು ಹಾಗಾದರೆ ಆ ಸೋತಿ ಹೊದ ಪಕ್ಷವು ದೈವಿಕ ಕುರುಹುವಿನಿಂದ ವಿಜಲಶಾಲಿ ಆದ ಪಕ್ಷದ ಧರ್ಮವನ್ನು ಸ್ವೀಕರಿಸಬೇಕು. ಹೀಗೆ ಧರ್ಮ ಸ್ವೀಕರಿಸಲು ನಿರಾಕರಿಸಿದರೆ ಅವನು ತನ್ನ ಸಂಪೂರ್ಣ ಆಸ್ತಿಯ ಅರ್ಧ ಭಾಗ ಆ ವಿಜಯಶಾಲಿ ಪಕ್ಷದವರಿಗೆ ಸಹಾಯದ ಸಲುವಾಗಿ ನೀಡಬೇಕಾಗುವುದು." (ಹುಜ್ಜತೆ ಇಸ್ಲಾಮ್, ರೂಹಾನಿ ಖಝಾಯೀನ್ ಸಂಪುಟ-6, ಪುಟ-48)

ಮುಂದುವರಿದು ಹೇಳುತ್ತಾರೆ:

"ಒಂದು ವರ್ಷದ ಕಾಲಾವಧಿಯಲ್ಲಿ ಈ ಎರಡು ಪಕ್ಷಗಳಿಂದ ದೈವ ಕುರುಹು ತೋರಿಸಲು ಸಾಧ್ಯವಾಗದಿದ್ದರೆ ಅಥವಾ ಇಬ್ಬರ ಕಡೆಯಿಂದ ದೈವಿಕ ಕುರುಹು ಅಭಿವ್ಯಕ್ತವಾದರೂ ನಾನು ಇಂತಹ ಸನ್ನಿವೇಶದಲ್ಲಿ ಸ್ವತಃ ಸೋತವ ಎಂದು ಪರಿಗಣಿಸುವೆನು ಮತ್ತು ನಿಶ್ಚಯಿಸಲಾದ ಶಿಕ್ಷೆಯನ್ನು ಅನುಭವಿಸುವುದಕ್ಕೆ ಸಿದ್ಧನಾಗಿರುವೆನು. ನಾನು ಅಲ್ಲಾಹನ ಕಡೆಯಿಂದ ನಿಯೋಜಿಸಲ್ಪಟ್ಟವನಾಗಿದ್ದೇನೆ ಮತ್ತು ವಿಜಯಶಾಲಿ ಆಗುವೆನು ಎಂದು ಸುವಾರ್ತೆ ಪಡೆದಿದ್ದೇನೆ ಆದ ಕಾರಣ ಯಾವ ಕ್ರೈಸ್ತ ಸಮುದಾಯದವನು ನನ್ನ ಎದುರಿಗೆ ದೈವಿಕ ಕುರುಹು ತೋರಿಸಿದರೆ ಅಥವಾ ನಾನು ಒಂದು ವರ್ಷದ ತನಕ ತೋರಿಸದಿದ್ದರೆ ನಾನು ಸುಳ್ಳುಗಾರ ಎಂದು ವ್ಯಕ್ತವಾಗುತ್ತದೆ...... ನನ್ನ ಕಡೆಯಿಂದ ಮುಬಾಹಿಲದ ನಂತರ ಒಂದು ವರ್ಷದ ಒಳಗೆ ಅವಶ್ಯಕವಾಗಿ ಕುರುಹನ್ನು ತೋರಿಸುವುದು ನನ್ನ ಸತ್ಯತೆಗೆ ಅವಶ್ಯಕವಾಗಿರುವುದೇನಂದರೆ. ಒಂದು ವೇಳೆ ಆ ಕುರುಹು ವ್ಯಕ್ತವಾಗದಿದ್ದರೆ ನಾನು ಅಲ್ಲಾಹನ ಕಡೆಯಿಂದ ಆಗಮಿಸಿದವನಲ್ಲ. ಅದೇ ರೀತಿ ಕೇವಲ ಆ ಶಿಕ್ಷೆಯಲ್ಲದೆ ಮರಣ ದಂಡನೆಗೆ ಅರ್ಹನಾಗುವೆನು." (ಹುಜ್ಜತೆ ಇಸ್ಲಾಮ್, ರೂಹಾನಿ ಖಝಾಯೀನ್ ಸಂಪುಟ-6, ಪುಟ-49)

ಹಝ್ರತ್ ಮಸೀಹ್ ಮೌಊದ್(ಅ) ಅವರು ದೈವಿಕ ಕುರುಹನ್ನು ತೋರುವಿಕೆ ಹಾಗೂ ಮುಬಾಹಿಲದ ಬಗ್ಗೆ ಚರ್ಚೆಯ ಮಧ್ಯೆ ಪದೆ ಪದೆ ಎದುರಾಳಿ ಪಕ್ಷದವರನ್ನು ಗಮನಹರಿಸಿದರು ಆದರೆ ಅವರಲ್ಲಿ ಯಾರು ಕೂಡ ಆಧ್ಯಾತ್ಮಿಕವಾಗಿ ಎದುರಗಲು ಬಯಸಲಿಲ್ಲ. ಮತ್ತು ಅಬ್ದುಲ್ಲಾ ಆಥಮ್ ತನ್ನ ಒಂದು ಪತ್ರದಲ್ಲಿ ಹೀಗೆ ಸ್ಪಷ್ಟವಾಗಿ ಬರೆದನು:

"ನಾನು ನಮ್ಮ ಪ್ರಾಚೀನ ಬೋಧನೆಗಳಮುಂದೆ ಆಧುನಿಕ ಪವಾಡಗಳನ್ನು ತೋರಿಸಬೇಕೆಂಬ ಅವಶ್ಯಕತೆ ನಮಗಿಲ್ಲ ನಾವು ಇದಕ್ಕೆ ಸಿದ್ಧವಾಗುವುದಿಲ್ಲ ಆದ್ದರಿಂದ ಪವಾಡವನ್ನು ತೋರಿಸುವುದಕ್ಕೆ ನಮ್ಮಲ್ಲಿ ಅದರ ಸಾಮರ್ಥ್ಯವೂ ಇಲ್ಲ...... ಮಹನೀಯರಾದ ತಾವು ಇಂತಹ ಪವಾಡವನ್ನು ತೋರಿಸಿದರೆ ನಾವು ನಮ್ಮ ಕಣ್ಣುಗಳನ್ನು ಮುಚ್ಚುವುದಿಲ್ಲ ಬದಲಿಗೆ ನಿಮ್ಮ ಪವಾಡದಿಂದ ನಮ್ಮಲ್ಲಿರುವ ಕೊರತೆಗಳನ್ನು ತಿದ್ದಿಕೊಳ್ಳಲು ಪ್ರಯತ್ನಿಸುವೆವು." (ಹುಜ್ಜತುಲ್ ಇಸ್ಲಾಮ್, ರೂಹಾನಿ ಖಝಾಯೀನ್ ಸಂಪುಟ-6, ಪುಟ-52)

ಹಝ್ರತ್ ಮಸೀಹ್ ಮೌಊದ್(ಅ)ರು ಕುರುಹು ವೀಕ್ಷಿಸಿದ ನಂತರ ಮುಸ್ಲಿಮರಾಗಬೇಕೆಂಬ ಶರತ್ತನ್ನು ಮಿಸ್ಟರ್ ಅಬ್ದುಲ್ಲಾ ಆಥಮ್ ದಿನಾಂಕ 9 ಮೇ 1893ರ ತನ್ನ ಒಂದು ಪತ್ರದಲ್ಲಿ ಹೀಗೆ ಬರೆದನು:

"ಒಂದು ವೇಳೆ ಮಹನೀಯರಾದ ತಾವು ಅಥವಾ ಅನ್ಯ ವ್ಯಕ್ತಿಯು ಯಾವುದೇ ರೀತಿಯಲ್ಲಿ ಅಂದರೆ ಪವಾಡದ ರೂಪದಲ್ಲಾಗಲಿ ಅಥವಾ ಸಾಕ್ಷ್ಯಾಧಾರದ ರೂಪದಲ್ಲಾಗಲಿ ಪವಿತ್ರ ಖುರ್‌ಆನಿನ ಬೊಧನೆಗಳನ್ನು ಅಲ್ಲಾಹನ ಗುಣಗಳನ್ನು ಸಾಬೀತು ಪಡಿಸಿದರೆ ನಾನು ಮಸಲ್ಮಾನನಾಗುವೆನು ಎಂದು ಒಪ್ಪುತ್ತೇನೆ." (ಸಚ್ಚಾಯಿ ಕಾ ಇಝ್‌ಹಾರ್, ರೂಹಾನಿ ಖಝಾಯೀನ್ ಸಂಪುಟ-6, ಪುಟ-80)

ಚರ್ಚೆಯ ಶರತ್ತುಗಳು ನಿಶ್ಚಿತವಾಯಿತು. ಜಂಡಿಯಾಲದ ಮುಸ್ಲಿಮರು ಸಹ ತಮ್ಮ ಸಹಮತವನ್ನು ನೀಡಿದರು ಆದರೆ ಪಾದರಿ ಆಥಮ್ ಹಾಗೂ ಇನ್ನುಳಿದ ಪಾದರಿಯರು ಡಾ॥ ಕ್ಲಾರ್ಕ್ ಅವರ ಹಝ್ರತ್ ಮಸೀಹ್ ಮೌಊದ್(ಅ) ಅವರೊಂದಿಗೆ ಚರ್ಚೆ ಮಾಡುವುದು ಇಷ್ಟವಾಗಲಿಲ್ಲ. ಹೀಗಾಗಿ ಅಮೃತ್ಸರ್‌ನ ರಿಯಾಝ್ ಹಿಂದ್ ಪ್ರೆಸ್‌ನ ಮಾಲಿಕರಾದ ಶೇಖ್ ನೂರ್ ಅಹ್ಮದ್ ಸಾಹೇಬರು ತಮ್ಮ ಒಂದು ಪತ್ರಿಕೆ "ನೂರ್ ಅಹ್ಮದ್" ಪುಟ ಸಂಖ್ಯೆ 22ರಲ್ಲಿ ಹೀಗೆ ಬರೆದರು: ಅವರು ಮತ್ತು ಮಿಸ್ತ್ರಿ ಖುತುಬ್ ಉದ್ದೀನ್ ಸಾಹೆಬ್ ಪಾದರಿ ಇಮಾದುದ್ದೀನ್ ಸಾಹೇಬ್ ಅವರ ಬಳಿಗೆ ಕೇಳಲು ಹೋದಾಗ:

"ಯಾವ ಪಾದರಿ ಸಾಹೇಬರು ಕ್ರೈಸ್ತರ ವತಿಯಿಂದ ಚರ್ಚೆಯಲ್ಲಿ ಭಾಗವಹಿಸುವರು ಮತ್ತು ಹಝ್ರತ್ ಮಿರ್ಝಾ ಸಾಹೇಬರೊಂದಿಗೆ ಪತ್ರವ್ಯವಹಾರ ಪ್ರಾರಂಭಿಸಿರುವರು. ತಾವು ಈ ಚರ್ಚೆಯಲ್ಲಿ ಭಾಗವಹಿಸುವಿರೋ ಎಂದು ಕೇಳಿದಾಗ ಅದಕ್ಕೆ ಅವರು ಉತ್ತರಿಸಿದರು ನಾನು ಇಂತಹ ಚರ್ಚೆಗಳನ್ನು ವ್ಯರ್ಥ ಎಂದು ಭಾವಿಸುತ್ತೇನೆ ಆದ್ದರಿಂದ ನಾನು ಇದರಲ್ಲಿ ಭಾಗವಹಿಸುವುದಿಲ್ಲ. ಇದಕ್ಕೆ ನಾನು ಜಂಡಿಯಾಲದ ಘಟನೆಯನ್ನು ತಿಳಿಸಿದಾಗ ಅವರು ಅದಕ್ಕೆ ಹೇಳಿದರು ಹೆನ್ರಿ ಮಾರ್ಟಿನ್ ಕ್ಲಾರ್ಕ್ ಹುಡುಗನಾಗಿದ್ದಾನೆ."

ಹಝ್ರತ್ ಮಸೀಹ್ ಮೌಊದ್(ಅ) ಅವರ ಪ್ರತಿನಿಧಿಗಳು ಚರ್ಚೆಗೆ ಶರತ್ತುಗಳನ್ನು ನಿಶ್ಚಯಿಸಲು ಅಮೃತ್ಸರಕ್ಕೆ ಆಗಮಿಸಿದಾಗ ಅಮೃತ್ಸರ್ ರೈಲ್ವೇಸ್ಟೇಷನ್‌ನಿಂದ ನೇರವಾಗಿ ಡಾ॥ ಕ್ಲಾರ್ಕ್‌ನ ಮನೆಗೆ ಬಂದರು ಡಾ॥ ಕ್ಲಾರ್ಕ್ ಸಾಹೇಬ್ ತಮ್ಮ ಸೇವಕನನ್ನು ಮನೆಯ ಜಗಲಿಯಲ್ಲಿ ಕುರ್ಚಿ ಹಾಕಿಸಿ ಅವರನ್ನು ಕೂರಿಸಲು ಆದೇಶಿಸಿ ಅವರು ಸ್ವತಃ ಮನೆ ಒಳಗೆ ಹೋದರು ಅಲ್ಲಿಂದ ಬೇರೆಯ ಬಾಗಿಲಿನಿಂದ ಅಬ್ದುಲ್ಲಾ ಆಥಮ್‌ನ ಮನೆಗೆ ಹೋದರು. ಅಷ್ಟರಲ್ಲಿ ಮಿಯಾಂ ಮುಹಮ್ಮದ್ ಬಖ್ಷ್ ಸಾಹೆಬರು ಸಹ ಜಂಡಿಯಾಲದಿಂದ ತಲುಪಿದರು ಡಾ॥ ಕ್ಲಾರ್ಕ್ ಅಬ್ದುಲ್ಲಾ ಆಥಮ್ ಅವರ ಬಳಿಗೆ ಹೋಗಿ ಹೇಳಿದರು: "ಖಾದಿಯಾನಿನಿಂದ ಕೆಲ ಜನರು ಚರ್ಚೆಯ ಶರತ್ತುಗಳು ಹಾಗೂ ದಿನಾಂಕವನ್ನು ನಿಶ್ಚಯಿಸಲು ಆಗಮಿಸಿದ್ದಾರೆ. ತಾವು ಅಲ್ಲಿಗೆ ಬಂದು ದಿನಾಂಕ ಹಾಗೂ ಶರತ್ತುಗಳನ್ನು ನಿಶ್ಚಯಿಸಿರಿ ಎಂದನು. ಅದಕ್ಕೆ ಆಥಮ್ ಸಾಹೆಬರು ತಮ್ಮ ಕೈಗಳನ್ನು ತಮ್ಮ ಕಿವಿಯ ಮೇಲಿರಿಸಿ ಹೇಳಿದರು; ಡಾ॥ ಸಾಹೆಬರೇ!! ಬೇರೆ ನೂರಕ್ಕಿಂತ ಹೆಚ್ಚು ಅನ್ಯ ಮೌಲವಿಗಳಿರುತ್ತಿದ್ದರೆ ಏನೂ ಕಷ್ಟದ ವಿಷಯವಾಗುತ್ತಿರಲಿಲ್ಲ ನೀವು ಕಣಜ ಹುಳುವಿನ ಗೂಡಿಗೆ ಕೈಹಾಕಿದ್ದೀರಿ. ಮಿರ್ಝಾ ಖಾದಿಯಾನಿಯನ್ನು ಎದುರಿಸುವುದು ಸುಲಭದ ವಿಷಯವಲ್ಲ. ನೀವೇ ಈ ಜಗಳ ಪ್ರಾರಂಭಿಸಿರುವುದು ಆದ್ದರಿಂದ ನೀವೇ ಇದನ್ನು ಪರಿಹರಿಸಿರಿ. ನಾನು ಎಂದೂ ಬರುವುದಿಲ್ಲ. ಡಾ॥ ಸಾಹೆಬ್ ಹೇಳಿದರು ಕ್ರೈಸ್ತ ಸಮುದಾಯಕ್ಕೆ ತಾವೇ ಪೈಲ್ವಾನರಾಗಿದ್ದೀರಿ. ನೀವು ಈ ಕೆಲಸವನ್ನು ಬಹಳ ಚತುರತೆಯಿಂದ ಪರಿಹರಿಸಬಹುದು ನಾನು ನಿಮ್ಮ ಭರವಸೆಯ ಮೇಲೆ ಈ ಕಾರ್ಯಕ್ಕೆ ಕೈ ಹಾಕಿರುವೆನು. ಆದ್ದರಿಂದ ಅದನ್ನು ನಿರಾಕರಿಸಬೇಡಿ. ಮುಕ್ಕಾಲು ಘಂಟೆಯ ವಿಚಾರದ ನಂತರ ಡಾ॥ ಸಾಹೆಬ್ ಅಬ್ದುಲ್ಲ ಆತಮ್ ಅವರನ್ನು ಕರೆದುಕೊಂಡು ಬಂದರು ಈ ಸಂಭಾಷಣೆಯ ಬಗ್ಗೆ ಮುಸ್ಲಿಮ್ ಖಾಂಸಾಮಾ ಅವರಿಂದ ನಂತರ ತಿಳಿಯಿತು. ಇವರಿಬ್ಬರು ಬಂದು ಕುರ್ಚಿಗಳ ಮೇಲೆ ಕುಳಿತಿದ್ದಹಾಗೆ ಅಬ್ದುಲ್ಲಾ ಆಥಮ್ ಸಾಹೆಬ್ ಹೇಳಿದರು "ಹಾಯ್ ನಾನು ಮೃತನಾದೆನು" ತದನಂತರ ಶರತ್ತುಗಳು ನಿಶ್ಚಯಿಸಲಾಯಿತು." (ರಿಸಾಲ ನೂರ್ ಅಹ್ಮದ್, ಪುಟ-24)

ಅಬ್ದುಲ್ಲಾ ಆಥಮ್ ಸಾಹೆಬ್ ಅವರೊಂದಿಗೆ ಅಮೃತ್ಸರ್ ಮತ್ತು ಬಟಾಲದ ಮೌಲವಿಗಳು ಭೇಟಿ ಆಗಿ ಹೇಳಿದರು ನೀವು ನಮ್ಮಿಂದ ಚರ್ಚೆ ಮಾಡಲು ಸಿದ್ಧವಾಗಲಿಲ್ಲ ಆದರೆ ಮಿರ್ಝಾ ಸಾಹೆಬ್ ಅವರೊಂದಿಗೆ ಚರ್ಚೆ ಮಾಡಲು ಸಿದ್ಧರಾಗಿದ್ದೀರಿ ಅವರನ್ನು ಅನ್ಯ ಮುಸ್ಲಿಮರು ಕಾಫರ್ ಎಂದು ಹೇಳಿದ್ದಾರೆ. ಆಗ ಅವರು ಈ ಸಂದರ್ಭವು ಉಚಿತ ಎಂದು ತಿಳಿದು ಡಾ॥ ಸಾಹೆಬ್ ಅವರನ್ನು ಹೇಳಿದರು:

"ನಾನು ಮೊದಲೇ ಹೇಳಿದ್ದೆ ಮಿರ್ಝಾ ಸಾಹೆಬ್ ಅವರೊಂದಿಗೆ ಚರ್ಚೆ ಮಾಡುವುದು ಬಹಳ ಕಷ್ಟದ ವಿಷಯವಾಗಿದೆ ಈಗ ಸನ್ನಿವೇಶವು ಬಹಳ ಉತ್ತಮವಾಗಿದೆ. ನೀವು ಮಿರ್ಝಾ ಸಾಹೆಬ್ ಅವರನ್ನು ನಾವು ಈ ಚರ್ಚೆ ಮಾಡುವುದಕ್ಕೆ ಸಿದ್ಧವಿಲ್ಲ ಎಂದು ಉತ್ತರ ನೀಡಿರಿ. ಅವರ ಬದಲಿಗೆ ನಾವು ಈ ಮೌಲವಿಗಳಿಂದ ಚರ್ಚೆ ಮಾಡೋಣ ಎಂದು." (ರಿಸಾಲ ನೂರ್ ಅಹ್ಮದ್, ಪುಟ-24)

ಇದಕ್ಕೆ ಡಾ॥ ಕ್ಲಾರ್ಕ್ ಅವರು 12 ಮೇ 1893ರಂದು ಒಂದು ಪ್ರಕಟಣೆ ಹೊರಡಿಸಿದರು ಅದು "ನೂರ್ ಅಫ್‌ಷಾನ್"ನಲ್ಲಿ ಅನುಬಂಧವಾಗಿದೆ ಇದು 12 ಮೇ 1893ರಂದು ಪ್ರಕಟವಾಯಿತು. ಈ ಪ್ರಕಟಣೆ ಹೊರಡಿಸುವ ಉದ್ದೇಶ ಹಝ್ರತ್ ಮಸೀಹ್ ಮೌಊದ್(ಅ) ಅವರೊಂದಿಗೆ ಚರ್ಚೆ ಕೈಗೊಳ್ಳ ಬಾರದೆಂದು ಇತ್ತು. ಈ ಉದ್ದೇಶದಿಂದ ಜಂಡಿಯಾಲದ ಮುಸ್ಲಿಮರನ್ನು

ಹಝ್ರತ್ ಮಸೀಹ್ ಮೌಊದ್(ಅ) ಅವರ ಬಗ್ಗೆ ದ್ವೇಶ ಹುಟ್ಟಿಸಲು ಮೌಲ್ವಿ ಮುಹಮ್ಮದ್ ಹುಸೈನ್ ಬಟಾಲವಿ ಹಾಗೂ ಅನ್ಯ ಮುಸ್ಲಿಂ ವಿದ್ವಾಂಸರು ಹುಝೂರ್(ಅ) ಅವರ ವಿರುದ್ಧ ಹೊರಡಿಸಿರುವ 'ಕಾಫಿರ್'ನ ಫತ್ವ 'ಇಷಾಅತುಸ್ಸುನ'ರಲ್ಲಿ ಪ್ರಕಟಗೊಂಡಿತ್ತು. ಅದನ್ನು ತನ್ನ ಪ್ರಕಟಣೆಯಲ್ಲಿ ಹೊರಡಿಸಿದನು. ಮತ್ತು 'ಇಷಾಅತುಸ್ಸನ' ವನ್ನು ಖರೀದಿಸಲು ಹೀಗೆ ಘೋಷಿಸಿದನು:

"**ಇಷಾಅತುಸ್ಸನ ಅನ್ನಬವೀಯ** ಪುಸ್ತಕವನ್ನು ಮೌಲವಿ ಅಬು ಸಯೀದ್ ಮುಹಮ್ಮದ್ ಹುಸೈನ್ ಸಾಹೆಬ್ ಅವರಿಂದ ತರಿಸಿಕೊಂಡು ನೋಡಬಹುದು. ಅದರ ಶುಲ್ಕ 8ರೂ ಆಗಿದೆ. ಲಾಹೋರಿನಲ್ಲಿ ಸಿಗುವುದು."

ಈ ಪ್ರಕಟಣೆಯಲ್ಲಿ ಡಾ॥ ಕ್ಲಾರ್ಕ್ ಜಂಡಿಯಾಲದ ಮುಸ್ಲಿಮರನ್ನು ಉದ್ದೇಶಿಸಿ ಹೀಗೆ ಹೇಳಿದನು:

"ನೀವೆಲ್ಲರು ಓರ್ವ ಮುಸಲ್ಲಾಮನ ಎಂದು ಭಾವಿಸಲು ಸಾಧ್ಯವಾಗದ ವ್ಯಕ್ತಿಯನ್ನು ಚರ್ಚೆಯಲ್ಲಿ ಎದುರಾಗಲಿ ಎಂದು ಆಶಿಸುತ್ತಿದ್ದೀರಿ ನೀವೆಲ್ಲರು ಯಾವ ಯೋಚನೆಗಳಲ್ಲಿ ಮುಳುಗಿದ್ದೀರಿ. ಮಿರ್ಝಾ ಗುಲಾಮ್ ಸಾಹೆಬ್ ಅವರ ವಿರುದ್ಧ ಪಂಜಾಬ್ ಹಾಗೂ ಹಿಂದುಸ್ತಾನದ ವಿದ್ವಾಂಸರು ಅವರು ಕಾಫಿರ್ ಎಂದು ಫತ್ವ ಹೊರಡಿಸಿದ್ದಾರೆ ಎಂಬುದು ನಿಮಗೆ ಅರಿವಿಲ್ಲವೆ."

ಮುಂದುವರಿದು ಬರೆಯುತ್ತಾನೆ:

"ನೀವೆಲ್ಲರು ಎಂತಹ ಅಂದಾಕಾರದಲ್ಲಿ ಮುಳುಗಿದ್ದೀರಿ. ಇಷ್ಟರ ವರೆಗೆ ತಾವೆಲ್ಲರು ಈ ಪುಸ್ತಕ(ಅಂದರೆ ಇಷಾಅತುಸ್ಸನ)ವನ್ನು ನೋಡಲಿಲ್ಲವೆ ಭಲೇ! ನಮ್ಮ ಮೇಲೆ ಮತ್ತು ಜಂಡಿಯಾಲದ ಮುಸ್ಲಿಮರ ಧೈರ್ಯದ ಮೇಲೆ ಯಾರ ಜನಾಝವೂ ಧರ್ಮಬದ್ಧವಲ್ಲವೋ ಅವನನ್ನು ತಾವೆಲ್ಲರು ತಮ್ಮ ನಾಯಕನನ್ನಾಗಿ ನೇಮಿಸಿದ್ದೀರಿ. ವಾಹ್ ಸಾಹೆಬ್ ವಾಹ್ ನಿಮ್ಮದು ಒಳ್ಳೆಯ ಅತೀರ್ಮಾನವಾಗಿದೆ." (ಸಚ್ಚಾಯಿ ಕಾ ಇಝ್‌ಹಾರ್, ರೂಹಾನಿ ಖಝಾಯೀನ್, ಸಂಪುಟ–6, ಪುಟ–73)

ಆದರೆ ಜಂಡಿಯಲದ ಮುಸ್ಲಿಮರು ಈ ಪ್ರಕಟಣೆಯನ್ನು ಲೆಕ್ಕಿಸಲಿಲ್ಲ ಮತ್ತು ಮಿಯಾಂ ಮುಹಮ್ಮದ್ ಬಖ್ಷ್ ಸಾಹೆಬರು ಪಾದರಿಗಳಿಗೆ ಉತ್ತರಿಸಿದರು. ಅವರು ಬರೆಯುತ್ತಾರೆ:

"ಯಾವ ಧರ್ಮವೂ ಭಿನ್ನಾಭಿಪ್ರಾಯರಹಿತ ಇಲ್ಲ. ಮತ್ತು ಕ್ರೈಸ್ತ ಧರ್ಮದಲ್ಲಿಯು ಸಹ ಭಿನ್ನಾಭಿಪ್ರಾಯಗಳಿಂದ ಕೂಡಿರುವುದು ಮತ್ತು ನಾವು ಓರ್ವ ಮುಸ್ಲಿಮರ ಬೆಂಬಲದಲ್ಲಿ ನಿಲ್ಲುವವನಿಗೆ ಕಾಫಿರ್ ಎಂದು ಹೇಳುವ ಇಂತಹ ಮೌಲವಿಗಳನ್ನು ಕಿಡಿಗೇಡಿಗಳು ಎಂದು ಭಾವಿಸುತ್ತೇವೆ." (ಸಚ್ಚಾಯಿ ಕಾ ಇಝ್‌ಹಾರ್, ರೂಹಾನಿ ಖಝಾಯೀನ್ ಸಂಪುಟ–6, ಪುಟ–73–74)

ಮತ್ತು ಹಝ್ರತ್ ಮಸೀಹ್ ಮೌಊದ್[ಅ] ಅವರು ಪಾದರಿಗಳನ್ನು ಸ್ಪಷ್ಟಪಡಿಸಿರುವಂತಹ ನಿಮ್ಮ ಬರಹಗಳು ಮತ್ತು ನೀವು ಒಪ್ಪಿಕೊಂಡಿರುವ ಶರತ್ತುಗಳೆಲ್ಲವೂ ನಮ್ಮ ಬಳಿ ಇವೆ. ಆದ್ದರಿಂದ ನೀವು ಚರ್ಚೆಗೆ ಸಿದ್ಧರಾಗಬೇಕು ಅಥವಾ ತಮ್ಮ ಸೋಲನ್ನು ಸ್ವೀಕರಿಸಬೇಕು. ಒಂದು ವೇಳೆ ತಾವು ಅನ್ಯ ಮೌಲವಿಗಳಿಂದ ಚರ್ಚೆ ಮಾಡಲು ಬಯಸಿದ್ದಲ್ಲಿ ಮೊದಲು ತಾವು ಸ್ವೀಕರಿಕೊಂಡಿರುವ ಚರ್ಚೆಯಲ್ಲಿ ಸೋತಿರುವೆವು ಎಂದು ಪತ್ರಿಕೆಯಲ್ಲಿ ಪ್ರಕಟಗೊಳಿಸಬೇಕು.

ಕೊನೇಗೆ ಪಾದರಿಗಳಿಗೆ ದಾರಿ ತಪ್ಪಿಸಿಕೊಂಡು ಓಡುವುದಕ್ಕೆ ಯಾವ ಮಾರ್ಗವು ದೊರಕಲಿಲ್ಲ ಆದ್ದರಿಂದ ಚರ್ಚೆಗೆ ಮುಂದಾಗಬೇಕಾಯಿತು. ಹೀಗೆ ಈ ಚರ್ಚೆಯು ಡಾ॥ ಕ್ಲಾರ್ಕ್ ಅವರ ಮನೆಯಲ್ಲಿ ದಿನಾಂಕ 22 ಮೇ 1893ರಲ್ಲಿ ಪ್ರಾರಂಭವಾಗಿ ಜೂನ್ 05, 1893ರಂದು ಕೊನೆಗೊಂಡಿತು.

ಈ 'ಜಂಗೆ ಮುಖದ್ದಸ್'ನಲ್ಲಿ ಶಿಲುಬೆ ಮುರಿಯುವವನ ಹಾಗೂ ಶಿಲುಬೆ ಬೆಂಬಲಿಗರ ನಡುವೆ ನಡೆಯಿತು. ಇದರಲ್ಲಿ ಇಸ್ಲಾಮಿನ ಬೆಂಬಲದಲ್ಲಿದ್ದ ಪೈಲ್ವಾನನ ಕೈಯಲ್ಲಿ ಅವರು ಸೋತುಹೋದರು ಮತ್ತು ಶಿಲುಬೆ ಮುರಿದುಹೋಯಿತು ಹೇಗೆ ಮುರಿದು ಹೋಯಿತೆಂದರೆ ಅದು ಪುನಃ ಜೋಡಿಸಲು ಸಾಧ್ಯವಾಗಲಿಲ್ಲ. ಮುಸ್ಲಿಮರು ಸಂತೋಷಗೊಂಡರು ಮತ್ತು ಶಿಲುಬೆಯ ಬೆಂಬಲಿಗರು ನಿರಾಶಿತರಾದರು.

### ಮಸೀಹ್ ಮೌಊದ್[ಅ] ಅವರ ಆಧ್ಯಾತ್ಮಿಕ ಶಸ್ತ್ರ

ಹದೀಸುಗಳಲ್ಲಿ ವ್ಯಕ್ತವಾಗಿರುವುದೇನಂದರೆ ಮಸೀಹೆ ಮೌಊದ್ ದಜ್ಜಾಲನನ್ನು ತನ್ನ ಆಧ್ಯಾತ್ಮಿಕ ಶಸ್ತ್ರದಿಂದ ಒಂದೇ ಏಟಿನಲ್ಲಿ ಮುಗಿಸುವನು ಮತ್ತು ಇನ್ನೊಂದು ಹದೀಸಿನಲ್ಲಿ ಅವನು ಬಾಬೆ ಲುಧ್ ನಿಂದ ಪ್ರವೇಶಿಸುವನು ಎಂದು ವ್ಯಕ್ತವಾಗಿದೆ. ಮತ್ತು ಲುಧ್ ಅರಬಿ ಭಾಷೆಯಲ್ಲಿ ಅಲದ ಎಂಬ ಪದದ ಬಹುವಚನವಾಗಿದೆ ಅಂದರೆ ಇಂತಹ ಜನರು ಜಗಳಗಳಲ್ಲಿ ಮತ್ತು ಚರ್ಚೆಗಳಲ್ಲಿ ವಿಜಯಶಾಲಿ ಆಗುವರು. ಆದ್ದರಿಂದ ಇದರಲ್ಲಿ ಸ್ಪಷ್ಟವಾಗುವುದೇನಂದರೆ ಮಸೀಹೆ ಮೌಊದ್ ಮತ್ತು ಅವರ ಸಂಗಡಿಗರು ದಜ್ಜಾಲನ್ನು ಚರ್ಚೆಗಳ ಮೂಲಕ ಕೊಂದುಹಾಕುವವು. ಹೀಗಾಗಿ ಈ ಭವಿಷ್ಯವಾಣಿಯು ಪೂರ್ಣವಾಯಿತು.

ಶಿಲುಬೆ ಮುರಿಯುವವನಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಚರ್ಚೆಯ ಪ್ರಾರಂಭದಲ್ಲಿ ಎಂತಹ ಏಟು ನೀಡಿದರು ಎಂದರೆ ಅದರಿಂದ ನಿಮ್ಮ ಎದುರಾಳಿ ಆದ ಪಾದರಿ ಅಬ್ದುಲ್ಲಾ ಆಥಮ್ ಹಾಗು ಅವನ ಸಹಾಯಕರು ಕೊನೇಯವರೆಗೂ ನಿಸ್ಸಹಾಯಕರಾಗಿದ್ದರು. ತಮ್ಮ ಕಡೆಯಿಂದ ಉತ್ತರ ನೀಡಲು ಅಸಮರ್ಥರಾಗಿದ್ದರು. ಹುಝೂರ್(ಅ) ಅವರು ನೀಡಿದ ಆ ಏಟು ಬಹಳ ಪ್ರಯೋಜನಕಾರಿ ಏಟಾಗಿತ್ತು. ಹುಝೂರ್(ಅ) ನುಡಿದರು:

"ಸ್ಪಷ್ಟವಾಗಲಿ ಈ ಚರ್ಚೆಯಲ್ಲಿ ಅವಶ್ಯಕವಾದ ವಿಷಯವೇನೆಂದರೆ ನಮ್ಮಿಂದ ಕೇಳಿದ ಪ್ರಶ್ನೆಗಳಿಗೆ ಉತ್ತರ ಅಥವಾ ನಮ್ಮ ಎದುರಾಳಿಯಾದ ಅಬ್ದುಲ್ಲಾ ಆಥಮ್ ಅವರ ಉತ್ತರವು ತಮ್ಮ ಕಡೆಯಿಂದ ನೀಡಬಾರದು ಬದಲಿಗೆ ತಮ್ಮ ತಮ್ಮ ಧಾರ್ಮಿಕ ಗ್ರಂಥದಿಂದಾಗಿರಬೇಕು ಇದು ಅವನಿಂದ ವಾದ ಎಂದು ಪರಿಗಣಿಸಲಾಗುವುದು. ಅದೇ ರೀತಿ ಈ ಚರ್ಚೆಯಲ್ಲಿ ಮಾಡುವಂತಹ ದಾವೆಯು ಸಹ ಅದರ ಪ್ರಕಾರವೇ ಆಗಿರಬೇಕು ಹೀಗೆ ಯಾರು ಸಹ ತಮ್ಮ ತಮ್ಮ ಧಾರ್ಮಿಕ ಗ್ರಂಥದಿಂದ ಹೊರಗೆ ಹೋಗಬಾರದು." (ಜಂಗೆ ಮುಖದ್ದಸ್, ರೂಹಾನಿ ಖಝಾಯೀನ್, ಸಂಪುಟ–6, ಪುಟ–89)

ಈ ಚರ್ಚೆಯನ್ನು ನಾವು ಪ್ರಾರಂಭದಿಂದ ಅಂತ್ಯವರೆಗೂ ಸಂಪೂರ್ಣ ಓದಿದಾಗ ನಮಗೆ ಸ್ಪಷ್ಟವಾಗುವುದೇನಂದರೆ ಕ್ರೈಸ್ತ ಚರ್ಚೆಗಾರರು ಕೊನೆಯವರೆಗೂ ಈ ನಿಶ್ಚಯಿಸಲಾದ ಮಟ್ಟದ ಮೇಲೆ ನಡೆಯಲಿಲ್ಲ. ಆಶ್ಚರ್ಯ ಏನಂದರೆ ಅವರು ಮಾಡುವಂತಹ ದಾವೆ ಹಾಗೂ ಸಾಕ್ಷಿ ಇವೆರಡಲ್ಲಿಯು ವ್ಯತ್ಯಾಸ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಹಝ್ರತ್ ಮಸೀಹ್ ಮೌಊದ್(ಅ) ಅವರು ಪವಿತ್ರ ಖುರ್‌ಆನಿನಿಂದ ತಮ್ಮ ದಾವೆ ವ್ಯಕ್ತ ಪಡಿಸಿದರು ಮತ್ತು ಅದರ ಬೆಂಬಲದಲ್ಲಿ ಹಾಗೂ ವೈಚಾರಿಕವಾಗಿ ಸಾಕ್ಷ್ಯಾಧಾರದಲ್ಲಿ ಪವಿತ್ರ ಖುರ್‌ಆನನಂದ ಸಾಕ್ಷಿಗಳನ್ನು ನೀಡಿದರು.

### ಪಾದರಿಯವರ ಏಟು

ಹಝ್ರತ್ ಮಸೀಹ್ ಮೌಊದ್(ಅ) ಚರ್ಚೆಯ ನಡುವೆ ಪದೇ ಪದೇ ಜೀವಿತ ಧರ್ಮವನ್ನು ಗುರುತಿಸುವ ಮಟ್ಟ ತಾಜ ಕುರುಹನ್ನು ತೋರಿಸುವುದಾಗಿದೆ ಮತ್ತು ದಾವೆ ಮಾಡುವ ಪಕ್ಷದವರು ತನ್ನ ಧರ್ಮ ಗ್ರಂಥದಲ್ಲಿ ಸ್ಪಷ್ಟ ಪಡಿಸಿರುವಂತಹ ಮುಮಿನ್‌ನ(ಭಯಭಕ್ತಿವುಳ್ಳವರ) ಗುಣಲಕ್ಷಣಗಳನ್ನು ತನ್ನಲ್ಲಿ ಸಾಬೀತು ಪಡಿಸಬೇಕು ಎಂದು. ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿರುವಂತಹ ಗುಣಲಕ್ಷಣಗಳನ್ನು ಹಝ್ರತ್ ಮಸೀಹ್ ಮೌಊದ್(ಅ)ರು ಸ್ವತಃ ತನ್ನಲ್ಲಿ ವ್ಯಕ್ತಪಡಿಸಲು ಸಿದ್ಧನಿದ್ದೇನೆ ಎಂದು ಪ್ರಕಟಿಸಿದರು. ಒಂದು ವರ್ಷದ ಒಳಗೆ ಅಲ್ಲಾಹನಿಂದ ಒಂದು ಕುರುಹನ್ನು ತೋರಿಸುವೆನು ಆ ಕುರುಹನ್ನು ತೋರಿಸಲು ಎದುರಾಳಿಗೆ ತೋರಿಸಲು ಸಾಧ್ಯವಿಲ್ಲ.

ಪಾದರಿ ಅಬ್ದುಲ್ಲಾ ಆಥಮ್ ಈ ದಾವೆಯನ್ನು ಸ್ವೀಕರಿಸಲು ಹಿಂಜರಿದನು ಆದರೆ ಅನೇಕ ದಿವಸಗಳ ವಿಚಾರದ ಸಂತರ ಒಂದು ಯೋಜನೆಯ ಅಡಿಯಲ್ಲಿ ತನ್ನ ಕಡೆಯಿಂದ ಒಂದು ಏಟು ನೀಡಿ ಇದರಿಂದ ಅವನ ಎದುರಾಳಿ ಸೋತು ಹೋಗುವೆನು ಮತ್ತು ನಮ್ಮಲ್ಲಿ ವಿಜಯಶಾಲಿಯ ಹಾರೈಕೆ ಕೂಗಲಾಗುವುದು ಎಂದು ಭಾವಿಸಿದ್ದನು. 26 ಮೇ 1893ರ ಚರ್ಚೆಯ ದಿವಸ ಪಾದರಿ ಅಬ್ದುಲ್ಲಾ ಆಥಮ್ ಹೀಗೆ ಹೇಳಿದನು:

"ನಾವು ನಮ್ಮ ಪ್ರಾಚೀನ ಬೋಧನೆಗಳಮುಂದೆ ಆಧುನಿಕ ಪವಾಡಗಳನ್ನು ತೋರಿಸ ಬೇಕೆಂಬ ಅವಶ್ಯಕತೆ ನಮಗಿಲ್ಲ ನಾವು ಇದಕ್ಕೆ ಸಿದ್ಧವಾಗುವುದಿಲ್ಲ ಆದ್ದರಿಂದ ಪವಾಡವನ್ನು ತೋರಿಸುವುದಕ್ಕೆ ನಮ್ಮಲ್ಲಿ ಅದರ ಸಾಮರ್ಥ್ಯವೂ ಇಲ್ಲ...... ಮಹನೀಯರಾದ ತಾವು ಇಂತಹ ಪವಾಡವನ್ನು ತೋರಿಸಿದರೆ ನಾವು ನಮ್ಮ ಕಣ್ಣುಗಳನ್ನು ಮುಚ್ಚುವುದಿಲ್ಲ."

"ಆದ್ದರಿಂದ ನಾವು ಈ ಮೂರು ಅಂಗವಿಕಲ ವ್ಯಕ್ತಿಗಳನ್ನು ನಿಮ್ಮ ಮುಂದಿರಿಸುತ್ತಿದ್ದೇವೆ ಅವರಲ್ಲಿ ಓರ್ವ ವ್ಯಕ್ತಿ ಕುರುಡನಾಗಿದ್ದಾನೆ, ಮತ್ತೋರ್ವ ವ್ಯಕ್ತಿ ಕುಂಟನಾಗಿದ್ದಾನೆ, ಮತ್ತೋರ್ವ ಮೂಕನಾಗಿದ್ದಾನೆ ಇವರಲ್ಲಿ ಕೇವಲ ಓರ್ವ ವ್ಯಕ್ತಿಯನ್ನು ಮಾತ್ರ ಸರಿ ಪಡಿಸಿದರೆ ಉತ್ತಮವಾಗುವುದು. ಈ ಪವಾಡದಿಂದ ನಮ್ಮ ಮೇಲೆ ಏನು ಅನಿವಾರ್ಯವಾಗಿರುತ್ತದೆಯೋ ಅದನ್ನು ನಾವು ಅನುಸರಿಸುವೆವು. ನೀವು ಅನುಸರಿಸುತ್ತಿರುವ ದೇವರು ಎಂತಹವನೆಂದರೆ ಅವನು ಮಾತನಾಡಲು ಸಮರ್ಥ್ಯವುಳ್ಳವನಾಗಿದ್ದಾನೆ. ಒಂದು ವೇಳೆ ಅವನು ನಿಮ್ಮ ವಿಶ್ವಾಸದ ಪ್ರಕಾರ ಮಾತನಾಡಲು, ಪ್ರಾರ್ಥನೆಗಳನ್ನು ಸ್ವೀಕರಿಸುವ ಸಾಮರ್ಥ್ಯ ಹೊಂದಿದ್ದಾನೆ ಎಂದಾದರೆ ಇವರನ್ನು ಸಹ ಉತ್ತಮಗೊಳಿಸಲು ಸಾಮರ್ಥ್ಯ ಅವನಲ್ಲಿರಬೇಕು. ಹೀಗಿದ್ದಲ್ಲಿ ಈ ವಿಷಯದಲ್ಲಿ ತಡ ಮಾಡುವ ಅವಶ್ಯಕತೆ ಏನಿದೆ? ಮತ್ತು ನಿಮ್ಮ ವಿಶ್ವಾಸದ ಪ್ರಕಾರ ಯಾರು

ನಿಷ್ಠಾವಂತರಾಗಿರುವರೋ ಅವರೊಂದಿಗೆ ಅದು ಅವಶ್ಯಕವಾಗಿ ಆಗುವುದು. ನೀವು ಅಲ್ಲಾಹನ ಸೃಷ್ಟಿಯ ಮೇಲೆ ಕರುಣಿಸಿರಿ ಈ ವಿಷಯದಲ್ಲಿ ಬೇಗ ಮಾಡಿರಿ. ಈ ವಿಷಯವು ಎದುರಾಗುವುದು ಎಂಬುದರ ಬಗ್ಗೆ ನಿಮಗೆ ಅರಿವಿರಬಹುದು. ಅಲ್ಲಾಹನು ನಿಮಗೆ ಈ ಯುದ್ಧದಲ್ಲಿ(ಚರ್ಚೆಯಲ್ಲಿ) ಜಯ ನೀಡುತ್ತಾನೆ ಎಂದು ವಾರ್ತೆ ನೀಡಿದ್ದಾನೆ ಎಂದರೆ ಅವನು ಇದರ ಬಗ್ಗೆಯು ಸಹ ವಾರ್ತೆ ನೀಡಿರಬಹುದು ಅಂದರೆ ಈ ಅಂಗವಿಕಲರನ್ನು ಹಾಗೂ ತೊಂದರೆಯಲ್ಲಿ ಸಿಲುಕಿರುವಂತಹ ಅನ್ಯ ವ್ಯಕ್ತಿಯರನ್ನು ಅವರ ಸಂಕಷ್ಟಗಳನ್ನು ನಿವಾರಿಸಬಹುದು ಎಂದು. ಆದ್ದರಿಂದ ತಾವು ಈಗಲೇ ಕ್ರೈಸ್ತ ಹಾಗೂ ಮುಸ್ಲಿಮರ ಮುಂದ ತಮ್ಮ ಈ ಚ್ಯಾಲೆಂಜನ್ನು ಸ್ವೀಕರಿಸಿರಿ ಅದನ್ನು ಪೂರ್ಣಗೊಳಿಸಿರಿ." (ಜಂಗೆ ಮುಖದ್ದಸ್, ರೂಹಾನಿ ಖಝಾಯೀನ್, ಸಂಪುಟ–6, ಪುಟ–150–151)

ಎದುರಾಳಿಯ ಈ ಏಟು ಶಿಲುಬೆ ಮುರಿಯುವವನ ಎದುರು ಅನೇಕ ಜನರ ಮುಂದೆ ಹೇಗಿತ್ತೆಂದರೆ ಹಝ್ರತ್ ಮುಸಾ ಅಲೈಹಿಸ್ಸಲಾಮ್ ಅವರ ಎದುರು ಜಾದುಗಾರರು ತಮ್ಮ ಲಾಠಿ ಹಾಗೂ ಹಗ್ಗಗಳು ಹೇಗೆ ನೋಡುವವರಿಗೆ ಓಡುತ್ತಿರುವ ಹಾಗೆ ಕಾಣಿಸಿತು ಅದನ್ನು ಎಸೆದು ತಾವು ವಿಜಯಶಾಲಿ ಆದೆವು ಎಂದು ಘೋಶಿಸಿದರು ಅದರಿಂದ ಹಝ್ರತ್ ಮೂಸ(ಅ) ಅವರ ಮನಸ್ಸಿನ ಮೇಲೆ ಭಯ ಹುಟ್ಟಿತು ಎಲ್ಲಿ ಅಲ್ಲಾಹನ ಸತ್ಯತೆಯು ಈ ಜಾದೂಗರರ ಕಾರ್ಯದಿಂದ ರಹಸ್ಯವಾಗಿರುವುದೊ ಎಂದು. ಆಗ ಅಲ್ಲಾಹನು ತಕ್ಷಣವೇ ತಮ್ಮ ಲಾಠಿಯನ್ನು ಎಸೆಯಲು ಆದೇಶಿಸಿ ಸುವಾರ್ತೆ ನೀಡಿದನು ನೀವೇ ವಿಜಯಶಾಲಿ ಆಗುವಿರಿ ಎಂದು. ಆದರೆ ಈ ಚರ್ಚೆಯ ಸಮಯದಲ್ಲಿ ಶ್ರೋತೃಗಳ ಮನಸ್ಸಿನಲ್ಲಿ ಭಯ ಹುಟ್ಟಿದ್ದಿರಬಹುದು ಅವರು ಯೋಚಿಸಿರಬಹುದು ಈಗ ಏಟಿನ ಉತ್ತರ ಏನಾಗುವುದು ಎಂದು ಮತ್ತು ಕ್ರೈಸ್ತರು ಮನಸ್ಸಿನಲ್ಲಿಯೇ ಸಂತೋಷಗೊಂಡಿರಬಹುದು ಈ ಏಟಿನ ಫಲವಾಗಿ ನಾವು ವಿಜಯಶಾಲಿ ಆಗುವೆವು ಎಂದು ಆದರೆ ಅಲ್ಲಾಹನ ಈ ಹುಲಿ ಅವನಿಗೆ ಮೊದಲೇ ಆ ಕಾರುಣ್ಯನಿಧಿ ಆದ ಅಲ್ಲಾಹನು ನೀನೇ ವಿಜಯಶಾಲಿ ಆಗುವವನು ಎಂದು ಸುವಾರ್ತೆ ನೀಡಿದ್ದನು ಅವನು ಭಯಭೀತನಾಗಲಿಲ್ಲ ಬದಲಿಗೆ ಬಹಳ ಸಹನೆ ತಾಳ್ಮೆಯಿಂದ ಕುಳಿತಿದ್ದನು. ನಿಮ್ಮ ಮುಖದ ಮೇಲೆ ಯಾವ ರೀತಿಯ ಭಯವು ಕಾಣುತ್ತಿರಲಿಲ್ಲ ಆದರೆ ತನ್ನ ತಿರುಗಿಗೋಸ್ಕರ ಪಾದರಿಯರ ಕುತಂತ್ರದ ಉತ್ತರ ನೀಡಲು ಕಾತುರದಿಂದ ಕಾಯುತ್ತಿದ್ದನು. ಅನಂತರ ಪಾದರಿ ಅಥಮ್ ತನ್ನ ವಿಷಯವನ್ನು ಬರೆಸಿದ ನಂತರ ನಿಮ್ಮ ವಿಷಯ ಬರೆಸುವ ಸಮಯ ಬಂತು. ತಾವು ಬಹಳ ವೈಭವದಿಂದ ತಮ್ಮ ಉತ್ತರವನ್ನು ಬರೆಸಲು ಪ್ರಾರಂಭಿಸಿದರು. ಅವರು ಹೇಳಿದರು: ನೀವು ನಿಜವಾದ ಕ್ರೈಸ್ತರಾಗಿದ್ದರೆ ಹೇಳಿರಿ: "ನಿಮ್ಮ ಧರ್ಮದಲ್ಲಿ ಈಸ ಮಸೀಹರು ಉಲ್ಲೇಖಿಸಿದಂತಹ ಮೋಕ್ಷದ ಕುರುಹುಗಳು ಅಥವಾ ನೈಜ್ಯ ದಾಸನ ಗುರುತುಗಳ ಉಲ್ಲೇಖಿಸಿದ ಗುರುತುಗಳು ನಿಮ್ಮಲ್ಲಿ ಎಲ್ಲಿದೆ. ಉದಾಹರಣೆಗೆ ಮರ್‌ಖಿಶ್ 16/17ರಲ್ಲಿ ಬರೆಯಲಾಗಿದೆ: "ಸತ್ಯವಿಶ್ವಾಸಿಗಳ ಗುರುತುಗಳು ಇಂತಿವೆ...... ಅವರು ರೋಗಿಗಳ ಮೇಲೆ ಕೈ ಇಟ್ಟರೆ ಅವರು ಆರೋಗ್ಯವಂತರಾಗುವರು."

"ಈಗ ನಾನು ನಿಮ್ಮಲ್ಲಿ ಅತೀ ವಿನಮ್ರತೆಯಿಂದ ಕೇಳಿಕೊಳ್ಳುತ್ತೇನೆ ಈ ಪದಗಳಲ್ಲಿ ನಿಷ್ಕರುಣೆ ಅಥವಾ ಕಹಿ ಮಾತಿದ್ದರೆ ಅದಕ್ಕೆ ಕ್ಷಮೆ ಯಾಚಿಸುತ್ತೇನೆ ನೀವು ಮುಂದಿರಿಸಿದಂತಹ ಈ ಮೂರು ರೋಗಿಗಳು ವಿಶೇಷವಾಗಿ ಕ್ರೈಸ್ತರಿಗಾಗಿ ಈಸ ಮಸೀಹರು ನೀಡಿದ್ದಾರೆ ಅವರು ಹೇಳುತ್ತಾರೆ ಒಂದು ವೇಳೆ ನೀವು ನಿಷ್ಠಾವಂತ ಕ್ರೈಸ್ತರಾಗಿದ್ದರೆ ನಿಮ್ಮ ಗುರುತು ನೀವು ರೋಗಿಯ ಮೇಲೆ ಕೈಇರಿಸಿದರೆ ಆ ರೋಗಿಯು ಆರೋಗ್ಯವಂತನಾಗುವನು. ಈಗ ನಾನು ಕ್ಷಮೆ ಯಾಚಿಸುತ್ತಾ ಕೇಳಿಕೊಳ್ಳುವುದೇನಂದರೆ ನೀವು ನಿಷ್ಠಾವಂತರಾಗಿದ್ದೀರಿ ಎಂಬ ದಾವೆ ಇದ್ದರೆ ಈ ಕ್ಷಣವೇ ನೀವು ಮುಂದಿರಿಸಿದ ಈ ಮೂರು ರೋಗಿಗಳಿದ್ದಾರೆ ನೀವು ಇವರ ಮೇಲೆ ತಮ್ಮ ಕೈ ಇರಿಸಿರಿ ಇವರು ಆರೋಗ್ಯವಂತರಾದರೆ ನಾವು ನಿಮ್ಮನ್ನು ಸತ್ಯವಂತರು, ನಿಷ್ಠಾವಂತರು ಹಾಗೂ ಮೊಕ್ಷ ಹೊಂದಿದವರು ಎಂದು ಸ್ವೀಕರಿಸುವೆವು ಏಕೆಂದರೆ ಈಸ ಮಸೀಹರು ಹೀಗೆ ಹೇಳಿದ್ದಾರೆ: ನಿಮ್ಮಲ್ಲಿ ಒಂದು ಸಾಸಿವೆ ಕಾಳಿನಷ್ಟು ವಿಶ್ವಾಸವಿದ್ದರೆ ನೀವು ಒಂದು ಬೆಟ್ಟವನ್ನು ಹೋರಾಡು ಎಂದು ಹೇಳಿದರೆ ಅದು ಹೋರಾಡಲು ಸಾಧ್ಯ ಎಂದು ಏನೇ ಇರಲಿ ಈಗ ನಾನು ಬೆಟ್ಟವನ್ನು ಅಲ್ಲಾಡಿಸಲು ಹೇಳುವುದಿಲ್ಲ ಏಕೆಂದರೆ ಅದು ನಮ್ಮಿಂದ ಬಹಳ ದೂರದಲ್ಲಿದೆ ಆದರೆ ನೀವು ಸ್ವತಃ ಈ ಮೂರು ರೋಗಿಗಳನ್ನು ಮುಂದಿರಿಸಿದ್ದೀರಿ ಅವರ ಮೇಲೆ ತಮ್ಮ ಕೈಯನ್ನಿರಿಸಿ ಇವರನ್ನು ಅರೋಗ್ಯವಂತರನ್ನಾಗಿ ಮಾಡಿರಿ ಇಲ್ಲದಿದ್ದರೆ ಒಂದು ಸಾಸಿವೆ ಕಾಳಿನಷ್ಟು ವಿಶ್ವಾಸವು ಕೈಯಿಂದ ಜಾರಿ ಹೋಗುತ್ತದೆ.

ಆದುದರಿಂದ ನಿಮಗೆ ಸ್ಪಷ್ಟಪಡಿಸುವುದೇನಂದರೆ ಈ ಆಕ್ಷೇಪವು ನಮ್ಮ ಮೇಲಿರಿಸಲು ಸಾಧ್ಯವಿಲ್ಲ ಏಕೆಂದರೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ನಮ್ಮ ಗುರುತುಗಳಲ್ಲಿ ಈ ಗುರುತುಗಳನ್ನಿರಿಸಲಿಲ್ಲ. ಆದರೆ ನಿಸ್ಸಂದೇಹವಾಗಿ ಇದು ನಿಮ್ಮ ಗುರುತುಗಳಾಗಿವೆ. ರೋಗಿಗಳ ಮೇಲೆ ಕೈಇರಿಸಿದರೆ ಅವರು ಆರೋಗ್ಯವಂತರಾಗುತ್ತಾರೆ. ಹೀಗು ಹೇಳಿದ್ದಾನೆ ನಾನು ನನ್ನ ಇಚ್ಛೆ ಅನುಸಾರ ನಿಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುವನು. ಕನಿಷ್ಠ ಪಕ್ಷ ಪ್ರಾರ್ಥನೆ ಸ್ವೀಕರಿಸುವುದಿಲ್ಲವಾದರೆ ಅದು ಅಲ್ಲಾಹನ ಇಚ್ಛೆಯ ಅನುಸಾರ ಇಲ್ಲದಿದ್ದರೆ ಅದರ ಬಗ್ಗೆ ಹೇಳುವನು. ನಿಮಗೆ ಬೇಕಾದ ರೀತಿಯಲ್ಲಿ ನೀವು ಮಾಡಿರಿ ಎಂದು ಎಲ್ಲಿಯೂ ಹೇಳಲಿಲ್ಲ. ಅದರೆ ಈಸ ಮಸೀಹರ ಈ ಆದೇಶದಿಂದ ತಿಳಿದು ಬರುವುದೇನಂದರೆ ಅವರು ಸ್ವತಃ ರೋಗಿಗಳಿಗೆ ಅರೋಗ್ಯವಂತರಾಗಿ ಮಾಡುವ ಸಾಮರ್ಥ್ಯ ಹೊಂದಿರುವರು ಅಲ್ಲದೆ ಅವರ ವಿಶ್ವಾಸಿಗಳು ಸಹ ಹೀಗೆ ಮಾಡಲು ಸಾಧ್ಯ ಎಂದು ಹೇಳಿದ್ದಾರೆ. ಉದಾಹರಣೆಗೆ ಮತಿ 10 ಬಾಬ್ 1ರಲ್ಲಿ ಬರೆಯಲಾಗಿದೆ...... ಈಗ ನೀವು ನಿಮ್ಮ ಸತ್ಯವಿಶ್ವಾಸಿಗಳ ಗುರುತುಗಳ ಪ್ರಕಾರ ಈ ರೋಗಿಗಳನ್ನು ಆರೋಗ್ಯವಂತರಾಗಿಸಿರಿ ಇಲ್ಲವಾದರೆ ನಿಮ್ಮಲ್ಲಿ ಒಂದು ಸಾಸಿವೆ ಕಾಳಿನಷ್ಟು ವಿಶ್ವಾಸ ಇಲ್ಲ ಎಂದು ಒಪ್ಪಿಕೊಳ್ಳಿರಿ...... ನಿಮ್ಮ ವಿಶ್ವಾಸವಿರುವುದು ಈಸ ಮಸೀಹರು ಜೀವಂತವಾಗಿದ್ದಾರೆ, ಅಂತರ್ಯಾಮಿ ಆಗಿದ್ದಾರೆ ಮತ್ತು ನಿಮ್ಮೊಂದಿಗಿದ್ದಾರೆ, ನಿಮಗೆ ಬೇಕಾದದನ್ನೆಲ್ಲ ನೀಡುತ್ತಾರೆ ಎಂಬ ವಿಶ್ವಾಸ ಇದ್ದರೆ. ಈ ಮೂರು ರೋಗಿಗಳನ್ನು ನೀವು ಕೈ ಇರಿಸಿ ಆರೋಗ್ಯವಂತರಾಗಿ ಮಾಡಿರಿ ಹೀಗೆ ಅವರು ಆರೋಗ್ಯವಂತರಾದರೆ ನಿಮ್ಮ ನಿಷ್ಠೆಯ ಗುರುತುಗಳು ಸಹ ಪೂರ್ಣವಾಗಲಿ ಇಲ್ಲದಿದ್ದರೆ ಕ್ರೈಸ್ತ ಮತಕ್ಕೆ ಸೇರಿ ಒಂದು ಸತ್ಯ ವಿಶ್ವಾಸಿಯೊಂದಿಗೆ ಚರ್ಚೆ ಮಾಡುವುದು ಸರಿಯಲ್ಲ. ಸತ್ಯ ಕ್ರೈಸ್ತನ ಗುರುತುಗಳು ಯಾಚಿಸಿದಾಗ ನಾವು ಅನರ್ಹರು ಎಂದು ಹೇಳುವುದು ಸರಿಯಲ್ಲ. ಈ ಮಾತಿನಿಂದ ತಾವೆಲ್ಲರು ಒಪ್ಪಿಕೊಳ್ಳಬೇಕಾದ ವಿಷಯವೇನೆಂದರೆ ನಿಮ್ಮ ಧರ್ಮ(ಕ್ರೈಸ್ತ) ಮೃತ ಧರ್ಮ ಎಂದು. ಆದರೆ ನಾವು ನಮ್ಮ ಧರ್ಮದಲ್ಲಿ ಪ್ರಸ್ತಾಪಿಸಲಾದ ಸತ್ಯವಿಶ್ವಾಸಿಗಳ ಗುರುತುಗಳನ್ನು ತೋರಿಸಲು ಸಿದ್ಧವಾಗಿದ್ದೇವೆ ಒಂದು ವೇಳೆ ನಮಗೆ ಅದನ್ನು ತೋರಿಸಲು ಸಾಧ್ಯವಾಗದಿದ್ದರೆ ನೀವು ಹೇಳುವಂತಹ ಶಿಕ್ಷೆ ಅನುಭವಿಸಲು ಸಿದ್ಧವಾಗಿದ್ದೇವೆ." (ಜಂಗೆ ಮುಖದ್ದಸ್, ರೂಹಾನಿ ಖಝಾಯೀನ್ ಸಂಪುಟ–6, ಪುಟ–153–155)

ನೀವು ಹೀಗೂ ಸಹ ಹೇಳಿದ್ದೀರಿ ಈಸ ಮಸೀಹರು ಸ್ವತಃ ತಮ್ಮ ಕಡೆಯಿಂದ ತಮಗೆ ಬೇಕಾದ ಗುರುತುಗಳನ್ನು ತೋರಿಸಲು ಅನರ್ಹರಾಗಿದ್ದರು ಮರ್‌ಖಿಸ್ 12, 8/11ರಲ್ಲಿ ಹೀಗೆ ಬರೆಯಲಾಗಿದೆ:

"ಆಗ ಫರೀಸಿ(ಪ್ರಾಚೀನ ಯಹೂದಿಯರು) ಹೊರಟರು ಅವನಿಂದ ವಾದ ವಿವಾದ ನಡೆಸಿ ಹೊರಟರು ಅಂದರೆ ಹೇಗೆ ಈಗ ನನ್ನಿಂದ ವಾದ ಮಾಡುತ್ತಾರೊ ಹಾಗೆ, ವನ ಪರೀಕ್ಷೆಗಾಗಿ ಒಂದು ಕುರುಹನ್ನು ಯಾಚಿಸಿದರು ಅವನು ತನ್ನ ಮನಸ್ಸಿನಲ್ಲಿ ಹೇಳಿದನು ಈ ಕಾಲದ ಜನರು ಏಕೆ ನನ್ನಿಂದ ಗುರುತನ್ನು ಯಾಚಿಸುತ್ತಾರೆ ಎಂದು. ನಾನು ನಿಮಗೆ ನಿಜ ಹೇಳುವೆನು ಈ ಕಾಲದ ಜನರಿಗೆ ಯಾವುದೇ ಕುರುಹು ನೀಡಲಾಗುವುದಿಲ್ಲ...... ಅದಕ್ಕಿಂತ ಒಂದು ವಿಚಿತ್ರವಾದ ಘಟನೆ ನೋಡಿರಿ ಈಸ ಮಸೀಹರನ್ನು ಶಿಲುಬೆಯ ಮೇಲಿರಿಸಿದಾಗ ಯಹೂದಿಯರು ಹೇಳಿದರು ಇವನು ಎಲ್ಲರನ್ನು ಉಳಿಸಿದನು ಆದರೆ ತನ್ನನ್ನು ಉಳಿಸಲು ಸಾಧ್ಯವಾಗುತ್ತಿಲ್ಲ. ಒಂದು ವೇಳೆ ಇವನು ಇಸ್ರಾಯೀಲಿನ ರಾಜನಾಗಿದ್ದರೆ ಶಿಲುಬೆಯಿಂದ ಕೆಳಗಿಳಿದು ಬಂದರೆ ನಾವು ಅವನನ್ನು ಸ್ವೀಕರಿಸುವೆವು...... ಆದರೆ ಈಸ ಮಸೀಹರಿಗೆ ಕೆಳಗಿಳಿದು ಬರಲು ಸಾಧ್ಯವಾಗಲಿಲ್ಲ." (ಜಂಗೆ ಮುಖದ್ದಸ್, ರೂಹಾನಿ ಖಝಾಯೀನ್, ಸಂಪುಟ–6, ಪುಟ–155–156)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈ ಉತ್ತರ ಬರೆಸಿದ ತಕ್ಷಣ ಪಾದರಿಗಳು ಮುಂದಿರಿಸಿದ ಆ ಮೂರು ರೋಗಿಗಳನ್ನು ಆ ಸಭೆಯಿಂದ ಮಾಯಗೊಳಿಸಿದರು. ಹೀಗೆ ಈ ವಿಷಯವು ಅವರ ಹಣೆಯ ಮೇಲೆ ಒಂದು ಕಳಂಕದ ರೀತಿಯಲ್ಲಿ ಇರಿಸಲಾಯಿತು ಮತ್ತು ಅಲ್ಲಾಹನ ಪಹಿಲ್ವಾನ ಶಿಲುಬೆ ಮುರಿಯುವವನು ವಿಜಯಶಾಲಿ ಆದನು.

**ಗುರುತು**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಲ್ಲಾಹನಲ್ಲಿ ಮಾಡಿದಂತಹ ಪ್ರಾರ್ಥನೆಗಳನ್ನು ಸ್ವೀಕರಿಸಿದನು. ಮತ್ತು ಅಲ್ಲಾಹನು ಎದುರಾಳಿಯ ಬಗ್ಗೆ ಆ ಕುರುಹುವಿನ ಬಗ್ಗೆ ವಾರ್ತೆ ನೀಡಿದನು ಅದು ಈ ಸಂಪುಟದ ಪುಟ 291 ಹಾಗೂ 292ರಲ್ಲಿದೆ.

ಒಟ್ಟಿನಲ್ಲಿ ಈ ಯುದ್ಧ "ಜಂಗೆ ಮುಖದ್ದಸ್" ದಜ್ಜಾಲಿನ ಪಂಗಡ ಹಾಗೂ ಮಸೀಹೆ ಮೌಊದಿನ ನಡವೆ ನಡೆಯಿತು ಅವನು ಶಿಲುಬೆಯ ಧರ್ಮವನ್ನು ಮುರಿದು ಹಾಕಿದನು ಮತ್ತು ಸಾಕ್ಷ್ಯಾಧಾರಗಳಿಂದ ದಜ್ಜಾಲನು ನಶಿಸಿಹೋದನು.

**********

# ಶತ್ರುಗಳ ವಿನಾಶದ ಬೆಳಕಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆ

ಸೈಯದುನಾ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಪುಸ್ತಕ 'ಹಖೀಖತುಲ್ ವಹೀ' ರುಹಾನಿ ಖಝಾಯೀನ್ ಸಂಪುಟ 22 ರಿಂದ ಮಸೀಹ್(ಅ) ರವರ ಎರಡು ವಿರೋಧಿಗಳ ದಾರುಣ ಅಂತ್ಯವನ್ನು ಪ್ರಸ್ತುತ ಪಡಿಸುತ್ತಿದ್ದೇವೆ. ಈ ಇಬ್ಬರು ವಿರೋಧಿಗಳು ಮಸೀಹ(ಅ)ರ ಭವಿಷ್ಯವಾಣಿಯಂತೆ ನಾಶವಾದರು ಇವರ ಸಾವು ಇದರ ಎಚ್ಚರದಾಯಕ ಪರಿಣಾಮವು ಹಝ್ರತ್ ಮಸೀಹ್ ಮೌಊದ್(ಅ) ರವರ ಸತ್ಯತೆಗೆ ಸಾಕ್ಷಿಯಾಗಿದೆ.

## ಪ್ರಕಾಶಾಮಾನ ಚಿಹ್ನೆ ಬಾಬು ಇಲಾಹಿ ಬಖ್ಷ್ ಅಕೌಂಟೆಂಟ್ ಪೆನ್‌ಶನರ್ ಲಾಹೋರ್, ಮುಸಾವಿನ ಸುಳ್ಳು ದಾವೆದಾರನು ಮರಣ ಹೊಂದಿದನು.

ಮುನ್‌ಶಿ ಇಲಾಹಿ ಬಖ್ಷ್ ಅಕೌಂಟೆಂಟ್ ಲಾಹೋರ್ ಹಝ್ರತ್ ಮಸೀಹ್ ಮೌಊದ್(ಅ) ರವರ ಶಿಶ್ಯನಾಗಿದ್ದನು ಹೆಚ್ಚು ವಿಧೇಯತೆಯನ್ನು ಹೊಂದಿದ್ದನು. 1889ರಲ್ಲಿ ಸಯ್ಯದುನ ಹಝ್ರತ್ ಮಸೀಹ್ ಮೌಊದ್(ಅ) ರವರು ಬೈಅತ್ತಿನ ಮೂಲಕ ಜಮಾಅತ್ತಿನ ಬುನಾದಿಯನ್ನು ನೀಡಿದರು ಮತ್ತು ತನ್ನ ಅನುಯಾಯಿಗಳಿಗೆ ಬೈಅತ್ತಿನಲ್ಲಿ ಭಾಗವಹಿಸಲು ಹೇಳಿದಾಗ ಆ ಕೂಡಲೆ ಇಲಾಹಿ ಬಖ್ಷ್ ಮುನಿಸಿ ಕೊಂಡನು ಆತನು ಖಾದಿಯಾನಿಗೆ ಬಂದು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಬಹಳ ಅಹಂಕಾರದಿಂದ ತನ್ನ ಕನಸು ಹಾಗೂ ದೈವವಾಣಿಗಳನ್ನು ತಿಳಿಸಿದನು ಮತ್ತು ಮುಂದುವರಿಯುತ್ತ ಒಂದು ಕನಸ್ಸಿನಲ್ಲಿ ನಾನು ನಿಮಗೆ ಕೇಳುತ್ತೇನೆ ನಾನು ನಿಮ್ಮ ಬೈಅತ್ ಏಕೆ ಮಾಡಬೇಕು ನೀವೇ ನನ್ನ ಬೈಅತ್ ಮಾಡಿರಿ. ಸೈಯ್ಯದುನಾ ಹಝ್ರತ್ ಮಸೀಹ್ ಮೌಊದ್(ಅ) ರವರು ತಮ್ಮ ಈ ಮಿತ್ರನನ್ನು ಸಾವಿನಿಂದ ರಕ್ಷಿಸಲು "ಝರೂರತುಲ್ ಇಮಾಮ್" (ಇಮಾಮಿನ ಅವಶ್ಯಕತೆ) ಎಂಬ ಮಹತ್ತರವಾದ ಗ್ರಂಥವನ್ನು ರಚಿಸಿದರು ಮತ್ತು ಇದರಲ್ಲಿ ಅವರು ಪ್ರತಿಯೊಂದು ರೀತಿಯಿಂದ ಅವರಿಗೆ ಸಮಜಾಯಿಕೆ ನೀಡಲು ಪ್ರಯತ್ನಿಸಿದರು. ನೀವು ಬೈಅತ್ ಮತ್ತು ದೈವವಾಣಿಯ ಸತ್ಯತೆ ಬಗ್ಗೆ ಕೂಡ ಅತಿ ಕಷ್ಟಕರ ದಿವ್ಯಜ್ಞಾನದ ಬಗ್ಗೆ ಚರ್ಚಿಸಿದರು. ಈ ಗ್ರಂಥದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ಪ್ರವಚನಗಳನ್ನು ನೀಡಲಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ರವರು ಇಲಾಹಿ ಬಖ್ಷ್‌ನೊಂದಿಗೆ ಹೀಗೆ ನುಡಿದರು:

ಆತ್ಮೀಯ ಮಿತ್ರರೇ!! ನಾನಾದರೋ ದಿವ್ಯಜ್ಞಾನದ ಮತ್ತು ಯಥಾರ್ಥ ಅರಿವು ಹಾಗೂ ಪಾರಮಾರ್ಥಿಕ ಅನುಗ್ರಹಗಳ ಹಸಿವಿನಿಂದಲೂ, ದಾಹದಿಂದಲೂ ಬಳಲುತ್ತಿದ್ದೇನೆ. ಒಂದು ಸಮುದ್ರದಷ್ಟನ್ನು ಕುಡಿದರೂ ಸಹ ತರಪ್ತಿಯಾಗಲಾರದಷ್ಟು, ಆದುದರಿಂದ ಯಾರಾದರು ನಮ್ಮನ್ನು ತಮ್ಮ ದಾಸತ್ವದಲ್ಲಿ ಸ್ವಕರಿಸಲು ಬಯಸುವುದಿದ್ದಲ್ಲಿ, ಬೈಅತಿನ ನಿಬಂಧನೆಗಳನ್ನೂ ಅದರ ನಿಜ ತತ್ವವನ್ನು ಪೂರ್ತಿಕರಿಸಿಕೊಂಡು ಕ್ರಯವಿಕ್ರಯದ ಈ ಒಡಂಬಡಿಕೆಯನ್ನು ನೇರ ಮಾರ್ಗದಲ್ಲಿ ನಮ್ಮಿಂದ ಪಡೆದುಕೊಳ್ಳಲಿ. ನಮಗೆ ಲಭಿಸದೆ ಇರುವಂತಹ ಸತ್ಯಜ್ಞಾನವೂ ಆಧ್ಯಾತ್ಮಿಕ ಸಂಪತ್ತು ಸ್ವರ್ಗಿಯ ಅನುಗ್ರಹಗಳು ಅವರ ಬಳಿ ಇರುವುದಾದರೆ ಅಥವಾ ನಮಗೆ ತೆರೆದುಕೊಡಲ್ಪಡದಂತಹ ಪವಿತ್ರ ಖುರ್‌ಆನಿನ ಜ್ಞಾನೋದಯ ಏನಾದರೂ ಅವರಿಗೆ ಲಭಿಸಿದೆ ಎಂದರೆ ಅಂತಹ ಮಾನ್ಯ ವ್ಯಕ್ತಿಯು ಅಲ್ಲಾಹನ ನಾಮದಲ್ಲಿ ನಮ್ಮಿಂದ ದಾಸತ್ವ ಮತ್ತು ಅನುಸರಣೆಯ ಪ್ರತಿಜ್ಞೆಯನ್ನು ಪಡೆದುಕೊಳ್ಳಲಿ ಹಾಗೂ ಬಳಿ ಇರುವ ಆಧ್ಯಾತ್ಮಿಕ ಸಂಪತ್ತು, ಪವಿತ್ರ ಖುರ್‌ಆನಿನ ಜ್ಞಾನ, ಹಾಗೂ ಸ್ವರ್ಗೀಯ ಅನುಗ್ರಹಗಳನ್ನು ನಮಗೂ ನೀಡಲಿ. ಹೆಚ್ಚಿನ ಪ್ರಯಾಸವೇನೂ ಬೇಕಾಗಿಲ್ಲ, ನಮ್ಮ ಮುಲ್‌ಹಿಂ (ದಿವ್ಯ ಬೋಧನೆಗಳು ಲಭಿಸುವ) ಸ್ನೇಹಿತ, ಯಾವುದಾದರೂ ಒಂದು ಸಭೆಯಲ್ಲಿ ಪವಿತ್ರ ಖುರ್‌ಆನಿನ ಕೇವಲ ಸೂರಃ ಇಖ್‌ಲಾಸಿನ ತತ್ವ ರಹಸ್ಯವನ್ನು ದಿವ್ಯ ಜ್ಞಾನವನ್ನು ವಿವರಿಸಲಿ. ಅದಕ್ಕಿಂತಲೂ ಸಾವಿರ ಪಟ್ಟು ಮಹತ್ವಪೂರ್ಣವಾದ ವ್ಯಾಖ್ಯಾನವನ್ನು ನೀಡಲಿ ನಮ್ಮಿಂದ ಸಾಧ್ಯವಾಗದ ಪಕ್ಷದಲ್ಲಿ ನಾವು ಅವರ ಅನುಸಾರಿಯಾಗಲು ಸಿದ್ಧ. (ಝರೂರತುಲ್ ಇಮಾಮ್, ರೂಹಾನಿ ಖಝಾಯೀನ್ ಸಂಪುಟ–13, ಪುಟ–498)

ಅವರು(ಅ) ಹೀಗೆ ನುಡಿದರು:

ನಾನು ಸತ್ಯವಾಗಿ ಹೇಳುವುದೇನಂದರೆ ಪಂಡಿತವರೇಣ್ಯರಾದ ನಮ್ಮ ಅಬ್ದಿಲ್ ಕರೀಮ್ ಸಾಹೇಬರು ಉಪದೇಶ ಪ್ರವಚನ ನೀಡುವಾಗ ಯಾವ ರೀತಿ ಪವಿತ್ರ ಖುರ್‌ಆನಿನ ದಿವ್ಯಜ್ಞಾನ ಮತ್ತು ತತ್ವಸಾರಗಳನ್ನು ವಿವರಿಸುವರೋ ಅದರ ಸಾವಿರದಲ್ಲಿ ಒಂದಂಶದಷ್ಟಾದರೂ ನಮ್ಮ ಈ ಮಾನ್ಯ ಸ್ನೇಹಿತರ ಬಾಯಿಯಿಂದ ಹೊರಬೀಳುವುದೆಂದು ನಾನು ಭಾವಿಸುವುದಿಲ್ಲ. (ಝರೂರತುಲ್ ಇಮಾಮ್, ರೂಹಾನಿ ಖಝಾಯೀನ್ ಸಂಪುಟ–13, ಪುಟ–498)

ಅವರು ಹೀಗೆ ನುಡಿಯುತ್ತಾರೆ:

ನನ್ನ ಕೈಯಲ್ಲಿ ಬೈಅತ್ ಮಾಡಿರುವ ದೇವದಾಸರ ಪೈಕಿ ಮಹಾ ಪಂಡಿತರಾದ ಓರ್ವ ಮಹೋನ್ನತ ವ್ಯಕ್ತಿ ನಮ್ಮ ಜಮಾಅತ್ತಿನಲ್ಲಿದ್ದಾರೆ. ಹಕೀಂ ಹಾಫಿಝ್ ಹಾಜಿ ಹರ್‌ಮೈನ್ ನೂರುದ್ದೀನ್ ಸಾಹೇಬ್. ಅವರು ಲೋಕದಲ್ಲಿರುವ ಹೆಚ್ಚು ಕಮ್ಮಿ ಎಲ್ಲಾ ತಫ್‌ಸೀರ್‌ಗಳನ್ನೂ ಹೊಂದಿದವರಾಗಿದ್ದಾರೆ. ಅದೇ ರೀತಿ ಅವರ ಹೃದಯದಲ್ಲಿ ಸಾವಿರಾರು ಖುರ್‌ಆನಿಕ ತತ್ವಜ್ಞಾನದ ಭಂಡಾರವಿದೆ. ನಿಜವಾಗಿಯೂ ನಿಮಗೆ ಬೈಅತ್ ಪಡೆಯುವ ಪದವಿ ಲಭಿಸಿದೆ ಎಂದಾದರೆ, ಪವಿತ್ರ ಖುರ್‌ಆನಿನ ಒಂದು ಅಧ್ಯಾಯವನ್ನು ಸತ್ಯ ಜ್ಞಾನ ಪೂರ್ಣವಾದ ಆಧ್ಯಾತ್ಮಿಕ ವಿವರಣೆಯೊಂದಿಗೆ ಅವರಿಗೆ ಹೇಳಿಕೊಡಿರಿ! ಇತರ ಆಧ್ಯಾತ್ಮಿಕ ದರ್ಶಿಗಳನ್ನೆಲ್ಲ ಬಿಟ್ಟು ನನ್ನ ಕೈಯಲ್ಲಿಯೇ ಬೈಅತ್ ಮಾಡಲು ಅವರು ಹುಚ್ಚರೇನು ಅಲ್ಲವಲ್ಲ. (ಝರೂರತುಲ್ ಇಮಾಮ್, ರೂಹಾನಿ ಖಝಾಯೀನ್ ಸಂಪುಟ–13, ಪುಟ–500)

ಅವರು ಈ ರೀತಿ ನುಡಿಯುತ್ತಾರೆ:

ಅವರು ಮೊದಲು ತಮ್ಮ ಇಲ್‌ಹಾಮಿನ ಸಾಮರ್ಥ್ಯದಿಂದ ಮೌಲವಿ ಸಾಹೇಬರಿಗೆ ತನ್ನ ಖುರ್‌ಆನ್ ಜ್ಞಾನದ ನಮೂನಯನ್ನು ಒಮ್ಮೆ ವಿವರಿಸಿಕೊಡಲಿ. ಹಾಗೆ, ತನ್ನ ಅದ್ಭುತವಾದ ದಿವ್ಯ ಪ್ರಕಾಶದ ಮೂಲಕ ನೂರುದ್ದೀನ್‌ರಂತಹ ಖುರ್‌ಆನ್ ಭಕ್ತರಿಂದ ಬೈಅತ್ ಪಡೆದುಕೊಳ್ಳಲಿ. ಹಾಗೆ ಮಾಡಿದಲ್ಲಿ ನಾನು ಮತ್ತು ನನ್ನ ಜಮಾತ್ತಿನ ಎಲ್ಲರೂ ನಿಮ್ಮಲ್ಲಿ ಅರ್ಪಿತರಾಗುವೆವು. (ಝರೂರತುಲ್ ಇಮಾಮ್, ರೂಹಾನಿ ಖಝಾಯೀನ್ ಸಂಪುಟ–13, ಪುಟ–501)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್:

"ಪ್ರಕಾಶಮಾನವಾದ ಕುರುಹು ಬಾಬು ಇಲಾಹಿ ಬಖ್ಷ್ ಅಕೌಂಟೆಂಟ್ ಪಿನ್‌ಶನರ್ ಲಾಹೋರ್ ಸುಳ್ಳು ಮೂಸಾ ಮರಣ ಹೊಂದಿದನು" ಎಂಬ ಶೀರ್ಷಿಕೆ ಅಡಿಯಲ್ಲಿ ಸಾವಿನ ಸುದ್ದಿಯನ್ನು ನೀಡುತ್ತಾ ನುಡಿಯುತ್ತಾರೆ:

ವೀಕ್ಷಕರೇ ನಿಮಗೆಲ್ಲರಿಗೂ ಗೊತ್ತಿರಬಹುದು ಇಲಾಹಿ ಬಖ್‌ಷ್ ಹೆಸರಿನ ವ್ಯಕ್ತಿಯು ಲಾಹೋರಿನಲ್ಲಿ ಅಕೌಂಟೆಂಟ್ ಆಗಿದ್ದನು ಆತನು ಆ ಕಾಲದಲ್ಲಿ ಅಂದರೆ ನಾನು ಅಲ್ಲಾಹನಿಂದ ದೈವವಾಣಿಯನ್ನು ಪಡೆದು ನಾನು ಮಸೀಹ್ ಮೌಊದ್ ಆಗಿರುವೆನು ಎಂದು ಪ್ರಕಟೆಸಿದಾಗ ಅವನು ತನ್ನ ಕಡೆಯಿಂದ ನಾನು ಮೂಸಾ ಆಗಿರುವೆನು ಎಂದು ದಾವೆ ಮಾಡಿದನು. ಈ ಮಾತಿನ ವಿವರಣೆ ಏನೆಂದರೆ ಮೇಲೆ ನಮೂದಿಸಿದ ಇಲಾಹಿ ಬಖ್‌ಷ್ ಎಂಬುವನು ನನ್ನೊಂದಿಗೆ ಸಂಬಂಧವನ್ನು ಬಯಸುತ್ತಿದ್ದನು ಮತ್ತು ಅವನು ಆಗಾಗ ಖಾದಿಯಾನಿಗೆ ಬರುತ್ತಿದ್ದನು ಮತ್ತು ನನಗೆ ಅಲ್ಲಾಹನಿಂದ ಒಬ್ಬ ಸತ್ಯ ದೈವವಾಣಿ ಪಡೆಯುವವನು ಎಂಬುದಾಗಿ ತಿಳಿಯುತ್ತಿದ್ದನು ಹಾಗೂ ಸೇವೆ ಮಾಡುತ್ತಿದ್ದನು. ಒಮ್ಮೆ ಆಕಸ್ಮಿಕವಾಗಿ ಮುಂಜಾನೆ ನಮಾಝಿನ ನಂತರ ಅಮೃತ್ಸರದಲ್ಲಿ ನಾನು ಮಲಗಿದ್ದೆನು ನನ್ನ ಮುಖದ ಮೇಲೆ ಕಂಬಳಿ ಇತ್ತು. ಆಗ ಓರ್ವ ವ್ಯಕ್ತಿ ಬಂದು ನನ್ನ ಕಾಲುಗಳನ್ನು ಒತ್ತಲು ಆರಂಭಿಸಿದನು. ಆಗ ನಾನು ಕಂಬಳಿಯನ್ನು ಎತ್ತಿ ನೋಡಿದಾಗ ಆತನು ಇಲಾಹಿ ಬಖ್‌ಷ್ ಆಗಿದ್ದನು. ಈ ಬರವಣಿಗೆಯ ಮುಖ್ಯ ಉದ್ದೇಶವೇನೆಂದರೆ ಅತನ ನಡವಳಿಕೆಯು ಯಾವ ಮಟ್ಟಿಗೆ ಇತ್ತೆಂದರೆ ಆತನು ಯಾವುದೇ ಮಾನವೀಯ ಸೇವೆಗಳಿಂದ ದೂರ ಉಳಿಯುತ್ತಿರಲಿಲ್ಲ ಮತ್ತು ಅತಿ ವಿನಮ್ರತೆಯಿಂದ ತನ್ನನ್ನು ಸಾಧಾರಣ ಸೇವಕರಂತೆ ತಿಳಿಯುತ್ತಿದ್ದನು. ಧನ ಸೇವೆಯಲ್ಲೂ ಸಹ ತನ್ನನ್ನು ಕೊನೆಯವರೆಗೂ ಕಡೆಗಣಿಸುತ್ತಿರಲಿಲ್ಲ. ಎಲ್ಲಿಯವರೆಗೂ ಅಲ್ಲಾಹನು ಬಯಸಿದನೊ ಅಲ್ಲಿಯವರೆಗೂ ಆತನ ಪ್ರಾಮಾಣಿಕ ಸ್ಥಿತಿಯಲ್ಲಿದ್ದನು. ಆತನು ತನ್ನ ನಡತೆಯಲ್ಲಿ ಹೆಚ್ಚು ಉನ್ನತಿಯನ್ನು ಗಳಿಸುತ್ತಾನೆ ಎಂಬ ಭರವಸೆಯು ನನಗೆ ಇತ್ತು ಮತ್ತು ಯಾವಾಗ ನಾನು ಖಾದಿಯಾನಿನಿಂದ ಯವುದಾದರು ಕಾರ್ಯಕ್ರಮಗೋಸ್ಕರ ಲುಧಿಯಾನ ಅಥವಾ ಅಂಬಾಲ ಅಥವಾ ಇತರೆ ಯಾವುದೇ ಪ್ರದೇಶಕ್ಕೆ ಹೋದಾಗ ಅವನು ಸಹ ಅಲ್ಲಿಗೆ ಬರುತ್ತಿದ್ದನು. ಬಹಳಷ್ಟು ಸಲ ಆತನ ಮಿತ್ರ ಮುನ್‌ಶಿ ಅಬ್ದುಲ್ ಹಖ್ ಅಕೌಂಟೆಂಟ್ ಕೂಡ ಅವನ ಜೋತೆ ಇರುತ್ತಿದ್ದನು ಮತ್ತು ಆತನಿಗೆ ಕೆಲ ಸಮಯದ ನಂತರ ನನಗೂ ದೈವವಾಣಿ ಉಂಟಾಗುತ್ತದೆ ಎಂಬ ಭ್ರಮೆಯು ಹುಟ್ಟಿತು ವಿಧಿಯು ಆತನಲ್ಲಿ ಬಿತ್ತಿದ ವಿಷಕಾರಿ ಬೀಜವು ಇದೇ ಆಗಿತ್ತು. ತದನಂತರ ಆತನ

ಪ್ರಾಮಾಣಿಕ ಸ್ಥಿತಿಯಲ್ಲಿ ಬದಲಾವಣೆ ಆರಂಭಗೊಂಡಿತು. ಯಾವಾ ಕಾಲದಲ್ಲಿ ಅಲ್ಲಾಹನು ನನಗೆ ಜನರಿಂದ ಬೈಅತ್ ತೆಗೆದುಕೊಳ್ಳಲು ನೇಮಿಸಿದಾಗ ಕನಿಷ್ಟ ನಲವತ್ತು ಜನ ಅಥವಾ ಅದಕ್ಕಿಂತ ಹೆಚ್ಚು ಜನ ಬೈಅತ್‌ನಲ್ಲಿ ಪಾಲ್ಗೊಂಡರು. ಮತ್ತು ಸಾಮಾನ್ಯವಾಗಿ ಅಲ್ಲಾಹನ ಆಜ್ಞೆಯಂತೆ ಪ್ರತಿಯೊಬ್ಬರಿಗೂ ಇದರ ಬಗ್ಗೆ ತಿಳಿಸಿದಾಗ ಇಲಾಹಿ ಬಖ್‌ಷ್‌ನ ಮನಸ್ಸು ಕೆಟ್ಟಿತು ಮತ್ತು ಕೆಲದಿನಗಳ ನಂತರ ತನ್ನ ಗೆಳೆಯನಾದ ಮುನ್‌ಶಿ ಅಬ್ದುಲ್ ಹಖ್‌ನೊಂದಿಗೆ ನನ್ನ ಬಳಿ ಬಂದನು. ಆತನ ಬರುವ ಉದ್ದೇಶವು ತನ್ನ ದೈವವಾಣಿಯನ್ನು ತಿಳಿಸುವುದಾಗಿತ್ತು. ಮತ್ತು ಈಗ ಆತನ ನಡವಳಿಕೆ ಎಷ್ಟರ ಮಟ್ಟಿಗೆ ಬದಲಾಗಿತ್ತೆಂದರೆ ಆತನು ಬೇರೆ ಯಾರೋ ಆಗಿದ್ದನು ಇಲಾಹಿ ಬಖ್‌ಷ್‌ನಾಗಿರಲಿಲ್ಲ. ಆತನು ಧೈರ್ಯದಿಂದ ತನ್ನ ದೈವವಾಣಿಗಳನ್ನು ತಿಳಿಸಲು ಆರಂಭಿಸಿದನು ಮತ್ತು ಅದು ಆತನ ಜೇಬಿನಲ್ಲಿದ್ದ ಒಂದು ಸಣ್ಣ ಕೈಪಿಡಿಯಲ್ಲಿ ಬರೆಯಲಾಗಿತ್ತು. ಅದಲ್ಲದೆ ಆತನು ಹೀಗೆ ತಿಳಿಸುತ್ತಾ ನನ್ನ ಕನಸ್ಸಿನಲ್ಲಿ ತಾವು ಅಂದರೆ ಹಝ್‌ರತ್ ಮಸೀಹ್ ಮೌಊದ್(ಅ) ಬಂದು ನನ್ನ ಬೈಅತ್ ಮಾಡಿರೀ ಎಂದು ಹೇಳುತ್ತಾರೆ ಮತ್ತು ಅದಕ್ಕೆ ನಾನು ಹೀಗೆ ಉತ್ತರಿಸಿದೆ ನಾನು ನಿಮ್ಮಲ್ಲಿ ಬೈಅತ್ ಮಾಡುವುದಿಲ್ಲ ಬದಲಿಗೆ ನೀವೇ ನನ್ನ ಬೈಅತ್ ಮಾಡಿರಿ ಎಂದನು. ಈ ಕನಸ್ಸಿನ ಪರಿಣಾಮದಿಂದ ಆತನ ತಲೆಯಿಂದ ಕಾಲಿನವರೆಗು ಅಹಂಕಾರ ಆವರಿಸಿತ್ತು. ತಾನು ಒಬ್ಬ ಗೌರವಾನ್ವಿತ ವ್ಯಕ್ತಿ ಎಂದು ನಂಬಿ ತನಗೆ ಬೈಅತ್ ಮಾಡುವ ಅವಶ್ಯಕವಿಲ್ಲ ಬದಲಿಗೆ ಅವರು ನನ್ನ ಬೈಅತ್ ಮಾಡಬೇಕಾಗಿದೆ ಎಂದು. ಆದರೆ ಇದು ಶೈತಾನಿನ ಕುತಂತ್ರವಾಗಿತ್ತು ಆತನ ದಾರಿತಪ್ಪಲು ಕಾರಣವಾಯಿತು ವಿಷಯ ವೇನಂದರೆ ಓರ್ವ ವ್ಯಕ್ತಿಯ ಮನಸ್ಸಿನಲ್ಲಿ ಅಹಂಕಾರ ಮತ್ತು ನಿರಾಕರಣೆಯು ರಹಸ್ಯವಾಗಿ ಉಳಿಯುತ್ತದೆಯೊ ಅದೇ ನಿರಾಕರಣೆಯು ತನ್ನ ಅಂತರಾತ್ಮದ ಮಾತಿನ ರೂಪದಲ್ಲಿ ಕನಸ್ಸಿನಲ್ಲಿ ಬರುತ್ತದೆ. ಓರ್ವ ಮುಗ್ಧ ಮನುಷ್ಯನು ಅದನ್ನು ದೇವರ ಕಡೆಯಿಂದ ಎಂದು ತಿಳಿಯುತ್ತಾನೆ. ಆದರೆ ಆ ನಿರಾಕರಣೆಯು ಕೇವಲ ಆತನ ಗೌಪ್ಯ ಯೋಚನೆಗಳಿಂದ ಹುಟ್ಟುತ್ತದೆ ದೇವನೊಂದಿಗೆ ಯಾವುದೇ ಸಂಬಂಧವಿರುವುದಿಲ್ಲ. ಹೀಗೆ ಅನೇಕ ಅನಕ್ಷರಸ್ತರು ಅಂತರಾತ್ಮದ ಮಾತುಗಳಿಂದ ವಿನಾಶಗೊಳ್ಳುತ್ತಾರೆ. ಇಲಾಹಿ ಬಖ್‌ಷ್ ಉದ್ದೇಶ ಪೂರ್ವವಾಗಿ ಹೆಚ್ಚು ಅಭಿರುಚಿ ಹಾಗೂ ಧೈರ್ಯದಿಂದ ನನಗೆ ಕನಸ್ಸನ್ನು ತಿಳಿಸಿದ ನನ್ನಲ್ಲಿ ಆತನ ಮುಗ್ದತೆಯ ಬಗ್ಗೆ ದುಃಖವಾಗುತ್ತಿತ್ತು ಏಕೆಂದರೆ ಏನೆಲ್ಲ ಆತನು ತಿಳಿಸುತ್ತಿದ್ದಾನೋ ಅದು ಕೇವಲ ಅವನ ಅಂತರಾಳದ ಮಾತುಗಳಾಗಿದ್ದವು. ಆದರೆ ನಾನು ಆ ಮನಸ್ಸಿನಲ್ಲಿ ಅಹಂಕಾರವನ್ನು ಕಂಡೆನು ಮತ್ತು ಅಹಂಭಾವದ ಲಕ್ಷಣವನ್ನು ನೋಡಿದೆನು ಮತ್ತು ಆತನ ಮಾತಿನಲ್ಲಿ ಆತುರತೆಯನ್ನು ಕಂಡೆ ಹೀಗಾಗಿ ಆತನಿಗೆ ಉಪದೇಶಿಸುವುದರಿಂದ ಪ್ರಯೋಜನವಿಲ್ಲ ಎಂದು ತಿಳಿದೆನು. ಇದು ಒಂದು ವಿಷಾಧನೀಯವಾದ ವಿಚಾರವಾಗಿದೆ ಏಕೆಂದರೆ ಹಲವಾರು ಜನರು ತೂಕಡಿಕೆಯ ಸ್ಥಿತಿಯಲ್ಲಿ ಅವರೇ ನಾಲಿಗೆಯಿಂದ ಹೊರಡುವ ಮಾತುಗಳನ್ನು ಅವರು ದೇವರ ವಾಕ್ಯಗಳೆಂದು ಭಾವಿಸುತ್ತಾರೆ ಹೀಗೆ **ಲಾತಖ್‌ಫು ಮಾ ಲೈಸಲಕ ಬಿಹಿ ಇಲ್‌ಮುನ್** ಎಂಬ ಪವಿತ್ರ ವಚನದೆಡೆಯಲ್ಲಿ ತಮಗೋಸ್ಕರ ದಾಖಲಿಸುತ್ತಾರೆ ಮತ್ತು ನೆನಪಿಡಬೇಕಾದುದೆನೆಂದರೆ ಯಾವುದೇ ಮಾತು ನಾಲಿಗೆಯ ಮೇಲೆ ಜಾರಿಯಾಗಲಿ ಅದು ಅಲ್ಲಾಹ್ ಮತ್ತು ಪ್ರವಾದಿ(ಸ) ಹೇಳಿಕೆಯ ವಿರುದ್ಧವಾಗಿಲ್ಲವಾದರೂ ಸಹ ಅಲ್ಲಾಹನ ಕಾರ್ಯ ಸಾಕ್ಷ್ಯ ನೀಡುವವರೆಗೂ ದೇವರ ವಾಕ್ಯ ಎನಿಸಿಕೊಳ್ಳುವುದಿಲ್ಲ ಏಕೆಂದರೆ ಶಾಪಗ್ರಸ್ತನಾದ ಶೈತಾನನು ಮನುಷ್ಯನ ಶತ್ರುವಾಗಿದ್ದಾನೆ ಯಾವ ರೀತಿ ಅವನು ಮನುಷ್ಯರನ್ನು ವಿನಾಶಗೊಳಿಸಲು ಪ್ರಯತ್ನಿಸುತ್ತಾನೋ ಅದೇ ರೀತಿ ದಾರಿ ತಪ್ಪಿದವನಾದ ಶೈತಾನನು ಮತ್ತೊಂದು ರೀತಿಯಲ್ಲಿ ತನ್ನ ಮಾತುಗಳನ್ನು ಮನುಷ್ಯನ ಹೃದಯದಲ್ಲಿ ಇರಿಸುತ್ತಾನೆ ಮತ್ತು ಇದು ದೇವರ ವಾಕ್ಯವೆಂದು ನಂಬಿಕೆ ಹುಟ್ಟಿಸುತ್ತಾನೆ. ಇಂತಹ ವ್ಯಕ್ತಿಯ ಮುಕ್ತಾಯವು ಕೊನೇಗೆ ವಿನಾಶವಾಗಿರುತ್ತದೆ.

ಹೀಗೆ ಯಾರ ಮೇಲೆ ದೈವವಾಣಿಯು ಅವತೀರ್ಣಗೊಳ್ಳುತದೆಯೋ ಅವನಲ್ಲಿ ಈ ಮೂರು ಲಕ್ಷಣಗಳು ಕಾಣಿಸಿಕೊಳ್ಳುವುದಿಲ್ಲವೋ ಅದನ್ನು ದೈವವಾಣಿ ಎಂದು ಹೇಳುವುದು ತನ್ನನ್ನು ವಿನಾಶಕ್ಕೆ ತಳ್ಳುವಂತಾಗಿದೆ.

**ಒಂದು:** ಆ ವಾಣಿಯು ಪವಿತ್ರ ಖುರ್‌ಆನಿನ ವಿರುದ್ಧ ಮತ್ತು ನಿರ್ಲಕ್ಷ್ಯವಾಗಿರಬಾರದು ಆದರೆ ಈ ಲಕ್ಷಣವು ಮುಂದೆ ಬರೆಯಲಾಗುವ ಮೂರನೇ ಲಕ್ಷಣದೊಂದಿಗೆ ಇರದಿದ್ದರೆ ಅದು ದೋಷಪೂರಿತವಾಗಿದೆ ಎಂದರ್ಥ. ಒಂದು ವೇಳೆ, ಮೂರನೇ ಲಕ್ಷಣವು ಇಲ್ಲದಿದ್ದರೆ ಕೇವಲ ಈ ಲಕ್ಷಣದಿಂದ ಏನೂ ಸಾಬೀತಾಗುವುದಿಲ್ಲ.

**ಎರಡು:** ಆ ವಾಣಿಯು ಪರಿಪೂರ್ಣ ಆತ್ಮಶುದ್ಧಿಗಳಿಸಿದ ವ್ಯಕ್ತಿಗೆ ಅವತೀರ್ಣಗೊಳ್ಳಬೇಕು ಆತನು ಎಂತಹ ಜಮಾಅತ್ತಿನಲ್ಲಿ ಪ್ರವೇಶಿಸಿರಬೇಕೆಂದರೆ ಅವರು ತಮ್ಮ ಎಲ್ಲಾ ಇಂದ್ರಿಯಾಸಕ್ತಿಗಳನ್ನು ಪರಿಪೂರ್ಣವಾಗಿ ತ್ಯಜಿಸಿರುವಂತಾಗಿರಬೇಕು ಮತ್ತು ಅವರ ಆತ್ಮಗಳ ಮೇಲೆ ಎಂತಹ ಮೃತ್ಯು ಆವರಿಸಿರ ಬೇಕೆಂದರೆ ಅದರ ಮೂಲಕ ದೇವರಿಂದ ಅವರು ಸಾಮಿಪ್ಯ ಹಾಗೂ ಶೈತಾನನಿಂದ ದೂರ ಉಳಿಯುವವರಾಗಿರಬೇಕು. ಏಕೆಂದರೆ ಯಾವ ವ್ಯಕ್ತಿ ಯಾರ ಹತ್ತಿರವಿರುತ್ತಾನೊ ಆತನ ಶಬ್ಧವನ್ನು ಕೇಳುತ್ತಾನೆ ಹೀಗೆ ಯಾರು ಶೈತಾನನ ಹತ್ತಿರ ಇರುತ್ತಾನೋ ಆತನು ಶೈತಾನನ ಧ್ವನಿಯನ್ನು ಕೇಳುತ್ತಾನೆ ಮತ್ತು ಯಾರು ಅಲ್ಲಾಹನ ಹತ್ತಿರ ಇರುತ್ತಾನೋ ಆತನು ಅಲ್ಲಾಹನ ಧ್ವನಿಯನ್ನು ಕೇಳುತ್ತಾನೆ. ಮತ್ತು ಮನುಷ್ಯನ ಸರ್ವಪ್ರಯತ್ನವು ಆತ್ಮಶುದ್ಧಿ ಆಗಿದೆ. ಅದರ ಮೇಲೆ ಎಲ್ಲಾ ವರ್ತನೆಗಳು ಕೊನೆಗೊಳ್ಳುತ್ತದೆ ಮತ್ತು ಬೇರೆ ಪದಗಳಲ್ಲಿ ಇದು ಒಂದು ಮೃತ್ಯುವಾಗಿದೆ. ಅದು ಎಲ್ಲಾ ಆಂತರಿಕ ಕಲ್ಮಶಗಳನ್ನು ಭಸ್ಮಗೊಳಿಸುತ್ತದೆ ಹಾಗೂ ಯಾವಾಗ ಮನುಷ್ಯನು ತನ್ನ ವರ್ತನೆಗಳನ್ನು ಕೊನೆಗೊಳಿಸುತ್ತಾನೋ ದೇವನ ಅಧಿಕಾರವು ತಲೆದೊರುತ್ತದೆ. ಆಗ ಅಲ್ಲಾಹನು ತನ್ನ ದಾಸನ ಇಂದ್ರಿಯಾಸಕ್ತಿಗಳನ್ನು ವಿನಾಶದ ಮಟ್ಟಕ್ಕೆ ತಲುಪಿಸುತ್ತಾನೆ. ಅನಂತರ ಅವನು ತನ್ನ ದಾಸನಿಗೆ ದಿವ್ಯಜ್ಞಾನ ಮತ್ತು ಪ್ರೀತಿಯ ಜೀವನದೊಂದಿಗೆ ಪುನಃ ಜೀವಂತಗೊಳಿಸುತ್ತಾನೆ ಮತ್ತು ದೊಡ್ಡ ಕುರುಹುಗಳೊಂದಿಗೆ ಆಧ್ಯಾತ್ಮಿಕ, ವೈಯಕ್ತಿಕ ಪ್ರೀತಿಯ ಆಕರ್ಷಣೆಯನ್ನು ಅವನ ಮನಸ್ಸಿನಲ್ಲಿ ತುಂಬುತ್ತಾನೆ. ಅದನ್ನು ಲೋಕವು ತಿಳಿಯುವುದಿಲ್ಲ. ಈ ಪರಿಸ್ಥಿತಿಯಲ್ಲಿ ಒಂದು ಹೊಸ ಜೀವನ ಸಿಕ್ಕಿದೆ ಎಂದು ಹೇಳಲಾಗುತ್ತದೆ ಅದರ ನಂತರ ಸಾವಿಲ್ಲ.

ಹೀಗೆ ಈ ಹೊಸ ಜೀವನವು ಪರಿಪೂರ್ಣ ದಿವ್ಯಜ್ಞಾನ ಹಾಗೂ ಪರಿಪೂರ್ಣ ಪ್ರೀತಿಯಿಂದ ದೊರೆಯುತ್ತದೆ ಮತ್ತು ಪರಿಪೂರ್ಣ ದಿವ್ಯಜ್ಞಾನವು ಅಲ್ಲಾಹನ ಅದ್ಭುತವಾದ ಕುರುಹುಗಳಿಂದ ದೊರೆಯುತ್ತದೆ ಮತ್ತು ಯಾವಾಗ ಮನುಷ್ಯನು ಈ ಮಟ್ಟಕ್ಕೆ ತಲುಪುತ್ತಾನೋ ಅಗ ಆತನಿಗೆ ದೇವರ ದರ್ಶನದ ಸೌಭಾಗ್ಯ ಪ್ರಾಪ್ತವಾಗುವುದು ಆದರೆ ಈ ಲಕ್ಷಣವೂ ಕೂಡ ಮೂರನೇ ದರ್ಜೆಯ ಲಕ್ಷಣವಿಲ್ಲದೆ ಸ್ವೀಕರಿಸಲು ಅನರ್ಹವಾಗಿದೆ. ಏಕೆಂದರೆ ಪರಿಪೂರ್ಣ ಶುದ್ಧಿಯು ಒಂದು ಗುಪ್ತ ಕಾರ್ಯವಾಗಿದೆ. ಆದ್ದರಿಂದ ಪ್ರತಿಯೊಬ್ಬ ಸುಳ್ಳುಗಾರನು ಇಂತಹ ದಾವೆ ಮಾಡಬಹುದು.

**ಮೂರು:** ಸತ್ಯಾವಂತ ಮುಲ್‌ಹಿಮ್‌ನ (ದಿವ್ಯವಾಣಿ ಪಡೆಯುವವನು) ಮೂರನೇಯ ಲಕ್ಷಣವೇನೆಂದರೆ ಆತನು ಯಾವ ವಾಣಿಯನ್ನು ದೇವರಿಗೆ ಸಂಬಂಧಿಸುತ್ತಾನೋ. ಅದು ದೇವರ ನಿರಂತರ ಕಾರ್ಯಗಳು ಇದರ ಬಗ್ಗೆ ಸಾಕ್ಷ್ಯವನ್ನು ನೀಡಬೇಕು ಅಂದರೆ ಹೆಚ್ಚು ಕುರುಹುಗಳು ಅವನ ಬೆಂಬಲ ರೂಪದಲ್ಲಿ ಪ್ರಕಟಗೊಳ್ಳಬೇಕು. ಸಾಕಷ್ಟು ಕುರುಹುಗಳು ಇದ್ದರೂ ಸಹ ಇದು ದೇವರ ವಾಣಿಯಲ್ಲ ಎಂದು ತಡೆಗಟ್ಟಿದೆ ಎಂದು ತಿಳಿಯಬೇಕು. ಮತ್ತು ಈ ಲಕ್ಷಣವು ಎಲ್ಲಾ ಲಕ್ಷಣಕ್ಕಿಂತ ಉತ್ತಮವಾಗಿದೆ ಏಕೆಂದರೆ ಯಾವುದಾದರು ಒಂದು ವಾಕ್ಯವು ಓರ್ವ ವ್ಯಕ್ತಿಯ ನಾಲಿಗೆಯ ಮೇಲೆ ಜಾರಿಯಾಗಬಹುದು. ಅಥವಾ ಯಾರಾದರು ಸ್ಫೂರ್ತಿದಾಯಕ ದೈವವಾಣಿಯನ್ನು ನೀಡಬಹುದು ಅದು ತನ್ನ ಅರ್ಥಗಳ ಪ್ರಕಾರ ಪವಿತ್ರ ಖುರ್‌ಆನಿನ ಬೋಧನೆಗಳ ಪ್ರಕಾರ ಇರಬಹುದು. ಆದರೆ ಅದು ಓರ್ವ ಸುಳ್ಳುಗಾರನ ಸುಳ್ಳಾಗಿರಬಹುದು ಏಕೆಂದರೆ ಒಬ್ಬ ಬುದ್ಧಿವಂತನು ಮುಸಲ್ಮಾನನಾಗಿದ್ದರೂ ಸಹ ಆತನು ಸುಳ್ಳುಗಾರನಾಗಬಹುದು ಅವನು ಪವಿತ್ರ ಖುರ್‌ಅನಿನ ವಿರುದ್ಧ ಸುಳ್ಳು ದಿವ್ಯವಾಣಿಯ ವಾಕ್ಯವನ್ನು ನೀಡಬಾರದೆಂದು ಯೋಚಿಸುತ್ತಾನೆ ಒಂದು ವೇಳೆ ಅವನು ಪವಿತ್ರ ಖುರ್‌ಆನಿನ ಬೋಧನೆಗಳ ವಿರುದ್ಧ ಹೇಳಿದರೆ ಸುಕ ಸುಮ್ಮನೆ ಜನರ ವಿರೋಧಕ್ಕೆ ಗುರುಯಾಗುವನು ಎಂದು ತಿಳಿದಿರುತ್ತಾನೆ. ಮತ್ತು ಇದರ ಜೊತೆಗೆ ಆ ವಾಕ್ಯವು ನಾಲಿಗೆಯ ಮೇಲೆ ಜಾರಿಯಾಗಬಹುದು ಹೇಗೆ ಬಹಳಷ್ಟು ಮಕ್ಕಳು ಹಗಲಿನಲ್ಲಿ ಪುಸ್ತಕಗಳನ್ನು ಓದುತ್ತಾರೋ ರಾತ್ರಿಯಲ್ಲಿಯೂ ಕೆಲವೊಮ್ಮೆ ಅದೇ ವಾಕ್ಯಗಳು ಅವರ ನಾಲಿಗೆಯ ಮೇಲೆ ಜಾರಿಯಾಗುತ್ತದೆ. ಆದ್ದರಿಂದ ದಿವ್ಯವಾಣಿ ಎಂದು ಪ್ರಸ್ತುತ ಪಡಿಸುವಂತಹ ವಾಕ್ಯವು ಪವಿತ್ರ ಖುರ್‌ಆನಿನ ಅನುಸಾರವಾಗಿ ನೀಡಿದರೂ ಈ ವಾಕ್ಯವನ್ನು ದಿವ್ಯವಾಣಿ ಎಂಬುದಕ್ಕೆ ಖಂಡಿತವಾಗಿಯು ಸಾಕ್ಷ್ಯಧಾರವಲ್ಲ. ಒಂದು ವಾಕ್ಯವು ತನ್ನ ಅರ್ಥದಲ್ಲಿ ದೇವರ ವಾಕ್ಯದ ವಿರುದ್ಧವು ಇಲ್ಲದಿದ್ದರು ಅದು ಓರ್ವ ಸುಳ್ಳುಗಾರನ ಸುಳ್ಳು ಆಗಿರಲು ಸಾಧ್ಯವಿಲ್ಲವೇ? ಏಕೆಂದರೆ ಒಬ್ಬ ಸುಳ್ಳುಗಾರನು ಇಂತಹ ವಾಜ್ಯಗಳನ್ನು ಬಹಳ ಸುಲಭವಾಗಿ ಇದನ್ನು ಸೃಷ್ಟಿಸುತ್ತಾನೆ. ಹೀಗೆ ಆತನು ಪವಿತ್ರ ಖುರ್‌ಆನಿನ ಬೋಧನೆಯ ಅನುಸಾರ ಒಂದು ವಾಕ್ಯವನ್ನು ನೀಡಿ ಇದು ದೇವರ ವಾಕ್ಯವಾಗಿದೆ ಇದು ನನ್ನ ಮೇಲೆ ಅವತೀರ್ಣಗೊಂಡಿದೆ ಎಂದು ಹೇಳುತ್ತಾನೆ ಅಥವಾ ಈ ವಾಕ್ಯವು ತನ್ನ ಕಡೆಯಿಂದ ಮಾತುಕತೆ ಆಗಿರಬಹುದು ಅಥವಾ ಶೈತಾನಿನ ಮಾತು ಆಗಿರಬಹುದು.

ಹೀಗೆ ಮತ್ತೊಂದು ಶರತ್ತು ಏನೆಂದರೆ ದಿವ್ಯವಾಣಿಯ ದಾವೆ ಮಾಡುವ ವ್ಯಕ್ತಿಯ ಆತ್ಮಶುದ್ಧನಾಗಿರುವುದು ತೃಪ್ತಿದಾಯಕವಲ್ಲ ಬದಲಿಗೆ ಒಂದು ರಹಸ್ಯದ ವಿಷಯವಾಗಿದೆ. ಬಹಳಷ್ಟು ಅಶುದ್ಧ ಸ್ವಭಾವದ ಜನರು ನಮ್ಮ ಆತ್ಮವು ಶುದ್ಧವಾಗಿದೆ ಎಂದು ದಾವೆ ಮಡಬಹುದು ಅದೇ ರೀತಿ ನಾವು ದೇವನೊಂದಿಗೆ ನಿಜವಾದ ಪ್ರೀತಿಯನ್ನು ಇರಿಸುತ್ತೇವೆ ಎಂದು ಹೇಳಬಹುದು. ಹೀಗೆ ಇದರಲ್ಲಿ ಕೂಡಲೇ ಸತ್ಯ ಮತ್ತು ಮಿಥ್ಯದ ನಿರ್ಧಾರ ಮಾಡಲು ಸರಳವಾದ ವಿಷಯವಲ್ಲ.

ಇದೇ ಕಾರಣದಿಂದಾಗಿ ಹಲವಾರು ಅಶುದ್ಧ ಆತ್ಮದ ಜನರು ಶುದ್ಧಾತ್ಮರಾದ ಗುರು ಹಿರಿಯರ ಮೇಲೆ ಕೆಟ್ಟ ಆರೋಪಗಳನ್ನು ಹೊರಿಸಿದ್ದಾರೆ. ಉದಾಹರಣೆಗೆ ಇಂದಿನ ಪಾದರಿಗಳು ನಮ್ಮ ಪ್ರವಾದಿ ರಸೂಲುಲ್ಲಾಹ್ ಸಲ್ಲಾಹು ಅಲೈಹಿವಸಲ್ಲಮರ ಮೇಲೆ ಅರೋಪವನ್ನು ಹೊರಿಸುತ್ತಾರೆ ಮತ್ತು (ನೂಝುಬಿಲ್ಲಾಹ್) ಹೇಳುತ್ತಾರೆ ಪ್ರವಾದಿ(ಸ) ಇಂದ್ರಿಯ ಇಚ್ಛೆಗಳನ್ನು ಅನುಸರಿಸುತ್ತಿದ್ದರು ಅಂದಹಾಗೆ ಅವರ ಸಾವಿರಾರು ಮಾಸಪತ್ರಿಕೆ ಮತ್ತು ದಿನಪತ್ರಿಕೆ ಹಾಗೂ ಪುಸ್ತಕಗಳಲ್ಲಿ ಇಂತಹ ಆರೋಪಗಳು ದೊರೆಯುತ್ತವೆ. ಇದೇ ರೀತಿ ಯಹೂದಿಯರು ಹಝ್ರತ್ ಈಸಾ ಅಲೈಹಿಸ್ಸಲಾಮ್ ಅವರ ಮೇಲೆ ಹಲವಾರು ರೀತಿಯ ಆರೋಪಗಳನ್ನು ಹೊರಿಸುತ್ತಾರೆ. ಹೀಗೆಯೇ ಕೆಲವು ಕಾಲ ಮುಂಚೆ ನಾನು ಒಂದು ಯಹೂದಿಯ ಪುಸ್ತಕವನ್ನು ನೋಡಿದೆ ಅದರಲ್ಲಿ ಕೇವಲ ಕೆಟ್ಟ ಆರೋಪವಿರಲಿಲ್ಲ ನಊಝುಬಿಲ್ಲಾಹ್ ಹಝ್ರತ್ ಈಸ ಮಸೀಹ್‌ರವರ ಹುಟ್ಟುವಿಕೆಯು ಅನೈತಿಕತೆಯಿಂದ ಆಗಿದೆ. ಅದಲ್ಲದೆ ಅವರ ನಡವಳಿಕೆಗಳ ಮೇಲೂ ಬಹಳ ಕೆಟ್ಟ ಆರೋಪಗಳನ್ನು ಹೊರಿಸಲಾಗಿದೆ. ಅವರ ಸೇವೆಯಲ್ಲಿ ಹಲವು ಸ್ತ್ರೀಯರು ಇರುತ್ತಿದ್ದರು ಅವರ ಬಗ್ಗೆ ಬಹಳ ಕೆಟ್ಟ ರೀತಿಯಲ್ಲಿ ವರ್ಣಿಸಲಾಗಿತ್ತು. ಹೀಗೆ ಕೆಟ್ಟ ಸ್ವಭಾವದ ಶತ್ರುಗಳು ಇಂತಹ ಸ್ವಚ್ಛ ಸ್ವಭಾವ ಹಾಗೂ ಪವಿತ್ರ ಜನರಿಗೆ ಇಂದ್ರಿಯಾ ಇಚ್ಛೆಗಳ ಅನುಸರಣೆಗಾರರು ಎಂದು ಹೇಳಲಾಗಿದೆ. ಶುದ್ಧಆತ್ಮ ಎಂದರೆ ಅದು ಸಾಮಾನ್ಯ ವಿಷಯ ಎಂದು ತಿಳಿದರೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿಯು ತಿಳಿಯಬಹುದು ಶುದ್ಧ ಆತ್ಮದ ಸತ್ಯವು ವೈರಿಗಳ ಮೇಲೆ ಪ್ರಕಟಗೊಳ್ಳುವುದು ಎಷ್ಟು ಕಷ್ಟಕರವಾಗಿದೆ ಎಂದು. ಆದ್ದರಿಂದ ಆರ್ಯರು ದೇವರ ಎಲ್ಲಾ ಪ್ರವಾದಿಗಳನ್ನು ವಂಚಕರು ಹಾಗೂ ಇಂದ್ರಿಯ ಇಚ್ಛೆಗಳ ಅನುಸರಣೆದಾರರು ಎಂದು ಹೇಳುತ್ತಾರೆ ಮತ್ತು ಅವರ ಕಾಲಘಟ್ಟವನ್ನು ಮೋಸ ಮತ್ತು ವಂಚನೆಯ ಕಾಲ ಎಂದು ಹೇಳುತ್ತಾರೆ.

ಆದರೆ ಈ ಮೂರನೇಯ ಲಕ್ಷಣವೇನೆಂದರೆ ದಿವ್ಯವಣಿಯೊಂದಿಗೆ ಒಂದು ನುಡಿಯು ಇರುವುದು ಇದರೊಂದಿಗೆ ದೇವರ ಒಂದು ಕಾರ್ಯನಡೆಯು ಸಹ ಇರಬೇಕು. ಇದು ಎಂತಹ ಪರಿಪೂರ್ಣವಾದ ಲಕ್ಷಣ ಎಂದರೆ ಯಾರು ಇದನ್ನು ಮುರಿಯಲು ಸಾಧ್ಯವಿಲ್ಲ. ಈ ಲಕ್ಷಣದ ಪ್ರಕಾರ ದೇವರ ಸತ್ಯ ಪ್ರವಾದಿಗಳು ಸುಳ್ಳುಗಾರರ ಮೇಲೆ ದಿವ್ಯವಾಣಿ ಅವತೀರ್ಣಗೊಳ್ಳುತ್ತದೆ ಎಂದು ದಾವೆ ಮಾಡುತ್ತಾನೋ ಆತನೊಂದಿಗೆ ನೂರಾರು ಕುರುಹುಗಳು ಪ್ರಕಟಗೊಳ್ಳಬೇಕು ಮತ್ತು ಸಾವಿರಾರು ಬಗೆಯ ದೇವರ ಬೆಂಬಲ ಮತ್ತು ನೆರವು ಒಳಗೊಂಡಿರಬೇಕು ಮತ್ತು ಆತನ ವೈರಿಗಳ ಮೇಲೆ ಬಹಿರಂಗವಾಗಿ ದೇವರ ಪ್ರಹಾರವಾಗಬೇಕು. ಇಂತಹ ವ್ಯಕ್ತಿಗೆ ಸುಳ್ಳುಗಾರ ಎಂದು ಹೇಳಲು ಯಾರಿಗಾದರು ಧೈರ್ಯವಿದೇಯೆ? ದುಃಖಕರ ಸಂಗತಿ ಏನೆಂದರೆ ಲೋಕದಲ್ಲಿ ಬಹಳಷ್ಟು ಜನ ಇಂತಹವರು ಸಹ ಇದ್ದಾರೆ ಅವರು ಈ ಸಂಕಟದಲ್ಲಿ ಸಿಲುಕಿಕೊಂಡಿದ್ದಾರೆ ಅಂದರೆ ಅವರಿಗೆ ಯಾವುದೇ ಸ್ವಯಂ ಮಾತುಕತೆ ಅಥವಾ ಶೈತಾನನ ಉದ್ರೇಕವು ಅವರೊಂದಿಗೆ ಸಂಭವಿಸುತ್ತದೆ ಅದನ್ನು ಅವರು ದೈವವಾಣಿ ಎಂದು ತಿಳಿಯುತ್ತಾರೆ ಮತ್ತು ಕಾರ್ಯಸಾಕ್ಷಿಯ ಬಗ್ಗೆ ಕಾಳಜಿ ತೋರಿಸುವುದಿಲ್ಲ.

ಹೌದು ಇದು ಕೂಡ ಸಂಭವವಿದೆ ಅಂದರೆ ಯಾರಿಗಾದರು ಅಪರೂಪವಾಗಿ ಸತ್ಯ ಕನಸುಗಳು ಅಥವಾ ಸತ್ಯ ದಿವ್ಯವಾಣಿಯು ಅವತರಿಸಬಹುದು ಆದರೆ ಇವರು ಈ ಮಾತ್ರಕ್ಕೆ ದೇವರಿಂದ ನಿಯುಕ್ತಗೊಂಡವರು ಎನ್ನಿಸಿಕೊಳ್ಳುವುದಿಲ್ಲ ಮತ್ತು ತಾನು ಇಂದ್ರಿಯಾ ಇಚ್ಛೆಗಳಿಂದ ಶುದ್ಧನಾಗಿದ್ದೇನೆ ಎಂಬುದಾಗಿ ಹೇಳಲಾರೆನು. ಬದಲಿಗೆ ಇಂತಹ ದಿವ್ಯವಾಣಿಗಳನ್ನು ಅಧಿಕಾಂಶದ ಜನರು ಹೊಂದಿರುತ್ತಾರೆ ಇದರಲ್ಲಿ ವಿಶೇಷತೆ ಏನೂ ಇಲ್ಲ. ಈ ಗುಣವು ಕೆಲವೊಮ್ಮೆ ಕನಸು ಅಥವಾ ದಿವ್ಯವಾಣಿಯಾಗುವುದು. ಇದನ್ನು ಮನುಷ್ಯರ ಸ್ವಭಾವದಲ್ಲಿ ಇಡುವ ಉದ್ದೇಶವು ಒಬ್ಬ ಬುದ್ಧಿವಂತ ವ್ಯಕ್ತಿಯು ದೇವರ ಪವಿತ್ರ ಪ್ರವಾದಿಗಳ ಮೇಲೆ ದೋಷಾರೋಪಣೆ ಮಾಡಬಾರದು ಮತ್ತು ಪ್ರತಿಯೊಬ್ಬ ಮನುಷ್ಯನ ಸ್ವಭಾವದಲ್ಲಿ ದಿವ್ಯವಾಣಿಯ ಬೀಜವು ಒಳಗೊಂಡಿದೆ ಮತ್ತು ಇದರ ಪರಿಪೂರ್ಣ ವಿಕಾಸವನ್ನು ನಿರಾಕರಿಸುವುದು ಅಹಂಕಾರವಾಗಿದೆ.

ಆ ಜನರು ದೇವರ ಹತ್ತಿರ **ಮುಲ್‌ಹಮ್** ಮತ್ತು **ಮುಕಲ್ಲಮ್** ಎನ್ನಿಸಿಕೊಳ್ಳುತ್ತಾರೆ ಮತ್ತು ಸಂದರ್ಶದ ಸೌಭಾಗ್ಯವನ್ನು ಹೊಂದುತ್ತಾರೆ ಮತ್ತು ಸೃಷ್ಟಿಗಳಿಗೆ ಕರೆ ನೀಡಲು ಅವತೀರ್ಣಗೊಳ್ಳುತ್ತಾರೆ. ಇವರ ಬೆಂಬಲದಲ್ಲಿ ಅಲ್ಲಾಹನ ಕುರುಹುಗಳು ಮಳೆಯ ರೀತಿಯಲ್ಲಿ ಸುರಿಯುತ್ತದೆ ಮತ್ತು ಲೋಕಕ್ಕೆ ಅವರೊಂದಿಗೆ ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ. ಮತ್ತು ದೇವರ ಕಾರ್ಯವು ಅವರು ನೀಡುವ ವಾಕ್ಯವು ದೇವರ ವಾಕ್ಯವಾಗಿದೆ ಎಂದು ತನ್ನಕಡೆಯಿಂದ ನಿರಂತರ ಸಾಕ್ಷ್ಯವನ್ನು ನೀಡುತ್ತಾನೆ. ಒಂದು ವೇಳೆ ದಿವ್ವಾವಾಣಿಯ ದಾವೆಯನ್ನು ಮಾಡುವವರು ಈ ಲಕ್ಷಣವನ್ನು ಗಮನದಲ್ಲಿಡುತ್ತಿದ್ದರೆ ಈ ಸಮಸ್ಯೆಯಿಂದ (ಫಿತ್ನ) ಉಳಿಯುತ್ತಿದ್ದರು.

ಹೀಗೆಯೇ! ಒಂದು ವೇಳೆ ಇಲಾಹಿ ಬಖ್ಷ್ ಈ ಸಂದರ್ಭದಲ್ಲಿ ಹೀಗೆ ಯೋಚಿಸುತ್ತಿದ್ದರೆ ಅಂದರೆ ಅವನ ಬೆಂಬಲದಲ್ಲಿ ಅಲ್ಲಾಹನ ಕುರುಹುಗಳು ಎಷ್ಟರ ಮಟ್ಟಿಗೆ ಪ್ರಕಟಗೊಂಡಿವೆ ಅಥವಾ ಅಲ್ಲಾಹನ ಬೆಂಬಲ ಅವನೊಂದಿಗೆ ಎಷ್ಟರ ಮಟ್ಟಿಗೆ ಇದೆ, ಅದೇ ರೀತಿ ಸಾಮಾನ್ಯ ಜನರ ಸಂಬಂಧದಲ್ಲಿ ಆತನಿಗೆ ಯಾವ ಶ್ರೇಷ್ಠತೆ ನೀಡಲಾಗಿದೆ ಎಂದು ಯೋಚಿಸುತ್ತಿದ್ದರೆ ಅವನು ಎಂದೂ ಈ ಶೋಧನೆಗೆ ಗುರಿಯಾಗುತ್ತಿರಲಿಲ್ಲ. ಈಗ ಬಹಳ ದುಃಖದಿಂದ ಹೇಳಬೇಕಾಗುತ್ತದೆ ಆತನು ತನ್ನ ಸಾವಿನ ನಂತರ ಒಂದು ದೊಡ್ಡ ಸುಳ್ಳನ್ನು ಬಿಟ್ಟು ತೆರಳಿದನು. ನನ್ನ ವಿಚಾರದಲ್ಲಿ ಆತನು ನೀಡುತ್ತಿದ್ದ ದಿವ್ಯವಾಣಿ ಏನೆಂದರೆ ನನ್ನ ಜೀವಿತ ಕಾಲದಲ್ಲಿ ಈ ವ್ಯಕ್ತಿಯು ಪ್ಲೇಗಿನಿಂದ ಸಾಯುವನು. ಆತನ ಜಮಾಅತ್ ಚದುರಿ ಹೋಗುವುದು. ಆದರೆ ಅವನು ಸ್ವತಃ ಪ್ಲೇಗಿನಿಂದ ಸಾಯುವುದನ್ನು ಕಂಡನು. ಅವನು ನನ್ನ ನಾಶದ ತನಕ ತಾನು ಸಾಯುವುದಿಲ್ಲ ಎಂದು ದಾವೆ ಮಡಿದ್ದನು ಆದರೆ ಆತನ ಸುಳ್ಳು ದಿವ್ಯವಾಣಿಯ ನಂತರ ನನ್ನ ಜಮಾಅತ್ ಲಕ್ಷದವರೆಗೆ ತಲುಪಿದ್ದನ್ನು ಆತನು ನೋಡಿದನು. ಅಂದರೆ ಆತನ ಸುಳ್ಳು ದಿವ್ಯವಾಣಿಯ ನಂತರ ನನ್ನ ಜಮಾಅತ್‌ನ ಸಂಖ್ಯೆ ಲಕ್ಷದ ತನಕ ತಲುಪಿತು. ಯಾವಾಗ ಆತನು ಇಂತಹ ದಿವ್ಯವಾಣಿಯನ್ನು ಪ್ರಕಟಗೊಳಿಸಲು ಆರಂಭಿಸಿದನು ಆ ಹೊತ್ತಿನಲ್ಲಿ ನನ್ನ ಜಮಾಅತ್ತಿನ ಸಂಖ್ಯೆಯು ನಲವತ್ತು ಜನಕ್ಕಿಂತ ಜಾಸ್ತಿ ಇರಲಿಲ್ಲ ಅನಂತರ ನಾಲ್ಕು ಲಕ್ಷದ ತನಕ ಈ ಸಂಖ್ಯೆಯು ತಲುಪಿತು. ಆತನು ಪ್ರತಿಯೊಂದು ದೃಷ್ಟಿಯಿಂದ ತನ್ನ ವೈಫಲ್ಯತೆಯನ್ನು ಮತ್ತು ನನ್ನ ಸಫಲತೆಯನ್ನು ನೋಡುವವರೆಗೆ ಸಾಯಲಿಲ್ಲ. ಅತನು ತನ್ನ ಸುಳ್ಳು ದಿವ್ಯವಾಣಿಗಳ ಮೂಲಕ ನನ್ನ ಮೇಲೆ ಹೂಡಲಾಗುವ ಪ್ರತಿಯೊಂದು ಮೊಖದ್ದಮೆಗಳಲ್ಲಿ ನಾನು ಶಿಕ್ಷೆಯನ್ನು ಹೊಂದಿ ದೊಡ್ಡ ಶಾಪಕ್ಕೆ ಗುರಿಯಾಗುವೆನು ಎಂದಾಗಿ ಭವಿಸಿದ್ದನು. ಮತ್ತು ಆತನಿಗೆ ಅವತರಿಸವಂತಹ ಇಂತಹ ದಿವ್ಯವಾಣಿಗಳನ್ನು ಆತನು ತನ್ನ ಗೆಳೆಯರಲ್ಲಿ ಪ್ರಕಟಗೊಳಿಸುತ್ತಿದ್ದನು. ಆದರೆ ಅಲ್ಲಾಹನು ನನಗೆ ಪ್ರತಿಯೊಂದು ಪ್ರಕರಣಗಳಲ್ಲಿ ಗೌರವದೊಂದಿಗೆ ದೋಷಮುಕ್ತಗೊಳಿಸುತ್ತಿದ್ದನು. ಆತನು ತೀವ್ರ ಮುಖ ಭಂಗದೊಂದಿಗೆ ಮರಣ ಹೊಂದಿದನು. ಆತನಿಗೆ ಪ್ಲೇಗ್ ರೋಗ ಉಂಟಾಗಿ ತನ್ನ ಸಾವನ್ನು ತನ್ನ ಮುಂದೆ ಕಂಡಾಗ ತನ್ನ ಎಲ್ಲಾ ದಿವ್ಯವಾಣಿಗಳನ್ನು ಶೈತಾನನ ವಾಕ್ಯಗಳು ಎಂದು ತಿಳಿದಿರಬಹುದು. ಆ ಸಮಯದಲ್ಲಿ ಆತನಿಗೆ ತನ್ನ ಸಂಬಂಧವಾಗಿ ನಾನು ತಪ್ಪುಗಾರನಾಗಿದ್ದೇನೆ ಎಂಬುದಾಗಿ ನೆನಪಾಗಿರಬಹುದು. ಈ ಮಾತು ಸಂಪೂರ್ಣವಾಗಿ ಅಸಮಂಜಸ ಹಾಗೂ ಊಹೆಗಳ ವಿರುದ್ಧವಾಗಿದೆ ಆತನು ಎಷ್ಟರ ಮಟ್ಟಿಗಿನ ಹೊಡೆತಕ್ಕೆ ಸ್ವತಃ ತಾನೇ ತುತ್ತಾಗಿರುವದನ್ನು ಕಂಡು ಮತ್ತು ನನ್ನ ಸಫಲತೆಗಳನ್ನು ತನ್ನ ಕೊನೆಗಳಿಗೆಗಳಲ್ಲಿ ನೆನಸಿಕೊಂಡು ತನ್ನ ಮೊದಲನೆಯ ಸ್ಥಿತಿಯಲ್ಲಿಯೇ ಉಳಿದುಕೊಂಡಾಗ ಆತನಿಗೆ ತಾನು ಮಾಡಿದ ದಾವೆಗಳು ಅತನ ನೆನಪಿಗೆ ಬಂದಿರಬಹುದು. ಅಂದರೆ ನಾನು **'ಅಸಾಯೆ ಮೂಸಾ'** (ಮೂಸನ ಲಾಠಿ) ಎಂದು ಇಟ್ಟಿದನು ಮತ್ತು ಈ ಅಸಾ(ಲಾಠಿ) ಆ ಮಸೀಹ್ ಮೌಊದ್ ಎಂದು ದಾವೆಮಾಡುವ ವ್ಯಕ್ತಿಯನ್ನು ನಾಶಮಾಡುತ್ತದೆ ಎಂಬುದಾಗಿ ಆಶಿಸಿದ್ದನು. ಮತ್ತು ಮಸೀಹ್‌ಮೌಊದ್‌ನ ದಾವೆಯನ್ನು ಮಾಡಿದ ಆ ವ್ಯಕ್ತಿಯ ಸಂಬಂಧವಾಗಿ ಆತನು ನನ್ನ ಜೀವನದಲ್ಲಿ ಪ್ಲೇಗ್‌ನಿಂದ ಸಾಯುತ್ತಾನೆ ಎಂಬುದಾಗಿ 'ಅಸಾಎ ಮೂಸಾ' ಎಂಬ ಪುಸ್ತಕದಲ್ಲಿ ಭವಿಷ್ಯವಾಣಿ ನುಡಿದಿದ್ದೆ ಎಂದು ಆತನಿಗೆ ನೆನಪು ಬಂದಿರಬಹುದು ಮತ್ತು ಅದೇ ಗ್ರಂಥದಲ್ಲಿ ನನ್ನ ಈ ಶತ್ರುವನ್ನು ಸಾಯಿಸುವವರೆಗೆ ತಾನು ಸಾಯುವುದಿಲ್ಲ ಎಂಬ ಭವಿಷ್ಯವಾಣಿಯನ್ನು ಮಾಡಿದ್ದೇ ಎಂಬುವುದು ನೆನಪಿಗೆ ಬರಬಹುದು. ಪ್ರತಿಯೊಬ್ಬ ವ್ಯಕ್ತಿಯು ಯೋಚಿಸಬಲ್ಲನು ಪ್ಲೇಗ್ ಆತನಿಗೆ ಆವರಿಸಿದ ಸ್ಥಿತಿಯಲ್ಲಿ ಯಾವ ಮಟ್ಟದಲ್ಲಿ ಅವನಿಗೆ ನೋವು ಉಂಟಾಯಿತು ಎಂದು. ಇಷ್ಟೊಂದು ದೌರ್ಬಲ್ಯಗಳು ಮತ್ತು ಆತನ ಎಲ್ಲಾ ದಿವ್ಯವಾಣಿಗಳು ಸುಳ್ಳಾದವು ಎಂದು ಬಯಲಾದರೂ ಕೂಡ ಆತನಿಗೆ ಪ್ಲೇಗ್ ಸಮಯದಲ್ಲಿ ತಾನು ಮೂಸಾ ಆಗಿರುವ ಬಗ್ಗೆ ಅವನಿಗೆ ಭರವಸೆ ಇದ್ದಿರಬಹುದು ಎಂದು ಯಾರು ನಂಬುತ್ತಾರೆ? ಇಲ್ಲ, ಖಂಡಿತವಾಗಿಯು ಇಲ್ಲ. ಬದಲಿಗೆ ಪ್ಲೇಗ್ ಆತನ ಎಲ್ಲಾ ಯೋಚನೆಗಳನ್ನು ಮುರಿದಿರಬಹುದು ಮತ್ತು ತಾನು ತಪ್ಪಾಗಿದ್ದೆನು ಎಂದು ಮನವರಿಕೆ ಆಗಿರಬಹುದು. ಹೀಗಾಗಿ ಈ ಪ್ರಸಂಗದ ಸಂಬಂಧವಾಗಿ ಅಲ್ಲಾಹನು ನನ್ನ ಮೇಲೆ ಬಹಿರಂಗಗೊಳಿಸಿದ್ದನು ಅದೇನಂದರೆ ಅವನೆ ಈ ಕೆಟ್ಟು ಯೋಚನೆಗಳ ಮೇಲೆ ಖಾಯಂ ಇರುವುದಿಲ್ಲ. ಮತ್ತು ಕೊನೆಗೆ ಅವನು ಈ ಯೋಚನೆಗಳನ್ನು ರುಜು ಗೊಳಿಸುತ್ತಾನೆ ಎಂಬುದಾಗಿ ತಿಳಿಸಿದ್ದನು. ಇದರಲ್ಲಿ ಸಂದೇಹವಿಲ್ಲ ಏಕೆಂದರೆ ಯಾವಾಗ ಆತನು ಅಕಾಲಿಕ ಪ್ಲೇಗ್ ಮತ್ತು ಅಕಾಲ ಮರಣದ ದೃಶ್ಯ ಸಂಭವಿಸಿತು ಅದಕ್ಕೆ ಆತನು ಈ ಅಕಾಲಿಕ ಮರಣ ನನ್ನ ದಾವೆಯ ವಿರುದ್ಧವಾಗಿದೆ ಎಂದು ಆತನಿಗೆ ಚೆನ್ನಾಗಿ ತಿಳಿಯಿತು ಅದಕ್ಕೆ ಖಂಡಿತವಾಗಿಯು ಈ ದೃಶ್ಯವು ಆತನಗೆ ಎಲ್ಲಾ ದಿವ್ಯವಾಣಿಗಳು ಶೈತಾನನಿಂದ ಉಂಟಾಯಿತು ಎಂದು ಖಾತರಿಯಾಯಿತು. ಈ ಸನ್ನಿವೇಶದಲ್ಲಿ ಅವನು ತಿಳಿದಿರಬಹುದು ತಾನು ತಪ್ಪು ದಾರಿಯಲ್ಲಿದ್ದೇನೆ ಎಂದು ಮತ್ತು

ನಾನು ಊಹಿಸಿದ್ದೆಲ್ಲ ಅಲ್ಲಾಹನ ಕಡೆಯಿಂದಿರಲಿಲ್ಲ. ಮುಂದೆ ವರಿದು ನಾನು ವಿವರಿಸುವೆನು ಹೀಗೆ ತಿಳಿಯುವುದು ಆತನಿಗೆ ಅಗತ್ಯವಾಗಿತ್ತು ಏಕೆಂದರೆ ಈ ಸಾವಿನ ದೃಶ್ಯದಿಂದ ಅವನ ದಿವ್ಯವಾಣಿಯ ವಾಕ್ಯಗಳು ಅಕಸ್ಮಿಕವಾಗಿ ಒಂದು ಗೋಡೆ ಬೀಳುವ ಹಾಗೆ ಅವನ ದಾವೆಯು ಸಹ ಸುಳ್ಳೆಂದು ಸಾಬೀತಾಯಿತು. ತಾನು ಪ್ಲೇಗಿನಿಂದ ಉಳಿಯುತ್ತೇನೆ ಎಂಬುದು ಒಂದು ದೂರದ ನಂಬಿಕೆ ಆಗಿತ್ತು ಏಕೆಂದರೆ 7 ಏಪ್ರಿಲ್ 1907ರಲ್ಲಿ ಇವನು ಮರಣಹೊಂದನೋ ಇದಕ್ಕಿಂತ ಮುಂಚೆ ಎಂತಹ ಮಾರಕ ಪ್ಲೇಗ್ ಲಾಹೋರಿನಲ್ಲಿ ಇತ್ತು ಎಂದರೆ ಕೆಲವು ದಿನಗಳಂತು ಇನ್ನೂರು ಇನ್ನೂರಕ್ಕಿಂತ ಹೆಚ್ಚು ಜನ ಸಾಯುತ್ತಿದ್ದರು ಮತ್ತು ಒಂದು ದಿನ ಮಂಚೆ ಆತನ ಓರ್ವ ಅರಬ್ ಮಿತ್ರನು ಪ್ಲೇಗಿನಿಂದ ಸಾವು ಹೊಂದಿದ್ದನು. ಆತನ ಜನಾಝ ನಿರ್ವಹಿಸಲು ಹೋಗಿ ಆತನಿಂದ ಪ್ಲೇಗ್‌ನ್ನು ಪಡೆದುಕೊಂಡು ಬಂದನು. ಹೀಗೆ ಈ ಮಾರಕ ರೋಗದಲ್ಲಿ ನಾನು ಉಳಿಯುತ್ತೇನೆ ಎಂದು ಯಾರು ಹೇಳ ಬಲ್ಲನು. ಹೀಗೆ ಸಾವಿರಾರು ಜನರು ಪ್ಲೇಗಿಗೆ ಗುರಿಯಾದ ತಕ್ಷಣವೇ ಆತನ ಎಲ್ಲಾ ಮೋಸತನವು ಸಮುದ್ರದಲ್ಲಿ ಮುಳುಗಿ ಹೋಯಿತು ಮತ್ತು ಆತನು ಸಾಯುವ ಸಾವಿರಾರು ಜನರನ್ನು ನೆನಪಿಸಿಕೊಂಡನು ವಿಶೇಷವಾಗಿ ಯಾಖೂಬಿನ ಸಾವನ್ನು ನೆನಸಿಕೊಂಡು ತಾನು ಸಹ ಖಂಡಿತವಾಗಿಯು ಸಾಯುತ್ತೇನೆ ಎಂದು ಯೋಚಿಸಿದನು. ಇಂತಹ ಸ್ಥಿತಿಯಲ್ಲಿ ಅವನು ಮೂಸಾ ಆಗಿರುವೆನು ಎಂದು ಬಾವಿಸಲು ಹೇಗೆ ಸಾಧ್ಯ. ಹೀಗೆ ಇದು ಅಲ್ಲಾಹನ ಕರುಣೆ ಅಗಿದೆ ಅವನು ತನ್ನೊಂದಿಗೆ ತನ್ನ ತಪ್ಪು ನಂಬಿಕೆಗಳನ್ನು ತನ್ನೊಂದಿಗೆ ತೆಗೆದುಕೊಂಡು ಹೋಗಲಿಲ್ಲ. ಅಲ್ಲಾಹನು ಅವನಿಗೆ ಕಂಠವನ್ನು ಹಿಡಿದು ರುಜು ಮಾಡಿಸಿದನು. ಹೀಗೆ ಇವನು **ವಇನ್‌ಮಿನ್ ಅಹ್‌ಲಿಲ್ಕಿತಾಬಿ ಇಲ್ಲ ಲಯುಮಿನನ್ನ ಬಿಹಿ ಖಬ್‌ಲ ಮೌತಿಹೀ.** ಎಂಬ ಜನರಲ್ಲಿ ಸೇರಿಕೊಂಡನು.

***************************

## ಮಹಾವಿಜಯ

### ಡಾ॥ ಅಲೆಕ್‌ಝೆಂಡರ್ ಡೂಯಿ ಅಮೇರಿಕಾದ ಸುಳ್ಳು ಪ್ರವಾದಿ ನನ್ನ ಭವಿಷ್ಯವಾಣಿಯ ಪ್ರಕಾರ ಮರಣ ಹೊಂದಿದನು.

ಮೇಲಿನ ಶೀರ್ಷಿಕೆಯ ಸಂಬಂಧಿತವಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಬರೆಯುತ್ತಾರೆ:

ತಿಳಿದಿರಲಿ ಈ ವ್ಯಕ್ತಿ ಆತನ ಹೆಸರು ಶೀರ್ಷಿಕೆಯಲ್ಲಿ ನಮೂದಿಸಲಾಗಿದೆ. ಇಸ್ಲಾಮಿನ ಬಹುದೊಡ್ಡ ಶತ್ರುವಾಗಿದ್ದನು ಮತ್ತು ಇದಲ್ಲದೆ ಆತನು ತಾನು ಪ್ರವಾದಿ ಎಂದು ಸುಳ್ಳು ದಾವೆಯನ್ನು ಮಾಡಿದ್ದನು ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಸುಳ್ಳುಗಾರ ಎಂದು ತಿಳಿಯುತ್ತಿದ್ದನು. ಮತ್ತು ಕೆಟ್ಟ ಬೈಗುಳಗಳಿಂದ ಹಾಗೂ ಅಶ್ಲೀಲ ಮಾತುಗಳಿಂದ ಅವರನ್ನು ನೆನಪಿಸಿಕೊಳ್ಳುತ್ತಾನೆ. ಹೀಗೆ ಅವನಲ್ಲಿ ತೀವ್ರ ಅಶುದ್ಧವಾದ ಲಕ್ಷಣಗಳಿದ್ದವು. ಹೀಗೆ ಹಂದಿಗಳ ಮುಂದೆ ಮುತ್ತುಗಳ ಬೆಲೆ ಹೇಗೆ ಇಲ್ಲವೋ ಹಾಗೆಯೇ ಇಸ್ಲಾಮಿನ ಏಕತ್ವವನ್ನು ಬಹಳ ಹೀನ ದೃಷ್ಟಿಯಿಂದ ನೋಡುತ್ತಿದ್ದನು ಮತ್ತು ಇದರ ನಿರ್ಮೂಲನೆಯನ್ನು ಬಯಸುತ್ತಿದ್ದನು. ಹಝ್ರತ್ ಈಸ ಮಸೀಹರನ್ನು ದೇವರು ಎಂದು ನಂಬುತ್ತಿದ್ದನು. ತ್ರಿತ್ವವನ್ನು ಈ ಲೋಕದಲ್ಲಿ ಹರಡಿಸಲು ಆತನಲ್ಲಿ ಎಷ್ಟರ ಮಟ್ಟಿಗೆ ಉತ್ಸಾಹವಿತ್ತು ಎಂದರೆ ನಾನು ಅನೇಕ ಪಾದ್ರಿಗಳ ಸಾವಿರಾರು ಪುಸ್ತಕಗಳನ್ನು ಓದಿದ್ದೇನೆ ಆದರೆ ಇಂತಹ ಉತ್ಸಾಹ ಯಾರಲ್ಲೂ ಕಾಣಲಿಲ್ಲ ಅಂದಹಾಗೆ ಆತನ 'ಲೀವ್ಸ್ ಆಫ್ ಹೀಲಿಂಗ್ಸ್' ಪತ್ರಿಕೆಯಲ್ಲಿ ದಿನಾಂಕ 19 ಡಿಸಂಬರ್ 1903 ಮತ್ತು 14 ಫೆಬ್ರವರಿ 1907ರಲ್ಲಿ ಈ ವಾಕ್ಯವಿದೆ:

"ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ
ಆ ದಿನ ಬೇಗ ಬರಲಿ ಲೋಕದಿಂದ ಇಸ್ಲಾಮ್ ಅಳಿಸಿ ಹೋಗಲಿ..
ಎಲೈ ದೇವನೇ! ನೀನು ಹೀಗೆ ಮಾಡು.
ಎಲೈ ದೇವರೆ ಇಸ್ಲಾಮ್ ಧರ್ಮವನ್ನು ನಾಶ ಮಾಡು."

ಅದೇ ರೀತಿ ದಿನಾಂಕ 12 ಡಿಸಂಬರ್ 1903ರಂದು ತನ್ನ ಪತ್ರಿಕೆಯಲ್ಲಿ ತನ್ನನ್ನು ತಾನು ಒಬ್ಬ ನಿಜವಾದ ಪ್ರವಾದಿ ಮತ್ತು ಸಂದೇಶವಾಹಕ ಎಂದು ಘೋಷಿಸುತ್ತಾನೆ.

"ಒಂದು ವೇಳೆ ನಾನು ಸತ್ಯ ಪ್ರವಾದಿ ಇಲ್ಲವಾದ್ದಲ್ಲಿ.
ಇಡೀ ಲೋಕದಲ್ಲಿ ಯಾರು ಅಲ್ಲಾಹನ ಪ್ರವಾದಿಯಾಗಿರಲು ಸಾಧ್ಯವಿಲ್ಲ."

ಇದಲ್ಲದೆ ಇತನು ಮುಲಭೂತವಾಗಿ ಬಹುದೇವಾರಾಧಕನಾಗಿದ್ದನು, ಮತ್ತು ಹೀಗೆ ಹೇಳುತ್ತಿದ್ದನು: ನನಗೆ ದಿವ್ಯವಾಣಿ ಅವತೀರ್ಣಗೊಂಡಿದೆ ಅದೇನಂದರೆ ಇಪ್ಪತ್ತೈದು ವರ್ಷಗಳ ವರೆಗೆ ಈಸ ಮಸೀಹರು ಆಕಾಶದಿಂದ ಆಗಮಿಸುವರು ಮತ್ತು ಈಸ ಮಸೀಹರನ್ನು ದೇವರು ಎಂದು ತಿಳಿಯುತ್ತಿದ್ದನು. ಇದರೊಂದಿಗೆ ನನ್ನ ಮನಸ್ಸಿಗೆ ಅವನು ನೋವನ್ನುಂಟು ಮಾಡಿದ ಒಂದು ವಿಷಯವೂ ಇತ್ತು. ನಾನು ಮೊದಲೆ ಬರೆದಿದ್ದೇನೆ ಆತನು ಪ್ರವಾದಿ ಮುಹಮ್ಮದ್ ಸಲಲ್ಲಾಹು ಅಲೈಹಿವ ಸಲ್ಲಮರ ಅತೀ ಕೀಳು ಮಟ್ಟದ ಶತ್ರು ಆಗಿದ್ದನು. ಮತ್ತು ನಾನು ಅವನ ಪತ್ರಿಕೆ 'ಲೀವ್ಸ್ ಆಫ್ ಹೀಲಿಂಗ್ಸ್' ಪಡೆಯುತ್ತಿದ್ದೆನು. ಹೀಗೆ ಆತನ ಅವಹೇಳನಕಾರಿ ಹೇಳಿಕೆಗಳು ನನಗೆ ತಲುಪುತ್ತಿತ್ತು. ಅವನ ಅವಹೇಳನಕಾರಿ ಮಾತುಗಳು ಒಂದು ಮಟ್ಟಕ್ಕೆ ತಲುಪಿದಾಗ ನಾನು ಆಂಗ್ಲ ಭಾಷೆಯಲ್ಲಿ ಒಂದು ಪತ್ರ ಅವನ ಕಡೆ ಬರೆದು ರವಾನಿಸಿದೆನು. ಅವನಿಗೆ 'ಮುಬಾಹಿಲ' (ಪ್ರಾರ್ಥನಾ ಸಮರ) ಕ್ಕೋಸ್ಕರ ಅವನಿಗೆ ಅಹ್ವಾನಿಸಿದೆನು. ಹೀಗೆ ಅಲ್ಲಾಹನು ನಮ್ಮಿಬ್ಬರಲ್ಲಿ ಯಾರು ಸುಳ್ಳಾಗಾರನಾಗಿದ್ದಾನೋ ಆತನು ಸತ್ಯಾವಂತನ ಜೀವನದಲ್ಲಿ ಸಾಯಬೇಕು ಎಂದು. ಈ ಆಹ್ವಾನ ಎರಡು ಸಲ 1902ರಲ್ಲಿ ಮತ್ತು 1903ರಲ್ಲಿ ಅವನ ಬಳಿ ಕಳುಹಿಸಲಾಗಿತ್ತು ಮತ್ತು ಅಮೇರಿಕದ ಕೆಲವು ಪ್ರಸಿದ್ಧ ಪತ್ರಿಕೆಗಳಲ್ಲಿಯೂ ಸಹ ಇದನ್ನು ಪ್ರಕಟಗೊಳಿಸಲಾಯಿತು. ಆ ಪತ್ರಿಕೆಗಳ ಹೆಸರು ಅಡಿಟಿಪ್ಪಣಿಯಲ್ಲಿ ನಮೂದಿಸಲಗಿದೆ.

(ಹಝ್ರತ್ ಮಸೀಹ್ ಮೌಊದ್(ಅ) ಅವರು 32 ಪತ್ರಿಕೆಗಳ ಹೆಸರುಗಳನ್ನು ಅಡಿಟಿಪ್ಪಣಿಯಲ್ಲಿ ಪ್ರಕಟಿಸಿದರು. (ವರದಿಗಾರ))

ಈ ಮುಬಾಹಿಲದ ಶೀರ್ಷಿಕೆಯಲ್ಲಿ ಸುಳ್ಳುಗಾರನ ಮೇಲೆ ನಾನು ಶಾಪದ ಪ್ರಾರ್ಥನೆಯನ್ನು ಸಹ ಮಾಡಿದೆ ಮತ್ತು ಅಲ್ಲಾಹನಿಂದ ಹೀಗೆ ಬೇಡಿಕೊಂಡಿದ್ದೆ ಅಲ್ಲಾಹನೆ ಸುಳ್ಳುಗಾರನ ಸುಳ್ಳು ತನ್ನ ತೀರ್ಮಾನದಿಂದ ಬಹಿರಂಗ ಪಡಿಸು ಎಂದು. ಈಗಾಗಲೇ ಬರೆಯಲ್ಪಟ್ಟ ನನ್ನ ಮುಬಾಹಿಲೆಯ ಶೀರ್ಷಿಕೆಯು ಅಮೇರಿಕಾದ ಕೆಲವು ಪ್ರಸಿದ್ಧ ದಿನಪತ್ರಿಕೆಗಳಲ್ಲಿ ಬಹಳ ಉತ್ತಮವಾಗಿ ಪ್ರಕಟಿಸಲಾಯಿತು. ಈ ಪತ್ರಿಕೆಗಳು ಅಮೇರಿಕಾದ ಕ್ರೈಸ್ತರುಗಳಿಗೆ ಸಂಬಂಧಿಸಿದ್ದಾಗಿತ್ತು ಅದರೊಂದಿಗೆ ನನ್ನ ಯಾವುದೇ ಸಂಬಂಧವಿಲ್ಲ. ಪತ್ರಿಕೆಗಳಲ್ಲಿ ಪ್ರಕಟಗೊಳಿಸುವ ಅವಶ್ಯಕತೆಯು ನನಗೆ ಏಕೆ ಬೀರಿತು ಎಂದರೆ ಸುಳ್ಳು ಪ್ರವಾದಿಯ ದಾವೇದಾರನಾದ ಡಾ॥ ಅಲೆಕ್ಸಾಂಡರ್ ಡೂಯಿ ನೇರವಾಗಿ ನನಗೆ ಉತ್ತರ ನೀಡಲಿಲ್ಲ ಆದ್ದರಿಂದ ನಾನು ಕೊನೆಗೆ ಅಮೇರಿಕದ ಸುಪ್ರಸಿದ್ಧ ದಿನ ಪತ್ರಿಕೆಗಳು ಮತ್ತು ಅದು ಲೋಕದಲ್ಲಿ ಅತೀ ಹೆಚ್ಚು ಪ್ರಸಿದ್ಧವಾಗಿರುವ ಪತ್ರಿಕೆಗಳಾಗಿದ್ದವು ಅದರಲ್ಲಿ ಮುಬಾಹಿಲೆಯ ಶೀರ್ಷಿಕೆಯನ್ನು ಪ್ರಕಟಿಸಲಾಯಿತು. ಇದು ಅಲ್ಲಾಹನ ಅನುಗ್ರಹವಾಗಿದೆ ಏಕೆಂದರೆ ಅಮೇರಿಕಾದ ಎಲ್ಲಾ ಪತ್ರಿಕೆಗಳ ಸಂಪಾದಕರು ಕ್ರೈಸ್ತರಾಗಿದ್ದರು ಮತ್ತು ಇಸ್ಲಾಮಿನ ವಿರೋಧಿ ಆಗಿದ್ದರೂ ಸಹ ಬಹಳ ಉತ್ಸಾಹದಿಂದ ನನ್ನ ಮುಬಾಹಿಲೆಯ ಪಂಥಾಹ್ವಾನದ ಶೀರ್ಷಿಕೆಯಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಗೊಳಿಸಿದಾಗ ಅಮೇರಿಕಾ ಮತ್ತು ಯೂರೋಪಿನಲ್ಲಿ ಇವರ ಸದ್ದು ಎಬ್ಬಿತು ಮತ್ತು ಭಾರತವರೆಗೂ ಈ ಮುಬಾಹಿಲೆಯ ಚರ್ಚೆಯು ಹರಡಿತು. ಮತ್ತು ನನ್ನ ಈ ಮುಬಾಹಿಲೆಯ ಸಂಕ್ಷಿಪ್ತ ಶೀರ್ಷಿಕೆಯು ಹೀಗಿತ್ತು: ಇಸ್ಲಾಮ್ ಸತ್ಯವಾಗಿದೆ ಮತ್ತು ಕ್ರೈಸ್ತ ಧರ್ಮದ ನಂಬಿಕೆಯು ಸುಳ್ಳಾಗಿದೆ. ಅದೇ ರೀತಿ ನಾನು ಕೊನೆಗಾಲದಲ್ಲಿ ಅಲ್ಲಾಹನ ಕಡೆಯಿಂದ ಅವತರಿಸಬೇಕಾದ ಮಸೀಹ್ ಆಗಿದ್ದೇನೆ ಮತ್ತು ಪ್ರವಾದಿಗಳ ಗ್ರಂಥಗಳಲ್ಲಿ ಇದರ ವಾಗ್ದಾನವಿತ್ತು. ಅದೇ ರೀತು ಹೀಗೆ ಬರೆದೆ ಡಾ॥ ಡೂಯಿ ತಾನು ಪ್ರವಾದಿಯಾಗಿರುವೆನು ಎಂಬ ದಾವೆಯಲ್ಲಿ ಹಾಗೂ ತ್ರಿತ್ವದ ನಂಬಿಕೆಯಲ್ಲಿ ಸುಳ್ಳಾಗಿದ್ದಾನೆ. ಒಂದು ವೇಳೆ ಆತನು ನನ್ನೊಡನೆ ಮುಬಾಹಿಲ ಮಾಡಿದರೆ ನನ್ನ ಜೀವಿತ ಕಾಲದಲ್ಲಿಯೇ ಆಕಾಂಕ್ಷೆ ಹಾಗೂ ದುಃಖದೊಂದಿಗೆ ಸಾಯುವನು. ಒಂದು ವೇಳೆ ಆತನು ನನ್ನೊಂದಿಗೆ ಮುಬಾಹಿಲ ಮಾಡದಿದ್ದರೂ ಸಹ ದೇವರ ಶಿಕ್ಷೆಯಿಂದ ಅವನು ಉಳಿಯಲಾರನು. ಇದರ ಉತ್ತರವಾಗಿ ನತದೃಷ್ಟನಾದ ಡೂಯಿ ಡಿಸಂಬರ್ 1903ರಲ್ಲಿ ಯಾವುದೋ ಒಂದು ಪತ್ರಿಕೆಯಲ್ಲಿ ಅದೇ ರೀತಿ ದಿನಾಂಕ 26 ಸೆಪ್ಟಂಬರ 1903ರಲ್ಲಿ ತನ್ನ ಪತ್ರಿಕೆಯಲ್ಲಿ ತನ್ನ ಕಡೆಯಿಂದ ಕೆಲವು ಸಾಲುಗಳನ್ನು ಆಂಗ್ಲ ಭಾಷೆಯಲ್ಲಿ ಪ್ರಕಟಗೊಳಿಸಿದನು. ಅದರ ಅನುವಾದವು ಈ ಕೆಳಗಿನಂತಿದೆ:

"ಹಿಂದುಸ್ತಾನದಲ್ಲಿ ಓರ್ವ ದಡ್ಡ ಮುಹಮ್ಮದಿ ಮಸೀಹ್ ಇದ್ದಾನೆ
ಆತನು ನನಗೆ ಪದೇ ಪದೇ ಬರೆಯುತ್ತಾನೆ
ಈಸ ಮಸೀಹನ ಗೋರಿಯು ಕಾಶ್ಮೀರದಲ್ಲಿದೆ ಎಂದು
ಮತ್ತು ಜನರು ನನ್ನೊಂದಿಗೆ ಕೇಳುತ್ತಾರೆ ನೀನು ಇದಕ್ಕೆ ಉತ್ತರ ಏಕೆ ನೀಡುತ್ತಿಲ್ಲ
ಮತ್ತು ಈ ವ್ಯಕ್ತಿಯ ಪ್ರಶ್ನೆಗಳಿಗೆ ಏಕೆ ಉತ್ತರಿಸುತ್ತಿಲ್ಲ ಎಂದು.
ಆದರೆ ನೀವು ಯೋಚಿಸುತ್ತೀರ ನಾನು ಈ ಸೊಳ್ಳೆಗಳು ಹಾಗೂ ನೊಣಗಳಿಗೆ ಉತ್ತರ ನೀಡುವೆನು,
ಒಂದು ವೇಳೆ ನಾನು ಅವರ ಮೇಲೆ ಕಾಲು ಇರಿಸಿದರೆ
ಅವರನ್ನು ನೆಲಸಮ ಮಾಡುವೆನು."

ಅದೇ ರೀತಿ ದಿನಾಂಕ 19 ಡಿಸೆಂಬರ್ 1902ರಲ್ಲಿ ಬರೆಯುತ್ತಾನೆ:
"ನನ್ನ ಕೆಲಸವು ಏನಾಗಿದೆ ಎಂದರೆ ನಾನು ಪಶ್ಚಿಮದಿಂದ,
ಪೂರ್ವದಿಂದ, ಉತ್ತರದಿಂದ, ಹಾಗೂ ದಕ್ಷಿಣದಿಂದ ಜನರನ್ನು

ಓಗ್ಗೂಡಿಸುವುದಾಗಿದೆ ಮತ್ತು ಕ್ರೈಸ್ತರನ್ನು ಈ ನಗರದಲ್ಲಿ ಹಾಗೂ ಬೇರೆ ನಗರಗಳಲ್ಲಿ ಇರಿಸುವೆನು ಎಲ್ಲಿಯವರೆಗೆ ಎಂದರೆ ಆ ದಿನ ಬರಲಿ ಮುಹಮ್ಮದೀಯ ಧರ್ಮವು ಲೋಕದಿಂದ ಅಳಿಸುವಂತಾಗಲಿ. ಎಲ್ಮೈ ದೇವನೇ ನಮಗೆ ಆ ಕಾಲ ತೋರಿಸು."

ಹೀಗೆ ಈ ವ್ಯಕ್ತಿಯು ನನ್ನ ಮುಬಾಹಲಾ ಶೀರ್ಷಿಕೆಯ ನಂತರ ಅದು ಯೂರೋಪ್, ಅಮೇರಿಕಾ ಮತ್ತು ಈ ದೇಶದಲ್ಲಿ ಪ್ರಕಟಗೊಂಡಿತು. ಅದಲ್ಲದೆ ಲೋಕದ ಎಲ್ಲಾ ಕಡೆ ಸಹ ಪ್ರಕಟವಾಗಿತ್ತು. ಆತನ ತುಂಟತನವು ದಿನೇ ದಿನೇ ಹೆಚ್ಚುತ್ತಾ ಹೋಯಿತು. ಇತ್ತ ಕಡೆ ನಾನು ನನ್ನ ಸಂಬಂಧದಲ್ಲಿ ಅಲ್ಲಾಹನಿಂದ ತೀರ್ಪನ್ನು ಬಯಸಿದ್ದೆ. ಖಂಡಿತವಾಗಿಯೂ ಅಲ್ಲಾಹನು ನ್ಯಾಯ ತೀರ್ಪನ್ನು ನೀಡುವನು ಎಂಬುದಾಗಿ ಕಾಯುತ್ತಿದ್ದೆ. ಅಲ್ಲಾಹನು ಸುಳ್ಳಾಗಾರ ಮತ್ತು ಸತ್ಯವಂತನ ನಡುವೆ ಇರುವ ಅಂತರವನ್ನು ತನ್ನ ತೀರ್ಪಿನ ಮೂಲಕ ತೋರಿಸುವನು ಎಂದು.

ಮತ್ತು ನಾನು ಸದಾ ಅಲ್ಲಾಹನೊಂದಿಗೆ ಪ್ರಾರ್ಥನೆ ಮಾಡುತ್ತಿದ್ದೆ ಮತ್ತು ಸುಳ್ಳುಗಾರನ ಸಾವನ್ನು ಬಯಸುತ್ತಿದ್ದೆ ಅಂದಹಾಗೆ ಹಲವು ಬಾರಿ ಅಲ್ಲಾಹನು ನನಗೆ, 'ನೀನು ವಿಜಯ ಸಾಧಿಸುವೆ ಮತ್ತ ಶತ್ರುವನ್ನು ನಶಿಸಿಹೋಗುವನು' ಎಂದು ತಿಳಿಸಿದ್ದನು. ಡೂಯಿ ಸಾಯುವ ಹದಿನೈದು ದಿನಗಳ ಮುಂಚೆ ಅಲ್ಲಾಹನು ತನ್ನ ದಿವ್ಯವಾಣಿಗಳ ಮುಖಾಂತರ ನನಗೆ ನನ್ನ ವಿಜಯದ ಬಗ್ಗೆ ಸುವಾರ್ತೆ ನೀಡಿದ್ದನು. ಅದಕ್ಕೆ ನಾನು "ಖಾದಿಯಾನ್ ಕೆ ಆರ್ಯ ಔರ್ ಹಮ್" ಎಂಬ ಪತ್ರಿಕೆಯ ಮುಖ ಪುಟದ ಮೊದಲನೆಯ ಪುಟದ ಎರಡನೆ ಸಾಲಿನಲ್ಲಿ ಡೂಯಿಯ ಮರಣದ ಎರಡು ವಾರದ ಮುಂಚೆ ಪ್ರಕಟಗೊಳಿಸಿದ್ದೆ ಅದು ಹೀಗಿದೆ:

**ಹೊಸ ಕುರುಹುವಿನ ಬಗ್ಗೆ ಭವಿಷ್ಯವಾಣಿ:**

ಅಲ್ಲಾಹನು ನುಡಿಯುತ್ತಾನೆ ನಾನು ಒಂದು ಹೊಸ ಕುರುಹನ್ನು ಪ್ರಕಟಗೊಳಿಸುವೆನು. ಅದರಲ್ಲಿ ಮಹಾವಿಜಯವಾಗುವುದು ಅದು ಇಡೀ ಲೋಕಕ್ಕೆ ಒಂದು ಕುರುಹು ಆಗುವುದು (ಅಂದರೆ ಇದು ಕೇವಲ ಭಾರತಕ್ಕೆ ಸೀಮಿತವಾಗಿರುವುದಿಲ್ಲ) ಮತ್ತು ಅಲ್ಲಾಹನ ಕೈಗಳಿಂದ ಮತ್ತು ಆಕಾಶದಿಂದ ಸಂಭವಿಸುವುದು, ಪ್ರತಿಯೊಂದು ಕಣ್ಣು ಇದರ ಪ್ರತೀಕ್ಷೆಯಲ್ಲಿರ ಬೇಕು. ಏಕೆಂದರೆ ಅಲ್ಲಾಹನು ಇದನ್ನು ಬಹು ಬೇಗ ಪ್ರಕಟಗೊಳಿಸುವನು, ಅವರು ಹೀಗೆ ಸಾಕ್ಷಿ ನುಡಿಯ ಬೇಕು ಈ ಸೇವಕನಿಗೆ ಎಲ್ಲ ಜನಾಂಗಗಳು ನಿಂದಿಸುತ್ತಿದ್ದಾರೆ ಆತನ ಕಡೆಯಿಂದ ಬಂದಿರುತ್ತಾನೆ ಆತನಿಂದ ಓಳಿತನ್ನು ಗಳಿಸುವನು ಧನ್ಯನಾಗಿದ್ದಾನೆ.

**ಅಲ್‌ಮುಶ್‌ತಹಿರ್**

**ಮಿರ್ಝಾ ಗುಲಾಮ್ ಅಹ್ಮದ್ ಮಸೀಹ್ ಮೌಊದ್.**

**20 ಫೆಬ್ರವರಿ 1907**

ಈಗ ಇಂತಹ ಒಂದು ಕುರುಹು ಪ್ರಕಟಗೊಂಡಿದೆ (ಅದು ಮಹಾವಿಜಯದ ಪ್ರತೀಕವಾಗಿದೆ) ಅದು ಇಡೀ ಲೋಕ ಏಶಿಯ, ಅಮೇರಿಕಾ, ಯೂರೋಪ್ ಮತ್ತು ಭಾರತದವರೆಗೆ ಡೂಯಿಯ ಸಾವಿನ ಕುರುಹು ಒಂದು ಬಹಿರಂಗ ಚಿಹ್ನೆ ಆಗಬಹುದು ಏಕೆಂದರೆ ಇತರೆ ಕುರುಹುಗಳು ನನ್ನ ಭವಿಷ್ಯವಾಣಿಯ ಮುಖಾಂತರ ಪ್ರಕಟಗೊಂಡಿದ್ದವು ಅದು ಕೇವಲ ಪಂಜಾಬ್ ಹಾಗೂ ಭಾರತಕ್ಕೆ ಮಾತ್ರ ಸೀಮಿತವಾಗಿತ್ತು ಅಮೇರಿಕಾ ಮತ್ತು ಯೂರೋಪಿನ ಯಾವುದೇ ವ್ಯಕ್ತಿಗೆ ಅದರ ಪ್ರಕಟಣೆಯ ಸುವಾರ್ತೆಯು ಇರಲಿಲ್ಲ. ಆದರೆ ಈ ಚಿಹ್ನೆ ಪಂಜಾಬ್‌ನಿಂದ ಭವಿಷ್ಯವಾಣಿಯ ರೂಪದಲ್ಲಿ ಪ್ರಕಟಗೊಂಡು ಅಮೇರಿಕಕ್ಕೆ ಹೋಗಿ ಇಂತಹ ವ್ಯಕ್ತಿಯ ಮೇಲೆ ಪೂರ್ಣಗೊಳ್ಳುತ್ತದೆ. ಅಂದರೆ ಆತನಿಗೆ ಅಮೇರಿಕಾ ಮತ್ತು ಯೂರೋಪಿನ ಪ್ರತಿಯೊಂದು ದೇಶದ ಇಂಗ್ಲಿಷ್ ಪತ್ರಿಕೆಗಳಿಗೆ ಸುದ್ಧಿಯನ್ನು ನೀಡಲಾಯಿತು. ಅಂದಹಾಗೆ ಪಯೋನೀರ್ (ಇಲಾಹಬಾದ್‌ನಿಂದ ಹೊರಡುತ್ತದೆ) ಪತ್ರಿಕೆ 11 ಮಾರ್ಚ್ 1907. ಸೋಲ್ ಅಂಡ್ ಮಿಲಿಟರಿ ಗೆಝೆಟ್ (ಲಾಹೋರಿನಿಂದ ಹೊರಡುತ್ತದೆ) ಪತ್ರಿಕೆ 12 ಮಾರ್ಚ್ 1907ರಲ್ಲಿ ಇಂಡಿಯನ್ ಡೈಲಿ ಟೆಲಿಗ್ರಾಫ್ (ಲಖ್‌ನೊನಿಂದ ಹೊರಡುತ್ತದೆ) ಪತ್ರಿಕೆ 12 ಮಾರ್ಚ್ 1907ರಲ್ಲಿ ಈ ಸುದ್ಧಿಯನ್ನು ಪ್ರಸಾರ ಮಾಡಿತು. ಹೀಗೆ ಸುಮಾರು ಇಡೀ ಲೋಕದಲ್ಲಿ ಈ ಸುದ್ಧಿಯನ್ನು ಪ್ರಸಾರ ಗೊಳಿಸಲಾಯಿತು ಮತ್ತು ಸ್ವತಃ ಈ ವ್ಯಕ್ತಿಯು ತನ್ನ ಧರ್ಮದ ಮುಖಾಂತರ ಹೇಗಿದ್ದ ಎಂದರೆ ದೊಡ್ಡ ಮಹರಾಜ ಮತ್ತು ರಾಜಕುಮಾರನ ಹಾಗೆ ತಿಳಿಯಲಾಗುತ್ತಿತ್ತು. ವಿಬ್ ಎಂಬವನು ಅಮೇರಿಕದಲ್ಲಿ ಮುಸ್ಲಿಮಾನನಾದನು ಇವನ ಬಗ್ಗೆ ನನಗೆ ಒಂದು ಕಾಗದ ಬರೆದಿದ್ದನು. ಅಂದರೆ ಡಾ॥ ಡೂಯಿ ಈ ದೇಶದಲ್ಲಿ ಅತೀ ಗೌರವಾನ್ವಿತ ವ್ಯಕ್ತಿ ಆಗಿದ್ದಾನೆ. ಮತ್ತು ರಾಜಕುಮಾರನ ಹಾಗೆ ಜೀವನ ಸಾಗಿಸುತ್ತಿದ್ದಾನೆ. ಅವನು ಅಮೇರಿಕಾ ಹಾಗೂ ಯೂರೋಪಿನಲ್ಲಿ ಗೌರವ ಹಾಗೂ ಪ್ರಸಿದ್ಧಿಯನ್ನು ಗಳಿಸಿದ್ದರೂ ಸಹ ಅಲ್ಲಾಹನ ಅನುಗ್ರಹದಿಂದ ನನ್ನ ಮುಬಾಹಲದ ಶೀರ್ಷಿಕೆ ಆತನ ವಿರುದ್ಧ ಅಮೇರಿಕದ ದೊಡ್ಡ ದೊಡ್ಡ ಹೆಸರಾಂತ ದಿನ ಪತ್ರಿಕೆಗಳು ಪ್ರಕಟಿಸಿತು. ಇಡೀ ಅಮೇರಿಕ ಮತ್ತು ಯೂರೋಪಿನಲ್ಲಿ ಪ್ರಚಾರಗೊಳಿಸಿತು. ಈ ಸಾಮಾನ್ಯ ಪ್ರಕಟಣೆಯ ನಂತರ ಸಾವು ಮತ್ತು ವಿನಾಶಕ್ಕೆ ಸಂಬಂಧಿಸಿದ ಭವಿಷ್ಯವಾಣಿಯಲ್ಲಿ ಸುವಾರ್ತೆಯನ್ನು ನೀಡಲಾಗಿತ್ತು. ಅದು ಎಂತಹ ಸ್ಪಷ್ಟತೆಯಿಂದ ಪೂರ್ಣಗೊಂಡಿತು ಎಂದರೆ ಅದಕ್ಕಿಂತ ಮಿಗಿಲಾದ ಪರಿಪೂರ್ಣ ರೂಪವಾಗಿ ಪ್ರಕಟವಾಗಲು ಸಾಧ್ಯವಿಲ್ಲ. ಆತನ ಜೀವನದ ಪ್ರತಿಯೊಂದು ವಿಷಯದಲ್ಲಿ ಸಮಸ್ಯೆ ತಲೆದೂರಿತು. ಆತನು ವಂಚಕನು ಎಂದು ಸಾಬೀತಾಯಿತು ಮತ್ತು ಆತನು ತನ್ನ ಬೋಧನೆಗಳಲ್ಲಿ ಮದ್ಯಪಾನವನ್ನು ನಿಷೇಧಗೊಳಿಸಿದ್ದನು. ಆದರೆ ಅವನು ಸ್ವತಃ ಮದ್ಯಪಾನ ಸೇವಿಸುತ್ತಿದ್ದನು ಎಂದು ಸಾಬೀತುಗೊಂಡಿತು. ಮತ್ತು ಆತನು ತನ್ನ ಅಭಿವೃದ್ಧಿಪಡಿಸಿದ ನಗರ 'ಸೈಹೂನ್'ನಿಂದ ಅವನನ್ನು ಹೊರಹಾಕಲಾಯಿತು. ಆ ನಗರವನ್ನು ಆತನು ಹಲವು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅಭಿವೃದ್ಧಿಗೊಳಿಸಿದ್ದನು. ಅದರೊಂದಿಗೆ ಆತನಲ್ಲಿದ್ದ ಏಳು ಕೋಟಿ ರುಪಾಯಿ ನಗದಿಗೆ ಉತ್ತರ ನೀಡಬೇಕಾಯಿತು. ಆತನ ಹೆಂಡತಿ ಮತ್ತು ಮಗ ಆತನ ಶತ್ರುಗಳಾದರು, ಆತನ ತಂದೆಯು ಆತನನ್ನು ಅಕ್ರಮ ಸಂಬಂಧದಿಂದ ಜನಿಸಿದ್ದನು ಎಂದು ಪ್ರಚಾರ ಪಡಿಸಿದ್ದನು. ಹೀಗೆ ಆತನು ಜಾತಿಯಲ್ಲಿ ಅಕ್ರಮ ಜನನ ಎಂದು ಸಾಬೀತಾಯಿತು. ಮತ್ತು ಆತನು ನಾನು ರೋಗಿಗಳನ್ನು ಪವಾಡಗಳಿಂದ ಗುಣಪಡಿಸುವೆನು ಎಂಬ ಈ ದಾವೆಗಳೆಲ್ಲ ಆತನ ಮೋಸಗಳು, ಸುಳ್ಳೆಂದು ಸಾಬೀತಾಯಿತು. ಪ್ರತಿಯೊಂದು ರೀತಿಯ ಅವಮಾನ ಆತನಗೆ ಉಂಟಾಯಿತು. ಕೊನೇಗೆ ಆತನಿಗೆ ಪಾರ್ಶ್ವವಾಯು ತಗುಲಿತು. ಆತನನ್ನು ಕೆಲವು ಜನ ಒಂದು ಹಲಗೆಯಂತೆ ಎತ್ತಿಕೊಂಡು ಹೋಗುತ್ತಿದ್ದರು. ಬಹಳ ದುಃಖದಿಂದ ಹುಚ್ಚನಾದನು. ಪ್ರಜ್ಞೆಯು ಇರಲಿಲ್ಲ, ಆತನ ಈ ದಾವೆಯಾದ ಇನ್ನೂ ನನಗೆ ದೊಡ್ಡ ಆಯಸ್ಸು ಇದೆ, ನಾನು ದಿನೇ ದಿನೇ ಯುವಕನಾಗುತ್ತಾ ಹೋಗುತ್ತೇನೆ, ಜನರು ಮುದುಕರಾಗುತ್ತಾರೆ, ಇವೆಲ್ಲವೂ ಸಹ ಮೋಸ ಎಂದು ಸಾಬೀತಾಯಿತು. ಕೊನೇಗೆ 1907ರ ಮಾರ್ಚ್ ಮೊದಲನೆಯ ವಾರದಲ್ಲಿ ದೊಡ್ಡ ನರಾಶೆ, ನೋವು ಹಾಗೂ ದುಃಖದೊಂದಿಗೆ ಮರಣ ಹೊಂದಿದನು.

ಈಗ ವ್ಯಕ್ತವಾದ ಸಂಗತಿ ಏನೆಂದರೆ ಇದಕ್ಕಿಂತ ದೊಡ್ಡ ಪವಾಡ ಯಾವುದಾಗಿದೆ ಏಕೆಂದರೆ ನನ್ನ ಪ್ರಮುಖ ಕಾರ್ಯವು ಶಿಲುಭೆ ಮುರಿಯುವುದಾಗಿದೆ. ಹೀಗೆ ಆತನ ಸಾವಿನಿಂದ ಒಂದು ಶಿಲುಭೆಯ ದೊಡ್ಡ ಭಾಗ ಮುರಿದಿದೆ ಏಕೆಂದರೆ ಆತನು ಇಡೀ ಲೋಕದಿಂದ ದೊಡ್ಡ ಮಟ್ಟದ ಶಿಲುಭೆಯ ಬೆಂಬಲಿಗನಾಗಿದ್ದನು ಆತನು ಪ್ರವಾದಿಯಾಗಿರುವುದಾಗಿ ದಾವೆಯನ್ನು ಮಾಡುತ್ತಿದ್ದನು ಮತ್ತು ನನ್ನ ಪ್ರಾರ್ಥನೆಯಿಂದ ಎಲ್ಲಾ ಮುಸ್ಲಿಮರು ನಾಶಗೊಳ್ಳುವರು ಎಂದು ಹೇಳುತ್ತಿದ್ದನು. ಇಸ್ಲಾಮ್ ಅಳಿಸಿಹೋಗುತ್ತದೆ ಮತ್ತು ಖಾನ ಕಅ್‌ಬ ಹಾಳುಬೀಳುವುದು ಎಂದು ಹೇಳುತ್ತಿದ್ದನು ಆದ್ದರಿಂದ ಅಲ್ಲಾಹನು ಆತನನ್ನು ನನ್ನ ಕೈಯಾರೆ ಸಾಯಿಸಿದನು. ಆತನ ಸಾವಿನಂದ ಹಂದಿ ಕೊಲ್ಲುವ ಬಗ್ಗೆ ಭವಿಷ್ಯವಾಣಿಯು ಬಹು ಸ್ಪಷ್ಟವಾಗಿ ಪೂರ್ಣಗೊಂಡಿದೆ ಎಂದು ನನಗೆ ತಿಳಿದಿದೆ ಏಕೆಂದರೆ ಈ ವ್ಯಕ್ತಿಗಿಂತ ಹೆಚ್ಚು ಅಪಾಯಕಾರಿ ಯಾರಿದ್ದಾರೆ ಆತನು ಸುಳ್ಳು ಪ್ರವಾದಿಯ ದಾವೆಯನ್ನು ಮಾಡಿದನು ಮತ್ತು ಹಂದಿಯ ಹಾಗೆ ಸುಳ್ಳಿನ ಗಲೀಜನ್ನು ತಿಂದನು. ಅವನು ಸ್ವತಃ ಬರೆದಿದ್ದಾನೆ ಅವನೊಂದಿಗೆ ಸುಮಾರು ಒಂದು ಲಕ್ಷ ಜನರಿದ್ದಾರೆ ಅವರು ದೊಡ್ಡ ದೊಡ್ಡ ಶ್ರೀಮಂತರಾಗಿದ್ದರು. ಇಲ್ಲಿ ಸತ್ಯಸಂಗತಿ ಏನೆಂದರೆ ಮುಸೈಲಮ ಕಝ್ಝಾಬ್ ಮತ್ತು ಅಸ್ವದ್ ಅನ್ಸಿ ಅವರ ಅಸ್ಮಿತ್ಯವು ಇವನ ಮುಂದೆ ಏನೂ ಇಲ್ಲ ಇವನಿಗಿರುವ ಗೌರವ ಹಾಗೆ ಅವರಿಗೆ ಇರಲಿಲ್ಲ. ಇವನ ಹಾಗೆ ಅವರ ಬಳಿ ಕೊಟ್ಯಂತ ರೂಪಾಯಿಗಳು ಅವರ ಬಳಿ ಇರಲಿಲ್ಲ. ನಾನು ಪ್ರಮಾಣ ಮಾಡಿ ಹೇಳುತ್ತೇನೆ ಈತನು ಅದೇ ಹಂದಿ ಆಗಿದ್ದಾನೆ ಅದರ ಕೊಲೆಯ ಬಗ್ಗೆ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮರು ನುಡಿದಿದ್ದಾರೆ ಮಸೀಹ್ ಮೌಊದ್‌ರ ಕೈಯಲ್ಲಿ ಸಾಯುವನು ಎಂದು. ಒಂದು ವೇಳೆ ನಾನು ಇವನಿಗೆ ಮುಬಾಹಲಗೆ ಕರೆಯದೆ ಇದ್ದರೆ ಮತ್ತು ಒಂದು ವೇಳೆ ನಾನು ಆತನ ವಿರುದ್ಧ ಪ್ರಾರ್ಥನೆ ಮಾಡದಿದ್ದರೆ ಮತ್ತು ಆತನಗೆ ಸಾವಿನ ಭವಿಷ್ಯವಾಣಿ ಪ್ರಕಟಗೊಳಿಸದಿದ್ದರೆ ಆತನ ಸಾವು ಇಸ್ಲಾಮಿನ ಸತ್ಯತೆಗೆ ಯಾವುದೇ ಸಾಕ್ಷ್ಯವಾಗುತ್ತಿರಲಿಲ್ಲ. ಆದರೆ ನಾನು ನೂರಾರು ಪತ್ರಿಕೆಗಳಲ್ಲಿ ಮುಂಚಿತವಾಗಿಯೇ ಪ್ರಕಟಗೊಳಿಸದಿದ್ದೇನೆ ಅಂದರೆ ಆತನು ನನ್ನ ಜೀವನದಲ್ಲಿಯೆ ಸಾಯುವನು ಮತ್ತು ನಾನು ಮಸೀಹ್ ಮೌಊದ್ ಆಗಿದ್ದೇನೆ ಮತ್ತು ಡೂಯಿ ಕಝ್ಝಾಬ್ ಆಗಿದ್ದನೆ ಮತ್ತು ಈ ಸಾಕ್ಷ್ಯವನ್ನು ಪದೇ ಪದೇ ಹೀಗೆ ಬರೆಯಲಾಗಿದೆ ಆತನು ನನ್ನ ಜೀವನದಲ್ಲಿ ಅವಮಾನ ಮತ್ತು ನಿರಾಶೆಯೊಂದಿಗೆ ಸಾವನ್ನು ಹೊಂದುವನು. ಹೀಗೆ ಆತನು ನನ್ನ ಜೀವನದಲ್ಲಿಯೇ ಮರಣ ಹೊಂದಿದನು ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಭವಿಷ್ಯವಾಣಿಯನ್ನು ಸತ್ಯಗೊಳಿಸುವ ಸ್ಪಷ್ಟವಾದ ಮತ್ತು ಇದಕ್ಕಿಂತ ಮಿಗಿಲಾದ ಪವಾಡ ಮತ್ತೆ ಯಾವುದಿದೆ? ಈಗ ಇದನ್ನು ನಿರಾಕರಿಸುವವನೇ ಸತ್ಯವಿರೋಧಿ ಆಗಿರುತ್ತಾನೆ. **ವಸ್ಸಲಾಮ್ ಅಲಾ ಮನತ್ತಬಅಲ್ ಹುದಾ.**

*****************

**ಪುಟ ಸಂಖ್ಯೆ 01ರ ಉಳಿದ ಭಾಗ**

ಇಸ್ಲಮಿನ ವಿಶ್ವಾಸಿಕ ಹಾಗೂ ವಿಧಿಬದ್ಧ ಗ್ರಂಥಗಳ ಎದುರಾಗಿ ಸತ್ಯದ ವಿಷಯದ ಬಗ್ಗೆ ಕುರಿತು ಇಸ್ಲಮಿನ ಶಿಕ್ಷಣದ ಅರ್ಧದಷ್ಟು ಇಲ್ಲದಿದ್ದರೂ ಮೂರರ ಒಂದು ಭಾಗದಷ್ಟಾದರೂ ತಮ್ಮ ಗ್ರಂಥಗಳಿಂದ ಪ್ರಸ್ತುತ ಪಡಿಸಬೇಕು. (ತಾರೀಖೆ ಅಹ್ಮದಿಯತ್, ಸಂಪುಟ–1, ಪುಟ–118)

7 ಡಿಸಂಬರ್ 1877ರ ಒಂದು **"ವಕೀಲ್ ಹಿಂದುಸ್ತಾನ್"** ಮತ್ತು ಇತರ ವಾರ್ತಾ ಪತ್ರಿಕೆಗಳಲ್ಲಿ ಆರ್ಯ ಸಮೂದಾಯದ ನೇತಾರರಾದ ಸ್ವಾಮಿ ದಯಾನಂದ್‌ರವರು ರೂಹ್(ಆತ್ಮ)ದ ಕುರಿತು ತನ್ನ ಈ ವಿಶ್ವಾಸವನ್ನು ಪ್ರಕಟಿಸಿದನು. "ಪ್ರಸ್ತುತ ಆತ್ಮಗಳು ಅಂತ್ಯವಿಲ್ಲದ್ದಾಗಿವೆ ಮತ್ತು ಎಷ್ಟೊಂದು ಅಸಂಖ್ಯಾತರಲ್ಲಿದ್ದಾರೆ ಎಂದರೆ ಪರಮೇಶ್ವರನಿಗೂ ಇವರ ಸಂಖ್ಯೆ ತಿಳಿದಿರಲಿಕ್ಕಿಲ್ಲ. ಆದ್ದರಿಂದ ಸದಾ ಮುಕ್ತಿ ಪಡೆಯುತ್ತಿರುತ್ತವೆ ಮತ್ತು ಪಡೆಯುತ್ತಿರ ಬಹುದು ಆದರೆ ಅದು ಎಂದೂ ಕೊನೆಗೊಳ್ಳುವುದಿಲ್ಲ."

ಇದು ಅಲ್ಲಾಹನ ಬಹುದೊಡ್ಡ ಅಪಮಾನವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಇದನ್ನು ಸಹಿಸಲು ಸಾಧ್ಯವಾಗಿರಲಿಲ್ಲ. ಅವರು(ಅ) ಸರಣಿಯ ರೂಪದಲ್ಲಿ ಪ್ರಬಂಧಗಳ ಮೂಲಕ ಅದರ ತಕ್ಕುದಾದ ಉತ್ತರವನ್ನು ನೀಡಿದರು. ಆ ಮೂಲಿಕ ಈ ಮಿಥ್ಯವಿಶ್ವಾಸದ ವಾಸ್ತಿಕತೆಯನ್ನು ಬಿಚ್ಚಿಟ್ಟರು. ಅವರು(ಅ) ಪಂಥಾಹ್ವಾನ ನೀಡಿದರು:

ಸ್ವಾಮಿ ದಯಾನಂದರು ತಮ್ಮ ಶಿಷ್ಯಂದಿರ ಒಳಗೂಡಿ ಇದನ್ನು ಸಾಬೀತು ಪಡಿಸಬೇಕು. ಆತ್ಮಗಳು ಅಂತ್ಯವಿಲ್ಲದ್ದಾಗಿವೆ ಮತ್ತು ಪರಮೇಶ್ವರನಿಗೂ ಅದರ ಸಂಖ್ಯೆ ತಿಳಿದಿರಲಿಲ್ಲ ಎಂಬುದು. ಹಾಗೆ ನಾನು ಅವರಿಗೆ 500 ರೂಪಾಯಿಗಳ ಬಹುಮಾನವನ್ನು ನೀಡುವೆನು.

"ಇದು ಧಾರ್ಮಿಕ ಲೋಕದಲ್ಲಿ ಆರ್ಯ ಸಮಾಜದ ವಿರುದ್ಧ ತಾವು ಪ್ರಸ್ತುತ ಪಡಿಸಿದ ಮೊದಲನೇಯ ಬಹುಮಾನವಗಿತ್ತು. ಈ ವಿಷಯದ ಆರ್ಯ ಸಮಜದವರಲ್ಲಿ ತಳಮಳ ಹುಟ್ಟಿಸಿತು. ಲಾಹೋರ್‌ನ ಆರ್ಯ ಸಮಾಜದ ಕಾರ್ಯದರ್ಶಿ ಲಾಲಾಜೀವನದಾಸ ಅವರಿಗೆ ಸ್ವಾಮಿ ದಯಾನಂದರವರ ಮುಖಂಡತ್ವದ ವಿರುದ್ಧ ದಂಗೆ ಹೇಲುತ್ತಾ ಅತ್ಯಂತ ಮೂರ್ಚಾವಸ್ಥೆಯಲ್ಲಿ ಈ ಘೋಷಣೆಯನ್ನು ಮಾಡಿ ಹಿಂಜರಿಯಬೇಕಾಯಿತು. "ಈ ಸಮಸ್ಯೆಯು ಆರ್ಯ ಸಮಾಜದ ತತ್ವಗಳಿಗೆ ಒಳಪಡುವುದಿಲ್ಲ. ಆರ್ಯ ಸಮಾಜದ ಯಾವೊಬ್ಬ ಸದಸ್ಯರು ಇದನ್ನು ಒಪ್ಪುವುದಾದರೆ ಅವನಗೆ ಈ ಪ್ರಶ್ನೆ ಮಾಡಬೇಕಾಗಿದೆ ಮತ್ತು ಅವನೇ ಉತ್ತರ ನೀಡಲು ಜವಾಬ್ದಾರನಗುತ್ತಾನೆ." (ತಾರಿಖೆ ಅಹ್ಮದಿಯತ್, ಸಂಪುಟ–1, ಪುಟ–153)

1880 ರಿಂದ 1884ರವೆಗೆ ಬರಾಹೀನೆ ಅಹ್ಮದಿಯಾದ ನಾಲ್ಕು ಸಂಪುಟಗಳು ಪ್ರಕಟವಾದವು. ಇದು ಅವರು(ಅ) ಮೊದಲನೇಯ ಜಾಗತಿಕ ಪ್ರಸಿದ್ಧಿ ಪಡೆದ ಗ್ರಂಥವಾಗಿದೆ. ಇದು ಕ್ರೈಸ್ತರು, ಆರ್ಯ ಸಮಾಜದವರು ಮತ್ತು ಬ್ರಹ್ಮ ಸಮಾಜದವರು ಅತ್ಯಂತ ಸುವ್ಯವಸ್ಥಿತ ರೀತಿಯಲ್ಲಿ ಇಸ್ಲಾಮಿನ ಮೇಲೆ ಅರೋಪಗಳ ಸುರಿಮಳೆಗಯ್ಯುವ ಕಾಲವಾಗಿತ್ತು ಇಸ್ಲಾಮ್ ಧರ್ಮವು ಈ ಆಕ್ರಮಣಗಳಿಗೆ ಗುರಿಯಾಗಿ ಅತ್ಯಂತ ದುರ್ಬಲ ಅವಸ್ಥೆಗೆ ತಲುಪಿತು. ಆಗ ಬರಾಹೀನೆ ಅಹ್ಮದಿಯಾ ಗ್ರಂಥವು ಸಾರ್ವಜನಕಗೊಂಡ ಕಾರಣ ಮುಸಲ್ಮಾನರ ಜೀವದಲ್ಲಿ ಜೀವ ಬಂದಂತಾಯಿತು. ಅವರು(ಅ) ಎಲ್ಲಾ ಧರ್ಮಗಳ ಎದುರಿನಲ್ಲಿ ಇಸ್ಲಾಮ್ ಧರ್ಮದ ಸತ್ಯವನ್ನು ಸಾಬೀತು ಪಡಿಸಲು ಈ ಗ್ರಂಥವನ್ನು ಬರೆದಿದ್ದರು. ಅದನ್ನು 300 ವಿವೇಕಪೂರ್ಣ ಹಾಗೂ ಶಕ್ತಿಯುತ ಪರಾವೆಗಳಿಂದ ಸಜ್ಜುಗೊಳಿಸಿದರು. ಅವರು(ಅ) ಪಂಥಾಹ್ವಾನ ನೀಡಿದರು ಯಾರೊಬ್ಬರು ಈ ಪುರಾವೆಗಳನ್ನು ಅಲ್ಲಗಳೆದು ತೋರಿಸುವರೊ ಅವು ಅರ್ಧದಷ್ಟೆ ಆಗಲಿ ಅಥವಾ ಐದನೇ ಭಾಗದಷ್ಟೆ ಆಗಲಿ ಅಲ್ಲಗಳೆದು ತೋರಿಸಿದರೆ ಅವನನ್ನು ನಾನು 10000/– ರೂಪಾಯಿಗಳ ಬಹುಮಾನ ನೀಡುವೆನು.

ಈ ಗ್ರಂಥದಿಂದ ಮುಸಲ್ಮಾನರ ಮುಖವು ಪ್ರಕಾಶಿತಗೊಂಡಿತು. ಇಸ್ಲಾಮ್ ಧರ್ಮವನ್ನು ಘನತೆಯಿಂದ ರಕ್ಷಣೆ ಮಾಡುವಂತಹ ಒಬ್ಬ ಪೈಲ್ವಾನ ಹುಟ್ಟಿದ್ದಾನೆಂದು ಕೃತಜ್ಞರಾದರು. ವಾಸ್ತವವಾಗಿ ಹೇಳಬೇಕಾದರೆ ಹಝ್ರತ್ ಮಸೀಹ್ ಮೌಊದ್(ಅ) ಇಸ್ಲಾಮಿನ ಮೇಲೆ ಎರಗಿಬಂದ ಆರೋಪಗಳ ರಕ್ಷಣೆಯಷ್ಟೆ ಮಾಡಲಿಲ್ಲ. ಬದಲಾಗಿ ಇಸ್ಲಾಮಿನ ಸತ್ಯತೆಯನ್ನು ಕುರಿತು ನಿರಾಕರಿಸಲಾರದಂತಹ ಪುರಾಮೆಗಳನ್ನು ಒದಗಿಸಿ ಆಕ್ರಮಣ ಶೀಲರಾದರೆ ವಿರೋಧಿಗಳಿಗೆ ದೋಚದಂತಾಯಿತು. ಪ್ರತಿಯೊಬ್ಬ ವಿದ್ಯಾವಂತ ಮುಸಲ್ಮಾನನು ಬರಹೀನೆ ಅಹ್ಮದಿಯಾದ ಅಧ್ಯಾಯನ ಮಾಡುವುದು ಅವಶ್ಯಕವೆಂದು ಭಾವಿಸತೊಡಗಿದರು. ಮತ ಪಂಡಿತರು ಅದರ ಮೇಲೆ ಅಮೋಘವಾದ ಟಿಪ್ಪಣಿಗಳನ್ನು ಬರೆದರು. ಮೌಲವಿ ಮುಹಮ್ಮದ್ ಹುಸೇನ್ ಬಟಾಲವಿಯು ಹೀಗೆ ಬರೆದರು: 1400 ವರ್ಷಗಳಲ್ಲಿ ಈ ರೀತಿಯ ಗ್ರಂಥ ಕಾಣಲು ಸಾಧ್ಯವಿಲ್ಲ ಸಾಧ್ಯವಾಗುವುದೂ ಇಲ್ಲ ಯಾರೊಬ್ಬರು ನನಗೆ ತೋರಿಸಿಕೊಡಲಿ ಅದರಲ್ಲಿ ಎಷ್ಟೊಂದು ಶಕ್ತಿಯುತ ರೀತಿಯಲ್ಲಿ ಅನ್ಯ ಧರ್ಮಗಳ ವಿರುದ್ಧ ಬರೆಯಲ್ಪಟ್ಟಿರಬೇಕು. ಲುಧಿಯಾನದ ಸೂಫಿ ಅಹ್ಮದ್ ಜಾನ್ ಸಾಹೆಬ್ ಹೀಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಈ ಗ್ರಂಥದ ಮೇಲೆ ಮೋಹಿತರದರು. ಅವರು ತಮ್ಮ ಒಂದು ಕವನ ಪಂಕ್ತಿಯಲ್ಲಿ ಹೀಗೆ ಹೇಳಿದರು:

**"ಹಮ್ ಮರೀಝೋಂ ಕೆ ಹೈ ತುಮ್‌ಹಿ ಪೆ ನಝರ್, ತುಮ್ ಮಸೀಹ ಬನೊ ಖುದಾ ಕೆ ಲಿಏ"** (ರೋಗಿಗಳಾದ ನಮ್ಮ ದೃಷ್ಟಿಯು ನಿಮ್ಮ ಮೇಲೆಯೇ ಇದೆ. ಅಲ್ಲಾಹನಗೋಸ್ಕರ ನೀವು ಮಸೀಹರಾಗಿರಿ)

ಬರಾಹೀನೆ ಅಹ್ಮದಿಯಾದ ಸುಂದರತೆ ಮತ್ತು ಅದರ ಪ್ರಾಮುಖ್ಯತೆ ಹಾಗೂ ಅದರ ಉತ್ತರ ನೀಡಲು ಹತ್ತು ಸಾವಿರ ರುಪಾಯಿಗಳ ಬಹುಮಾನದ ಪಂಥಾಹ್ವಾನ ಕುರಿತು ಸಯ್ಯದುನ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲವು ಅಧ್ಯಾಪನೆಗಳು ಪ್ರಸ್ತುತವಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

**ಹತ್ತು ಸಾವಿರ ರೂಪಾಯಿಗಳ ಬಹುಮಾನದ ಪಂಥಹ್ವಾನ**

ಅಲ್ಲಾಹನು ಈ ವಿನೀತನಾದ ದಾಸನನ್ನು ಈ ಕಾಲದಲ್ಲಿ ಜನ್ಮ ನೀಡಿ ನೂರಾರು ದೈವಿಕ ದೃಷ್ಟಾಂತಗಳನ್ನು ಮತ್ತು ಅಗೋಚರ ಪವಾಡಗಳನ್ನು ಹಾಗೂ ಆಧ್ಯಾತ್ಮಿಕ ಜ್ಞಾನದಿಂದ ತುಂಬಿದ ಸಾಕ್ಷ್ಯಗಳನ್ನು ಕರುಣಿಸಿ ನೂರಾರು ಪುರಾವೆಗಳು ವದಗಿಸಿ ನಿಶ್ಚಯಿಸಿದನು. ಪವಿತ್ರ ಖುರ್‌ಆನ್ ಸತ್ಯಸಾಕ್ಷಿಗಳ ಒಳಗೊಂಡ ಶಿಕ್ಷಣವು ಪ್ರತಿ ಸಮೂದಾಯಕ್ಕೂ, ಪ್ರತಿ ದೇಶಕ್ಕೂ ತಿಳಿಯ ಪಡಿಸಬೇಕು ಮತ್ತು ಜಾರಿಗೊಳಿಸಬೇಕು ಮತ್ತು ತನ್ನ ವಾದವನ್ನು ಪೂರ್ಣಗೊಳಿಸಬೇಕು. ಈ ನಿಶ್ಚಯದಿಂದಲೇ ಅಲ್ಲಾಹನು ಈ ವಿನಿತನಿಗೆ ಈ ಭಾಗ್ಯವನ್ನು ನೀಡಿದ್ದಾನೆ **ಇನ್ನಮಾಮಲ್ಲಿಲ್ಲುಹ್ಜತ್** 10000 ರೂಪಾಯಿಗಳ ಜಾಹಿರಾತು ಈ ಗ್ರಂಥದ ಜೊತೆಯಲ್ಲಿ ಪ್ರಕಟಿಸಬೇಕಾಯಿತು. ಶತ್ರುಗಳ ಹಾಗೂ ವಿರೋಧಿಗಳ ಸಾಕ್ಷ್ಯದೊಂದಿಗೆ ದೈವಿಕ ದೃಷ್ಟಾಂತಗಳನ್ನು ಪ್ರಸ್ತುತ ಪಡಿಸಲಾಯಿತು. ಅದರ ಕುರಿತು ಆರೋಪ ವ್ಯಕ್ತದಂತೆ ಹಾಗೂ ಪ್ರತಿವಾದ ಮಾಡದಂತೆ ಎಲ್ಲಾ ವಿರೋಧಿಗಳನ್ನು ಸಂಬೋಧಿಸಲಾಯಿತು ಏಕೆಂದರೆ ಯಾರಿಗೂ ವಾದಿಸಲು ಸಮಯ ನೀಡಲಿಲ್ಲ ಎಂದಾಗಬಾರದು. (ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಯೀಮ್, ಸಂಪುಟ–1, ಪುಟ–596, ಅಡಿಟಿಪ್ಪಣಿ–3)

**ಲಿಯುಝ್‌ಹಿರಹು ಅಲದ್ದೀನಿ ಕುಲ್ಲಿಹಿ ಭವಿಷ್ಯವಾಣಿಯು ಬರಾಹೀನನಿಂದಾಗಿ ಪೂರ್ಣಗೊಂಡಿದೆ**

ಅಲ್ಲಾಹನು ವಿಶೇಶವಾದ ಮಾರ್ಗಗಳಿಂದ ಈ ವಿನೀತನನ್ನು ವೈಶಿಷ್ಟತೆ ದಯೆಪಾಲಿಸಿದ್ದಾನೆ. ಹಾಗೆಯೇ ಈ ವಿನೀತನನ್ನು ಇಂತಹದೊಂದು ಕಾಲದಲ್ಲಿ ಜನ್ಮ ನೀಡಿದ್ದಾನೆ ಅದು ಪ್ರಚಾರ ಸೇವೆಯಲ್ಲಿ ಅತ್ಯಂತ ಸಹಾಯಕರವಾಗಿದೆ ಆದ್ದರಿಂದ ಅವನು ತನ್ನಲ್ಲಿ ಔದಾರ್ಯಗಳಿಂದಲೂ, ಅನುಗ್ರಹಗಳಿಂದಲೂ, ಸಹಾಯವನ್ನು ನೀಡಿದ್ದಾನೆ. ಆದಿ ಕಾಲದಿಂದಲೂ ಇದು ನಿಶ್ಚಯಿಸಲ್ಪಟ್ಟಿದೆ ಅದಕ್ಕೆ ಮೇಲೆ ವಿವರಿಸಿದ ವಚನ ಅಂದರೆ **ಲಿಯುಝ್‌ಹಿರಹು ಅಲದ್ದಿನಿ ಕುಲ್ಲಿಹಿ** ಮತ್ತು ವಚನ **ವಲ್ಲಾಹು ಮುತಿಮ್ಮು ನೂರಿಹಿ** ಆದ್ಯಾತ್ಮಿಕ ರೀತಿಯಲ್ಲಿ ಈ ವಿನೀತನು ಸಾಕ್ಷಿ ಆಗಿದ್ದೇನೆ. ಅಲ್ಲಾಹನು ಈ ಪುರಾವೆಗಳನ್ನು ಮತ್ತು ಎಲ್ಲಾ ಮಾತುಗಳು ತನ್ನ ವಿರೋಧಿಗಳ ಪೈಕಿ ಬರೆದಿದ್ದೇನೆ. ಅವು ವಿರೋಧಿಗಳವರೆಗೂ ತಲುಪಿಸುವನು. ಅವರು ಇದರ ಉತ್ತರ ಕೊಡಲು ಅಸಮರ್ಥರಾಗುವರು. ಆ ಮೂಲಕ ಮೇಲೆ ವಿವರಿಸಿದ ವಚನವು ವಿಜಯವು ಲೋಕದಲ್ಲಿ ಬಹಿರಂಗವಾಗುವುದು. **ಫಲ್‌ಹಮ್‌ದುಲಿಲ್ಲಾಹ ಅಲಾ ಝಾಲಿಕ್**. (ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಯೀಮ್, ಸಂಪುಟ–1, ಪುಟ–596, ಅಡಿಟಿಪ್ಪಣಿ 3)

ಓದುಗರೇ!! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಹೇಳಿದ್ದರು: ಬರಾಹೀನಿನ ಉತ್ತರವು ಅಂತ್ಯದಿನದವರೆಗೂ ಕೊಡಲು ಸಾಧ್ಯವಿಲ್ಲ. 140 ವರ್ಷಗಳು ಕಳೆದವು ಆದರೆ ಯಾರೊಬ್ಬರೂ ಇದರ ಉತ್ತರವನ್ನು ಕೊಡಲಿಲ್ಲ. ಅದರಿಂದ ಮುಕ್ತಿ ಪಡೆಯಲು ನಿಜವಾಗಿಯು ಅಂತ್ಯದಿನದವರೆಗೂ ಭಾಗ್ಯಲಭಿಸಲಿಕ್ಕಿಲ್ಲ.

**(ಮನ್‌ಸೂರ್ ಅಹ್ಮದ್ ಮಸ್‌ರೂರ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.